ಶನಿವಾರ, ಆಗಸ್ಟ್ 28, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಹಾಯವಾಣಿ

ಸಿಇಟಿಗೆ ಪೂರ್ವಭಾವಿಯಾಗಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಸ್ಥಾಪಿಸಿರುವ ಸಹಾಯವಾಣಿ ಕೇಂದ್ರದಲ್ಲಿ ಶುಕ್ರವಾರ ವಿದ್ಯಾರ್ಥಿಗಳ ಕರೆಗಳಿಗೆ ಸಿಬ್ಬಂದಿ ಸ್ಪಂದಿಸಿದರು



ರಾಜ್ಯದ ಸಚಿವರು, ಅಧಿಕಾರಿಗಳ ಜತೆ ಸಭೆ ನಡೆಸಿದ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ

‘ಕೃಷಿ ಉತ್ಪನ್ನಗಳ ರಫ್ತು ಉತ್ತೇಜನಕ್ಕೆ ಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಆದಾಯ ದ್ವಿಗುಣಗೊಳಿಸುವುದಕ್ಕೆ ಪೂರಕವಾಗಿ ಕೃಷಿ ಉತ್ಪನ್ನಗಳ ರಫ್ತಿಗೆ ಉತ್ತೇಜಿಸಲು ರಾಜ್ಯದಲ್ಲಿ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಕೃಷಿಕರ ಆದಾಯ ಹೆಚ್ಚಿಸಲು ಕಾರ್ಯತಂತ್ರ ರೂಪಿಸುವ ಸಂಬಂಧ ರಾಜ್ಯದ ಸಚಿವರು, ಕೃಷಿ, ತೋಟಗಾರಿಕೆ ಮತ್ತು ಪಶು ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಮತ್ತಿತರ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕೃಷಿ ಉತ್ಪನ್ನಗಳ ರಫ್ತು ವಹಿವಾಟನ್ನು ಸುಲಲಿತಗೊಳಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಪ್ರತ್ಯೇಕವಾದ ಕೋಶವನ್ನು ಆರಂಭಿಸುವಂತೆ ಕೈಗಾರಿಕಾ ಸಚಿವರನ್ನು ಕೋರಲಾಗುವುದು. ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ರಫ್ತಿಗೆ ಅಗತ್ಯವಿರುವ ನೆರವು ಒದಗಿಸಲಾಗುವುದು ಎಂದರು.

ಆಂಧ್ರಪ್ರದೇಶದ ಮಾದರಿಯಲ್ಲಿ ಗ್ರಾಮಗಳ ಹಂತದಲ್ಲಿ ಕೃಷಿ ಉತ್ಪನ್ನ ಹಾಗೂ ಕೃಷಿ ಪರಿಕರಗಳ ಮಾರುಕಟ್ಟೆ ತೆರೆಯುವ ಯೋಜನೆ, ತಮಿಳುನಾಡಿನ ಮಾದರಿಯಲ್ಲಿ ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆಗೆ ಶೈತ್ಯಾಗಾರಗಳ ಸ್ಥಾಪನೆ, ಒಳನಾಡು ಮೀನುಗಾರಿಕೆಗೆ ಉತ್ತೇಜನ, ಸಿರಿ ಧಾನ್ಯಗಳ ಉತ್ಪಾದನೆ ಹೆಚ್ಚಳ, ಅಂತರರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಕೃಷಿ ಉತ್ಪನ್ನಗಳ ಗುಣಮಟ್ಟ ಹೆಚ್ಚಳಕ್ಕೆ ಪೂರಕವಾದ ಯೋಜನೆಗಳನ್ನು ರೂಪಿಸಲಾಗುವುದು ಎಂದರು.

ಮೂರು ವರ್ಷಗಳಲ್ಲಿ 750 ಅಮೃತ ಕೃಷಿ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ. ಒಂದು ವರ್ಷದೊಳಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಒಂದರಂತೆ ಕೃಷಿ ಉತ್ಪಾದಕರ ಸಂಸ್ಥೆಗಳನ್ನು ಆರಂಭಿಸುವಂತೆ ನಿರ್ದೇಶನ ನೀಡಲಾಗಿದೆ ಎಂದರು.

ರಫ್ತುದಾರರ ಸಮ್ಮೇಳನ: ಸೆಪ್ಟೆಂಬರ್ 22ರಂದು ಬೆಂಗಳೂರಿನಲ್ಲಿ ಕೃಷಿ ಉತ್ಪನ್ನಗಳ ರಫ್ತುದಾರರ ಸಮ್ಮೇಳನ ನಡೆಯಲಿದೆ. ರಫ್ತುದಾರರು, ಸಂಶೋಧಕರು, ರೈತರು ಮತ್ತು ಅಧಿಕಾರಿಗಳು ಒಂದೆಡೆ ಸೇರಿ ರಫ್ತು ಚಟುವಟಿಕೆಗೆ ಪೂರಕವಾದ ಕ್ರಮಗಳ ಕುರಿತು ಚರ್ಚಿಸಲು ಸಮ್ಮೇಳನ ವೇದಿಕೆಯಾಗಲಿದೆ ಎಂದು ಶೋಭಾ ಹೇಳಿದರು.

ಬೆಳೆ ಸಮೀಕ್ಷೆಗೆ ಶ್ಲಾಘನೆ: ರಾಜ್ಯದಲ್ಲಿ ಜಾರಿಗೆ ತಂದಿರುವ ಬೆಳೆ ಸಮೀಕ್ಷೆ ವಿಧಾನವು ಅತ್ಯುತ್ತಮವಾಗಿದೆ. ರೈತರೇ ನೇರವಾಗಿ ತಮ್ಮ ಜಮೀನಿನ ಬೆಳೆ ಮಾಹಿತಿಯನ್ನು ದಾಖಲಿಸಲು ಅವಕಾಶ ಕಲ್ಪಿಸಿರುವ ಈ ವ್ಯವಸ್ಥೆಯನ್ನು ಇತರ ರಾಜ್ಯಗಳಲ್ಲೂ ಅಳವಡಿಸಿಕೊಳ್ಳುವಂತೆ ಶಿಫಾರಸು ಮಾಡಲಾಗುವುದು ಎಂದರು.



ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ರೇಷ್ಮೆ ಸಚಿವ ಕೆ.ಸಿ. ನಾರಾಯಣ ಗೌಡ, ಕೃಷಿ ಸಚಿವ ಬಿ.ಸಿ. ಪಾಟೀಲ ಇದ್ದರು– ಪ್ರಜಾವಾಣಿ ಚಿತ್ರ

ಸಂಬಾರ ಪಾರ್ಕ್ ಸ್ಥಾಪನೆಗೆ ತೀರ್ಮಾನ

ಚಿಕ್ಕಮಗಳೂರು ಜಿಲ್ಲೆಯ ಹೊಸಕೋಟೆ ಸಮೀಪದ ಅಂಬಾಲಿ ಗ್ರಾಮದಲ್ಲಿ 10 ಎಕರೆ ವಿಸ್ತೀರ್ಣದಲ್ಲಿ ಸಂಬಾರ ಉತ್ಪನ್ನಗಳ ಪಾರ್ಕ್ ಸ್ಥಾಪನೆಗೆ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮತ್ತು ರಾಜ್ಯದ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ 10 ಎಕರೆ ಜಮೀನು ಒದಗಿಸಲಿದೆ. ಸಂಬಾರ ಪದಾರ್ಥಗಳ ಉತ್ಪಾದನೆ ಹೆಚ್ಚಳ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟಕ್ಕೆ ಪೂರಕವಾಗಿ ಈ ಪಾರ್ಕ್ ಕಾರ್ಯನಿರ್ವಹಿಸಲಿದೆ ಎಂದು ಮುರುಗೇಶ್ ನಿರಾಣಿ ತಿಳಿಸಿದ್ದಾರೆ.

‘ಎಣ್ಣೆ ಕಾಳುಗಳ ದರ ರಕ್ಷಣೆಗೆ ನೀತಿ’

ಬೆಂಗಳೂರು: ರಾಜ್ಯದಲ್ಲಿ ಎಣ್ಣೆ ಕಾಳುಗಳ ದರ ರಕ್ಷಣೆಗೆ ನೀತಿಯೊಂದನ್ನು ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರೊಂದಿಗೆ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಈ ವಿಷಯ ತಿಳಿಸಿದರು.

‘ಎಣ್ಣೆ ಕಾಳುಗಳ ಬಿತ್ತನೆ ಬೀಜಗಳ ಗುಣಮಟ್ಟ ಹೆಚ್ಚಿಸುವುದು ಮತ್ತು ಉತ್ಪಾದನೆ ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕಿದೆ. ಈ ದಿಸೆಯಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ನಡೆಯಬೇಕು. ಎಣ್ಣೆ ಕಾಳುಗಳ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರ್ಕಾರದ ಬೆಂಬಲ ಅಗತ್ಯ’ ಎಂದರು.

ಎಣ್ಣೆ ಕಾಳುಗಳನ್ನು ಬೆಳೆಯುವುದಕ್ಕೆ ರೈತರಿಗೆ ವೈಜ್ಞಾನಿಕವಾಗಿ ತರಬೇತಿ ಬೇಕಿದೆ. ಕೃಷಿ ಉತ್ಪನ್ನಗಳಿಗೆ ಬೆಲೆ ಖಾತರಿಪಡಿಸುವ ಉದ್ದೇಶದಿಂದ ಸ್ಥಳೀಯವಾಗಿ ಬೆಳೆಯುವ ಬೆಳೆಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಯಂತ್ರಿಸಬೇಕು. ಅದಕ್ಕಾಗಿ ಆಮದು ತೆರಿಗೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಮರ ಕಡಿಯಲು ಅನುಮತಿಗೆ ಸಲಹೆ: ‘ರೈತರು ತಮ್ಮ ಕೃಷಿ ಜಮೀನಿನಲ್ಲಿ ಬೆಳೆಸುವ ಮರಗಳನ್ನು ಸ್ವಂತ ಬಳಕೆಯ ಉದ್ದೇಶಕ್ಕೆ ಕಡಿಯಲು ಅನುಮತಿ ನೀಡುವ ವ್ಯವಸ್ಥೆ ಕೆಲವು ರಾಜ್ಯಗಳಲ್ಲಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಮರ ಕಟಾವಿಗೆ ರೈತರಿಗೆ ಅನುಮತಿ ನೀಡುವ ವ್ಯವಸ್ಥೆ ರೂಪಿಸಬೇಕು’ ಎಂದು ಶೋಭಾ ಕರಂದ್ಲಾಜೆ ಸಲಹೆ ನೀಡಿದರು. ಈ ಕುರಿತು ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಇ– ಮಾರುಕಟ್ಟೆಗೆ ಮೆಚ್ಚುಗೆ

ರೈತರು ನೇರವಾಗಿ ರೇಷ್ಮೆ ಗೂಡುಗಳನ್ನು ಮಾರಾಟ ಮಾಡಲು ಅವಕಾಶವಾಗುವಂತೆ ರೇಷ್ಮೆ ಇಲಾಖೆ ರೂಪಿಸಿರುವ ಇ– ಮಾರುಕಟ್ಟೆ ವ್ಯವಸ್ಥೆಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮೆಚ್ಚುಗೆ ವ್ಯಕ್ತಪಡಿಸಿದರು. ಇತರ ಮಾರುಕಟ್ಟೆಗಳಲ್ಲೂ ಇಂತಹ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



ಬೆಂಗಳೂರಿನಲ್ಲಿ ಆಭರಣ ಪಾರ್ಕ್: ಬೊಮ್ಮಾಯಿ

ಬೆಂಗಳೂರು: ಉದ್ಯೋಗ ಸೃಷ್ಟಿಮಾಡುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಅತ್ಯಾಧುನಿಕ ಸೌಲಭ್ಯ ಇರುವ ಆಭರಣ ಪಾರ್ಕ್ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಅರಮನೆಮೈದಾನದಲ್ಲಿ ಆರಂಭವಾಗಿರುವ ‘ಸೌತ್ ಇಂಡಿಯಾ ಜ್ಯುವೆಲ್ಲರಿ ಶೋ’ ಉದ್ಘಾಟಿಸಿ ಶುಕ್ರವಾರ ಮಾತನಾಡಿದ ಅವರು, ‘ಕೌಶಲ ಬೇಡುವ ಆಭರಣ ಉದ್ದಿಮೆ ಕ್ಷೇತ್ರ ಉದ್ಯೋಗ ಸೃಜನೆಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಆಭರಣ ಉತ್ಪಾದನೆಗೆ ಪೂರಕವಾಗಿ ಆಧುನಿಕ ತಂತ್ರಜ್ಞಾನವೂ ಅಗತ್ಯ. ಈ ಆಶಯದಡಿ ಪಾರ್ಕ್ ನಿರ್ಮಾಣ ಮಾಡಲು ಬೇಕಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ’ ಎಂದು ಆಭರಣ ತಯಾರಕರ ಸಂಘಕ್ಕೆ ಸೂಚಿಸಿದರು.

ಭಾರತೀಯ ಶೈಲಿಯ ಆಭರಣಗಳ ವಹಿವಾಟು ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ಮಾಡಬೇಕಾಗಿದೆ. ಚಿನ್ನ ನಿಯಂತ್ರಣ ಕಾಯ್ದೆ ತೆಗೆದುಹಾಕಿದ ನಂತರ ಮುಕ್ತ ವಾತಾವರಣ ನಿರ್ಮಾಣವಾಗಿದೆ. ಚಿನ್ನದ ವ್ಯಾಪಾರ ಉದ್ದಿಮೆಯಾಗಿ ಬೆಳೆದಿದೆ ಎಂದೂ ಅವರು ಹೇಳಿದರು.

ಭಾರತೀಯ ಆರ್ಥಿಕತೆ ಉಳಿತಾಯ ಸಂಸ್ಕೃತಿಯನ್ನು ಆಧರಿಸಿದೆ. ನಮ್ಮ ಜನರ ಉಳಿತಾಯ ಮನೋಭಾವ ಆಭರಣ ಉದ್ದಿಮೆಗೆ ಪೂರಕವಾಗಿದೆ. ಬ್ಯಾಂಕ್ ದಿವಾಳಿಯಾದರೂ ಚಿನ್ನ ನಮ್ಮ ಆಪತ್ಬಾಂಧವನಂತೆ ಕೆಲಸ ಮಾಡುತ್ತದೆ. ಆಭರಣದ ವಹಿವಾಟು ಪುರಾತನ ವೃತ್ತಿಯಾಗಿದ್ದು ಭಾವನಾತ್ಮಕ ಸಂಬಂಧ ಬೆಸೆಯುವ ಗುಣ ಹೊಂದಿದೆ. ಆಭರಣ ತಯಾರಿಕೆ ಕರ್ನಾಟಕದ ಪಾರಂಪರಿಕ ಕಲೆಗಳಲ್ಲಿ ಒಂದಾಗಿದ್ದು, ಇದನ್ನು ಉಳಿಸಿ ಬೆಳೆಸಬೇಕು ಎಂದರು.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಟಿ.ಎ.ಶರವಣ, ಗ್ಲೋಬಲ್ ಎಕ್ಸಿಬಿಷನ್ ಆ್ಯಂಡ್ ಸರ್ವೀಸ್‌ನ ಶ್ರೀಕಾಂತ್ ಉಪಸ್ಥಿತರಿದ್ದರು.

ಜಾಹೀರಾತುಗಳಲ್ಲಿ ಜನಪ್ರತಿನಿಧಿಗಳ ಭಾವಚಿತ್ರ ನಿಷೇಧ: ಸುತ್ತೋಲೆ

ಬೆಂಗಳೂರು: ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಇಲಾಖೆಯ ಅಧೀನದ ನಗರ ಯೋಜನಾ ಪ್ರಾಧಿಕಾರ, ನಿಗಮ ಮತ್ತು ಮಂಡಳಿಗಳಲ್ಲಿ ಸರ್ಕಾರದ ಅನುದಾನದಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ಭಾವಚಿತ್ರಗಳೊಂದಿಗೆ ಜಾಹೀರಾತು ಪ್ರದರ್ಶಿಸುವುದನ್ನು ನಿಷೇಧಿಸಿ ನಗರಾಭಿವೃದ್ಧಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸರ್ಕಾರದ ಅನುದಾನದಲ್ಲಿ ನಡೆಯುವ ಕಾಮಗಾರಿಗಳು ಮತ್ತು ಸಾರ್ವಜನಿಕ ಕೆಲಸಗಳಿಗೆ ಸಂಬಂಧಿಸಿದ ಜಾಹೀರಾತುಗಳಲ್ಲಿ ಜನಪ್ರತಿನಿಧಿಗಳ ಭಾವಚಿತ್ರ ಪ್ರದರ್ಶಿಸುವುದನ್ನು ಪ್ರಶ್ನಿಸಿ ಸಾಮಾಜಿಕ ಹೋರಾಟಗಾರ ಎಚ್.ಎಂ. ವೆಂಕಟೇಶ್ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಇದೇ ವಿಚಾರದಲ್ಲಿ ಸುಪ್ರೀಂಕೋರ್ಟ್ 2015ರಲ್ಲಿ ಹೊರಡಿಸುವ ಆದೇಶ ಪಾಲನೆಗೆ ನಿರ್ದೇಶನ ನೀಡುವಂತೆ ಕೋರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಸರ್ಕಾರಿ ವೆಚ್ಚದಲ್ಲಿ ನಡೆಯುವ ಕಾಮಗಾರಿಗಳು ಮತ್ತು ಕೆಲಸಗಳಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ಭಾವಚಿತ್ರಗಳೊಂದಿಗೆ ಹಾಕಿರುವ ಜಾಹೀರಾತುಗಳ ತೆರವಿಗೆ ಆದೇಶ ಹೊರಡಿಸುವಂತೆ ಇದೇ 6ರಂದು ನಿರ್ದೇಶನ ನೀಡಿತ್ತು. ಇದೇ 24ರಂದು ಸುತ್ತೋಲೆ ಹೊರಡಿಸಿರುವ ನಗರಾಭಿವೃದ್ಧಿ ಇಲಾಖೆ, ಅಂತಹ ಎಲ್ಲ ಜಾಹೀರಾತುಗಳನ್ನು ತಕ್ಷಣ ತೆರವುಗೊಳಿಸುವಂತೆ ಆದೇಶಿಸಿದೆ.

‘ಮುಂದೆ ಇಂತಹ ಯಾವುದೇ ಜಾಹೀರಾತು ಪ್ರದರ್ಶಿಸದಂತೆ ಕ್ರಮ ವಹಿಸಬೇಕು. ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಿಸಿದವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಈ ಆದೇಶ ಅನುಷ್ಠಾನಗೊಳಿಸಲು ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು‘ ಎಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಐಎನ್‌ಎಕ್ಸ್ ಮೀಡಿಯಾ ಪ್ರಕರಣ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): ಐಎನ್‌ಎಕ್ಸ್ ಮೀಡಿಯಾ ಪ್ರಕರಣದಲ್ಲಿ ಜಪ್ತಿ ಮಾಡಲಾಗಿರುವ ದಾಖಲೆಗಳನ್ನು ಪರಿಶೀಲಿಸಲು ಆರೋಪಿಗೆ ಅವಕಾಶ ನೀಡಲಾಗದು ಎಂದು ದೆಹಲಿ ಹೈಕೋರ್ಟ್ ಎದುರು ಸಿಬಿಐ ಪ್ರತಿಪಾದಿಸಿತು. ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ, ಅವರ ಪುತ್ರ ಕಾರ್ತಿ ಈ ಪ್ರಕರಣದ ಆರೋಪಿಗಳು. ಇವರು ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಇರುವ ಕಾರಣ ಪರಿಶೀಲನೆಗೆ ಅವಕಾಶ ನೀಡಲಾಗದು ಎಂದೂ ಸಿಬಿಐ ತಿಳಿಸಿತು.

ದಾಖಲೆಗಳ ಪರಿಶೀಲನೆಗೆ ಅವಕಾಶ ಕಲ್ಪಿಸಿದ್ದ ಕೆಳಹಂತದ ಕೋರ್ಟ್‌ನ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮುಕ್ತಾ ಗುಪ್ತ ಅವರು, ‘ಪರಿಶೀಲನೆ ಕುರಿತ ಅಂಶವನ್ನು ಸುಪ್ರೀಂ ಕೋರ್ಟ್ ಈಗಾಗಲೇ ಆರೋಪಿಯ ಪರವಾಗಿ ಇತ್ಯರ್ಥಪಡಿಸಿದೆ’ ಎಂದು ಹೇಳಿದರು.

ಹೆಚ್ಚಿನ ಹೊಣೆಯನ್ನು ಆರೋಪಿಗೆ ಹೊರಿಸಲಾಗಿದೆ. ಕಾಯ್ದೆಯು ಮುಂದಡಿ ಇರಿಸಬೇಕಾಗಿದೆ. ಪ್ರತಿ ತನಿಖಾ ಸಂಸ್ಥೆಯು ಸಾವಿರಾರು ದಾಖಲೆಗಳನ್ನು ಜಪ್ತಿ ಮಾಡಲಿದೆ.

500 ದಾಖಲೆಗಳನ್ನು ಉಳಿಸಿ, ಉಳಿದಿದ್ದನ್ನು ಬದಿಗಿರಿಸಲಿದೆ. ಅವುಗಳು ನಿಮ್ಮ ಆಸ್ತಿಯಲ್ಲ. ಅವು ಆರೋಪಿಗೆ ಬೇಕಾದ್ದು ಇರಬಹುದು ಎಂದು ನ್ಯಾಯಮೂರ್ತಿ ತಿಳಿಸಿದರು. ಸಿಬಿಐ ಅರ್ಜಿ ಕುರಿತ ಆದೇಶವನ್ನು ಕೋರ್ಟ್ ಕಾಯ್ದಿರಿಸಿದ್ದು, ಈ ಸಂಬಂಧ ಲಿಖಿತ ಪ್ರತಿಕ್ರಿಯೆ ದಾಖಲಿಸುವಂತೆ ಸಿಬಿಐ ಮತ್ತು ಆರೋಪಿ ಇಬ್ಬರಿಗೂ ಸೂಚನೆ ನೀಡಿತು.



ಶನಿವಾರ, ಆಗಸ್ಟ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 240 | ಪುಟ 20

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪೋಷಕಸ್ನೇಹಿ ವಾತಾವರಣವಿರುವ ಕಚೇರಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹೆಚ್ಚು ಒಲವು ತೋರುತ್ತಿದ್ದಾರೆ. ಈಗಿನ ಸಂದರ್ಭದಲ್ಲಂತೂ ಇದು ಹೆಚ್ಚು ಪ್ರಸ್ತುತ.



ಚರ್ಚೆ ಜಾತಿಗಳ ಆರ್ಥಿಕ ಪ್ರಗತಿಯ ಗಣತಿ ಏಕೆ ಅಗತ್ಯ? 9

ಅವಿವೇಕದ ಮಾತುಗಳು ಇಂದಿಗೇ ಕೊನೆಯಾಗಲಿ: ನಟಿ ರಮ್ಯಾ 7

ಬೆಳೆ ಸಾಲಕ್ಕಾಗಿ ರೈತರ ಪರದಾಟ 6

ಸೆನ್ಸೆಕ್ಸ್	ನಿಫ್ಟಿ	₹/$
56,124 ▲	16,705 ▲	73.69 ▲

ಅತ್ಯಾಚಾರ ಪ್ರಕರಣ: ನಾಲ್ವರು ಆರೋಪಿಗಳ ಪತ್ತೆಗೆ ಕೇರಳದತ್ತ ಪೊಲೀಸರ ತಂಡ

ಬಿ.ಇ ವಿದ್ಯಾರ್ಥಿಗಳ ಮೇಲೆ ಶಂಕೆ


ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಗುಡ್ಡದಲ್ಲಿ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂಬಂಧ ನಾಲ್ವರು ಎಂಜಿನಿಯರಿಂಗ್ ವಿದ್ಯಾರ್ಥಿಗಳ ಮೇಲೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಅವರ ಪತ್ತೆಗಾಗಿ ಪೊಲೀಸರ ತಂಡ ಕೇರಳಕ್ಕೆ ತೆರಳಿದೆ.

‘ಪ್ರಕರಣ ಸಂಬಂಧ ಮಹತ್ವದ ಸುಳಿವು ಸಿಕ್ಕಿದೆ. ಮೊಬೈಲ್ ಟವರ್ ಸಿಗ್ನಲ್, ಕರೆಗಳ ಮಾಹಿತಿ ಆಧರಿಸಿ ವಿದ್ಯಾರ್ಥಿಗಳ ಕೈವಾಡವಿರುವುದನ್ನು ಪತ್ತೆ ಹಚ್ಚಲಾಗಿದೆ’ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಅತ್ಯಾಚಾರ ಕೃತ್ಯ ನಡೆದ ನಂತರ ಆರೋಪಿ ವಿದ್ಯಾರ್ಥಿಗಳು ಒಂದು ದಿನ ಮಾತ್ರ ಮೈಸೂರಿನಲ್ಲಿದ್ದು ಕೇರಳಕ್ಕೆ ತೆರಳಿದ್ದಾರೆ ಎಂಬ ಖಚಿತ ಮಾಹಿತಿ ದೊರಕಿದೆ. ನಾಲ್ವರ ಪೈಕಿ ಮೂವರು ತಮಿಳುನಾಡಿನವರು, ಒಬ್ಬರು ಕೇರಳದವರು. ಎಲ್ಲರೂ ಮೈಸೂರಿನ ಕಾಲೇಜು ವಿದ್ಯಾರ್ಥಿಗಳು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

7ನೇ ಪುಟ ನೋಡಿ



ಸಾಮೂಹಿಕ ಅತ್ಯಾಚಾರ ನಡೆದ ಮೈಸೂರಿನ ಲಲಿತಾದ್ರಿಪುರದ ಗುಡ್ಡಕ್ಕೆ ಶುಕ್ರವಾರ ಭೇಟಿ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಮಾಹಿತಿ ನೀಡಿದರು

ಗೃಹ ಸಚಿವರ ಸುತ್ತಾಟ

ಮೈಸೂರು: ಸಾಮೂಹಿಕ ಅತ್ಯಾಚಾರದ ಪ್ರಕರಣದ ಮಾಹಿತಿ ಪಡೆಯಲು ಗುರುವಾರ ರಾತ್ರಿಯೇ ನಗರಕ್ಕೆ ಬಂದು ವಾಸ್ತವ್ಯ ಹೂಡಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಶುಕ್ರವಾರ ಚಾಮುಂಡಿಬೆಟ್ಟದ ಭೇಟಿ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾದರು. ಬೆಳಿಗ್ಗೆ ಬೆಟ್ಟಕ್ಕೆ ತೆರಳಿ, ವಿಶೇಷ ಪೂಜೆ ಸಲ್ಲಿಸಿದರು. ನಂತರ, ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಫೈರಿಂಗ್ ಸಿಮುಲೇಟರ್ ಅನ್ನು ಉದ್ಘಾಟಿಸಿ, ತಾವೂ ಫೈರಿಂಗ್ ನಡೆಸಿ ಖುಷಿಪಟ್ಟರು. ಮಾದರಿ ಪೊಲೀಸ್ ಠಾಣೆ, ಪರೀಕ್ಷಾರ್ಥಿಗಳ ಕೊಠಡಿ, ಸಭಾಂಗಣ, ಗ್ರಂಥಾಲಯ ವೀಕ್ಷಿಸಿದರು.

ನಾಲ್ವರು ಅಧಿಕಾರಿಗಳೊಂದಿಗೆ ಅವರು ಸಭೆ ಆರಂಭಿಸುವ ಹೊತ್ತಿಗೆ ಮಧ್ಯಾಹ್ನ 1 ಗಂಟೆಯಾಗಿತ್ತು. ನಂತರ ಅವರು ಘಟನೆ ನಡೆದ ಸ್ಥಳಕ್ಕೆ ಭೇಟಿ ಕೊಟ್ಟರು. ಸಂಜೆ ಸುದ್ದಿಗೋಷ್ಠಿ ನಡೆಸುವುದಾಗಿ ಹೇಳಿದ್ದ ಸಚಿವರು, ಪ್ರಕರಣ ಕುರಿತು ಪ್ರತಿಕ್ರಿಯೆ ನೀಡಲಿಲ್ಲ. ಬದಲಿಗೆ ದರೋಡೆ ಪ್ರಕರಣದ ತನಿಖೆ ವಿವರವನ್ನಷ್ಟೇ ನೀಡಿ ಮೂರೂವರೆ ನಿಮಿಷದಲ್ಲಿ ಮಾತು ಮುಗಿಸಿದರು.

‘ಆಂಧ್ರ ಮಾದರಿ’ ಕ್ರಮ ಅಗತ್ಯ: ಎಚ್‌ಡಿಕೆ



ರಾಮನಗರ: ಅತ್ಯಾಚಾರಿಗಳ ವಿರುದ್ಧ ರಾಜ್ಯ ಸರ್ಕಾರ ‘ಆಂಧ್ರಪ್ರದೇಶ ಮಾದರಿ’ಯಲ್ಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ಸಲಹೆ ನೀಡಿದರು.

ಚನ್ನಪಟ್ಟಣದಲ್ಲಿ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಅವರು, ‘ಆಂಧ್ರಪ್ರದೇಶದಲ್ಲಿ ಎರಡು ವರ್ಷದ ಹಿಂದೆ ಅತ್ಯಾಚಾರಿಗಳ ವಿರುದ್ಧ ಅಲ್ಲಿನ ಸರ್ಕಾರ, ಪೊಲೀಸರು ಏನು ಕ್ರಮ ತೆಗೆದುಕೊಂಡರು ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದು ಹೇಳಿದರು.

7ನೇ ಪುಟ ನೋಡಿ

‘ಅತ್ಯಾಚಾರಿಗಳ ಎಲ್ಲವನ್ನೂ ಕತ್ತರಿಸಿ’

ಬೆಂಗಳೂರು: ‘ಅತ್ಯಾಚಾರದಂತಹ ದುಷ್ಕೃತ್ಯಗಳು ಸಮಾಜದಲ್ಲಿ ನಡೆಯಲೇಬಾರದು. ಇಂತಹ ಹೀನ ಕೃತ್ಯದಲ್ಲಿ ಭಾಗಿ ಆದವರಿಗೆ ಕಠಿಣ ಶಿಕ್ಷೆ ಆಗಲೇಬೇಕು. ಏನೆಲ್ಲಾ ಕತ್ತರಿಸಬೇಕೊ ಅದನ್ನೆಲ್ಲಾ ಕತ್ತರಿಸಿಬಿಡಬೇಕು’ ಎಂದು ಸಚಿವ ಆನಂದ್ ಸಿಂಗ್ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು. ಮೈಸೂರಿನಲ್ಲಿ ನಡೆದ ಅತ್ಯಾಚಾರ ಪ್ರಕರಣ ಕುರಿತು ಪ್ರತಿಕ್ರಿಯಿಸಿದ ಅವರು ‘ದುಬೈನಲ್ಲಿ ಕಳ್ಳತನ ಮಾಡಿದರೆ ಅಂತಹವರ ದೇಹದ ಕೆಲ ಅಂಗಗಳನ್ನೇ ಕತ್ತರಿಸಿಬಿಡುತ್ತಾರೆ ಎಂಬುದನ್ನು ಕೇಳಿದ್ದೇನೆ. ಇಲ್ಲಿ, ಅತ್ಯಾಚಾರಿಗಳಿಗೂ ಅದೇ ಮಾದರಿಯ ಶಿಕ್ಷೆಯಾಗಬೇಕು. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದಕ್ಕೆ ಅವಕಾಶವಿಲ್ಲ’ ಎಂದರು.



ಕಾಬೂಲ್: ಸಾವಿನ ಸಂಖ್ಯೆ ನೂರಕ್ಕೆ ಏರಿಕೆ

ಕಾಬೂಲ್ (ಎಪಿ/ರಾಯಿಟರ್ಸ್/ಎಎಫ್‌ಪಿ): ಕಾಬೂಲ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಗುರುವಾರ ರಾತ್ರಿ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಸತ್ತವರ ಸಂಖ್ಯೆ 100ಕ್ಕೆ ಏರಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರುವ ಸಾಧ್ಯತೆ ಇದೆ. ಮತ್ತಷ್ಟು ದಾಳಿ ನಡೆಯುವ ಅಪಾಯ ಇರುವ ಕಾರಣ ಹಲವು ದೇಶಗಳು ತೆರವು ಕಾರ್ಯಾಚರಣೆಯನ್ನು ಶುಕ್ರವಾರ ತ್ವರಿತಗೊಳಿಸಿವೆ.

ಇದು 15 ವರ್ಷಗಳಲ್ಲಿಯೇ ಅಫ್ಗಾನಿಸ್ತಾನದಲ್ಲಿ ನಡೆದ ಅತ್ಯಂತ ಭೀಕರ ದಾಳಿ ಎನಿಸಿದೆ.

ಮೃತಪಟ್ಟವರಲ್ಲಿ ಬಹುತೇಕ ಮಂದಿ ಅಫ್ಗನ್ ಪ್ರಜೆಗಳು. ಅಮೆರಿಕ ಸೇನೆಯ 13 ಮಂದಿ ಮೃತಪಟ್ಟಿದ್ದಾರೆ. ಅಮೆರಿಕ ಸೇನೆಯ 18 ಜನರಿಗೆ ಗಾಯಗಳಾಗಿವೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಆದರೆ ಗಡುವಿನೊಳಗೆ ತೆರವು ಕಾರ್ಯಾಚರಣೆಯನ್ನು ಮುಗಿಸಲು ಯತ್ನಿಸುತ್ತೇವೆ ಎಂದು ಅಮೆರಿಕ ಹೇಳಿದೆ.

ದಾಳಿಯಲ್ಲಿ ತಾಲಿಬಾನ್ ಸೇನೆಯ 18 ಜನರು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಗುರುವಾರ ರಾತ್ರಿ ಹೇಳಿತ್ತು. ಆದರೆ, ತಮ್ಮ ಸೇನೆಯ ಒಬ್ಬರೂ ದಾಳಿಯಲ್ಲಿ ಮೃತಪಟ್ಟಿಲ್ಲ ಎಂದು ಶುಕ್ರವಾರ ಬೆಳಿಗ್ಗೆ ಹೇಳಿದೆ. ತಾಲಿಬಾನ್‌ನ ಹಲವರು ದಾಳಿಯಲ್ಲಿ ಸತ್ತಿದ್ದಾರೆ ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಹೇಳಿದೆ.


ವಿಮಾನ ನಿಲ್ದಾಣದ ಪ್ರವೇಶದ್ವಾರದ ಬಳಿಯ ಕೊಳಚೆ ಚರಂಡಿಯ ಸನಿಹದಲ್ಲೇ ದಾಳಿ ನಡೆದಿದೆ. ಆ ಚರಂಡಿಯಲ್ಲೇ ಹತ್ತಾರು ದೇಹಗಳು ಛಿದ್ರವಾಗಿ ಬಿದ್ದಿರುವ ಚಿತ್ರ ಮತ್ತು ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ‘ದೇಹಗಳು ಮತ್ತು ಮಾಂಸದ ತುಣುಕುಗಳು ಗಾಳಿಯಲ್ಲಿ ಹಾರುತ್ತಿದ್ದವು. ಚರಂಡಿಯ ನೀರು ಕ್ಷಣಮಾತ್ರದಲ್ಲಿ ರಕ್ತದ ಹೊಳೆಯಾಯಿತು’ ಎಂದು ಗಾಯಾಳುವೊಬ್ಬರು ದಾಳಿಯ ಭೀಕರತೆಯನ್ನು ವಿವರಿಸಿದ್ದಾರೆ.

ಗಾಯಾಳುಗಳಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ಫೋಟದ ಸ್ಥಳದಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವ ಕೆಲಸ ಮತ್ತು ಮೃತದೇಹಗಳ ತೆರವು ಕಾರ್ಯಾಚರಣೆ ಶುಕ್ರವಾರ ನಸುಕಿನವರೆಗೆ ನಡೆದಿತ್ತು. ಆದರೆ ಗಾಯಾಳುಗಳಿಗೆ ಚಿಕಿತ್ಸೆ ನೀಡಲು ವೈದ್ಯಕೀಯ ಪರಿಕರಗಳು ಮತ್ತು ಔಷಧದ ಕೊರತೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ವಾಣಿಜ್ಯ ಮತ್ತು ಸರಕು ಸಾಗಣೆ ವಿಮಾನ ಸಂಚಾರ ಸ್ಥಗಿತವಾಗಿರುವ ಕಾರಣ ವೈದ್ಯಕೀಯ ಪರಿಕರ, ಔಷಧದ ಪೂರೈಕೆ ಸ್ಥಗಿತಗೊಂಡಿದೆ.

ಇನ್ನಷ್ಟು ಸುದ್ದಿಗಳು 11

ಹಂಗಾಮಿ ಮುಖ್ಯ ನ್ಯಾಯಮೂರ್ತಿ ನೇಮಕ

ಬೆಂಗಳೂರು: ಹಿರಿಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರನ್ನು ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ.



ಸತೀಶ್‌ಚಂದ್ರ ಶರ್ಮಾ

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಅಧಿಕಾರ ಬಿಟ್ಟುಕೊಡುವ ದಿನಾಂಕದಿಂದ ಜಾರಿಗೆ ಬರುವಂತೆ ಮುಖ್ಯ ನ್ಯಾಯಮೂರ್ತಿ ಅವರ ಕಚೇರಿ ಕರ್ತವ್ಯಗಳನ್ನು ಶರ್ಮಾ ಅವರು ನಿರ್ವಹಿಸಲಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಭಾರಿ ಮಳೆ: ಕೊಚ್ಚಿಹೋದ ಸೇತುವೆ, ಹೆದ್ದಾರಿಗಳು • ವಾಹನ ಸಂಚಾರ ಸ್ಥಗಿತ

ಉತ್ತರಾಖಂಡ: ಮತ್ತೆ ಭೂಕುಸಿತ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡವು ಮಳೆಗೆ ಮತ್ತೆ ನಲುಗಿದೆ. ರಾಜ್ಯದಾದ್ಯಂತ ಗುರುವಾರ ರಾತ್ರಿಯಿಡೀ ಭಾರಿ ಮಳೆಯಾಗಿದ್ದು, ಹಲವೆಡೆ ಭೂಕುಸಿತ ಉಂಟಾಗಿದೆ.

ಹೃಷಿಕೇಶ–ಗಂಗೋತ್ರಿ (ಎನ್‌ಎಚ್–94) ಹಾಗೂ ಹೃಷಿಕೇಶ–ಬದ್ರಿನಾಥ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್–58) ಬಹುತೇಕ ಹಾನಿಗೀಡಾಗಿವೆ. ಈ ಹೆದ್ದಾರಿಗಳು ಸಂಪೂರ್ಣ ದುರಸ್ತಿಗೊಳ್ಳುವವರೆಗೆ, ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ವಾಹನ ಸಂಚಾರವನ್ನು ಸ್ಥಗಿತಗೊಳಿಸಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ನರೇಂದ್ರ ನಗರದಿಂದ ಚಾಂಬಾವರೆಗೆ ಹಾಗೂ ತಪೋವನದಿಂದ ಮಲೇಥಾವರೆಗೆ ಹೃಷಿಕೇಶ–ಬದ್ರಿನಾಥ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ಟೆಹ್ರಿ ಜಿಲ್ಲಾಧಿಕಾರಿ ಇವಾ ಆಶಿಶ್ ಶ್ರೀವಾತ್ಸವ ತಿಳಿಸಿದ್ದಾರೆ.

ಜಿಲ್ಲೆಯ ಫಾಕೋಟ್ ಬಳಿಯಲ್ಲಿ ರಾಷ್ಟ್ರೀಯ ಹೆದ್ದಾರಿ–94ರ ಬಹುಭಾಗವು ಕುಸಿದುಬಿದ್ದಿದ್ದು, ಹಲವಾರು ಕಡೆ ಭೂಕುಸಿತದ ಅವಶೇಷಗಳು, ದೊಡ್ಡ ಬಂಡೆಗಳು ರಸ್ತೆ ಮೇಲೆ ಉರುಳಿ ಬಿದ್ದು ತೊಂದರೆಯಾಗಿದೆ.

11ನೇ ಪುಟ ನೋಡಿ



ಭಾರಿ ಮಳೆಯಿಂದಾಗಿ ಶುಕ್ರವಾರ ಕುಸಿದುಬಿದ್ದಿರುವ, ಡೆಹ್ರಾಡೂನ್–ಹೃಷಿಕೇಶ ಹೆದ್ದಾರಿಯಲ್ಲಿನ ರಾಣಿ ಪೋಖರಿ ಸೇತುವೆ –ಪಿಟಿಐ ಚಿತ್ರ

ಅರುಣಾಚಲ ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಹಲವು ಜಿಲ್ಲೆಗಳಲ್ಲಿ ನಿರಂತರ ಮಳೆಯಾಗುತ್ತಿದ್ದು, ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಸಿಯಾಂಗ್ ಜಿಲ್ಲೆಯಲ್ಲಿನ ಹಲವು ನದಿಗಳು ತುಂಬಿ ಹರಿಯುತ್ತಿದ್ದು, ರಸ್ತೆ, ಸೇತುವೆಗಳು ಹಾನಿಗೀಡಾಗಿವೆ. ಕೃಷಿ, ತೋಟಗಾರಿಕೆ ಬೆಳೆಗಳು ಹಾಗೂ ಬಿದಿರಿನ ತೋಪುಗಳಲ್ಲಿ ನೀರು ನಿಂತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ಮಳೆಯಿಂದ ಸಂಕಷ್ಟಕ್ಕೀಡಾದವರಿಗೆ ತುರ್ತು ನೆರವಿನ ಭರವಸೆಯನ್ನು ಸ್ಥಳೀಯ ಶಾಸಕರು ನೀಡಿದ್ದಾರೆ.

11ನೇ ಪುಟ ನೋಡಿ

‘ಆಮ್ಲಜನಕ ದಾಸ್ತಾನಿದೆಯೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು ವಾಸ್ತವಿಕವಾಗಿ ಎಷ್ಟು ಪ್ರಮಾಣದ ಆಮ್ಲಜನಕದ ಅಗತ್ಯವಿದೆ ಎಂಬುದರ ಕುರಿತು ಅಂದಾಜು ಸಿದ್ಧಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತಿಳಿಸಿದೆ.

ತುರ್ತುಸ್ಥಿತಿ ಎದುರಿಸಲು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಆಮ್ಲಜನಕವನ್ನು ಹೆಚ್ಚುವರಿಯಾಗಿ ದಾಸ್ತಾನು ಮಾಡಲಾಗಿದೆಯೇ ಎಂದು ಸ್ಪಷ್ಟಪಡಿಸಲು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ಪೀಠ ತಿಳಿಸಿತು.

ಖಾಸಗಿ ಆಸ್ಪತ್ರೆಗಳಲ್ಲಿ 4,709 ಟನ್ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ 147.4 ಟನ್ ಆಮ್ಲಜನಕ ಹೆಚ್ಚುವರಿಯಾಗಿ ದಾಸ್ತಾನಿದೆ ಎಂದು ಸರ್ಕಾರ ವಿವರ ಸಲ್ಲಿಸಿತು. ‘ದಿನಕ್ಕೆ 1,200 ಟನ್ ಆಮ್ಲಜನಕ ಬೇಕಾಗಲಿದೆ ಎಂದು ತಜ್ಞರ ಸಮಿತಿ ವರದಿ ನೀಡಿದೆ. ದಾಸ್ತಾನಿರುವ ಆಮ್ಲಜನಕ ಸಾಕಾಗಲಿದೆಯೇ’ ಎಂದು ಪೀಠ ಪ್ರಶ್ನಿಸಿತು.

2021ರ ಆಗಸ್ಟ್ 23ರ ವೇಳೆಗೆ 3.69 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. 4.97 ಕೋಟಿ ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಸದ್ಯ 2.83 ಕೋಟಿ ಜನ ಮೊದಲ ಡೋಸ್ ಪಡೆದಿದ್ದರೆ, 86.46 ಲಕ್ಷ ಜನ ಎರಡನೇ ಡೋಸ್ ಪಡೆದಿದ್ದಾರೆ ಎಂದು ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಿವರಿಸಿದೆ.

ಒಳ ಪುಟ



ವಿವಿಧೆಡೆ ಮಳೆ: ಗೋಡೆ ಕುಸಿದು ಕಾರು ಜಖಂ 7

ರಾಜ್ಯ ಕೋವಿಡ್ ಅಂಕಿ–ಅಂಶ

29,44,764 ▲	ಒಟ್ಟು ಸೋಂಕಿತರು (29,43,463 ನಿನ್ನೆಯ ವಿವರ)
18,970 ▼	ಸಕ್ರಿಯ ಪ್ರಕರಣಗಳು
28,88,520 ▲	ಗುಣಮುಖರಾದವರು
37,248 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,301	▲
ಗುಣಮುಖ	1,614	▼
ಸಾವು	17	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣ: ಸಿಸಿಬಿ ತನಿಖೆಯಲ್ಲಿ ಬಹಿರಂಗ

ಉದ್ಯಮ ವೃದ್ಧಿಗೆ ‘ಡ್ರಗ್ಸ್ ಪಾರ್ಟಿ’; ‘ರಾಗಿಣಿ’ ಅತಿಥಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲಿ ಒಂದನೇ ಆರೋಪಿ (ಎ1) ಆಗಿರುವ ಶಿವಪ್ರಕಾಶ್ ಅಲಿಯಾಸ್ ಚಿಪ್ಪಿ, ತನ್ನ ಕಲ್ಲುಕ್ವಾರಿ ವ್ಯವಹಾರ ಹಾಗೂ ರಿಯಲ್ ಎಸ್ಟೇಟ್ ಉದ್ಯಮ ವೃದ್ಧಿಗಾಗಿ ‘ಡ್ರಗ್ಸ್ ಪಾರ್ಟಿ’ಗಳನ್ನು ಆಯೋಜಿಸುತ್ತಿದ್ದ. ಗೆಳತಿ, ನಟಿ ರಾಗಿಣಿ ದ್ವಿವೇದಿಯನ್ನು ಪ್ರತಿಯೊಂದು ಪಾರ್ಟಿಗೂ ‘ವಿಶೇಷ ಅತಿಥಿ’ ಆಗಿ ಕರೆಸುತ್ತಿದ್ದ. ಅದೇ ಪಾರ್ಟಿಯಲ್ಲೇ ಡ್ರಗ್ಸ್ ದಂಧೆ ಜೋರಾಗಿತ್ತು ಎಂದು ಸಿಸಿಬಿ ಹೇಳಿದೆ.

ಪ್ರಕರಣ ಸಂಬಂಧ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಡ್ರಗ್ಸ್ ದಂಧೆ ಆರಂಭವಾದ ಬಗ್ಗೆ ಉಲ್ಲೇಖಿಸಲಾಗಿದೆ.

‘ಉದ್ಯಮ ವೃದ್ಧಿಗೆ ಸಹಾಯ ಮಾಡುವ ಉದ್ಯಮಿಗಳು, ವ್ಯಾಪಾರಿಗಳು, ಮಧ್ಯವರ್ತಿಗಳು ಹಾಗೂ ಇತರರನ್ನು ಪರಿಚಯಿಸಿಕೊಂಡಿದ್ದ ಶಿವಪ್ರಕಾಶ್, ಅವರಿಗೆಲ್ಲ ತಿಂಗಳಿಗೊಮ್ಮೆ ಪಾರ್ಟಿ ಕೊಡುತ್ತಿದ್ದ. ಬೆಂಗಳೂರಿನ ಲಲಿತ್ ಅಶೋಕ ಹೋಟೆಲ್‌ನ ಕೊನೆಯ ಮಹಡಿಯಲ್ಲಿರುವ ‘ಕಿಟ್ಟಿಕೊ’ ರೆಸ್ಟೋರೆಂಟ್, ರೇಸ್‌ಕೋರ್ಸ್ ಬಳಿಯ ‘ಪೆಬಲ್ಸ್ ಬಾರ್’, ರೆಸಿಡೆನ್ಸಿ ರಸ್ತೆಯ ರಿಡ್ಜ್ ಕಾರ್ಲ್‌ಟನ್‌ನಲ್ಲಿರುವ ‘ಬ್ಯಾಂಕ್ ಆ್ಯಂಡ್ ಲಾಂಜ್’ ಬಾರ್ ಹಾಗೂ ಬ್ರಿಗೇಡ್ ರಸ್ತೆಯ ಶೂಲೆ ವೃತ್ತ ಬಳಿಯ ‘ಒಲಿವ್’ ಬಾರ್‌ನಲ್ಲಿ ಪಾರ್ಟಿ ಆಯೋಜಿಸಿದ್ದ ಬಗ್ಗೆ ದಾಖಲೆಗಳು ಸಿಕ್ಕಿವೆ’ ಎಂಬುದನ್ನು ಪಟ್ಟಿಯಲ್ಲಿ ತಿಳಿಸಲಾಗಿದೆ.

‘ಕನ್ನಡ ಸಿನಿಮಾ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ರಾಗಿಣಿಯ ಸ್ನೇಹ ಬೆಳೆಸಿದ್ದ ಆರೋಪಿ, ಆಕೆಯನ್ನು ಪಾರ್ಟಿಯ ಅತಿಥಿಯಾಗಿ ಆಹ್ವಾನಿಸುತ್ತಿದ್ದ. ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದ ಪ್ರತಿಯೊಬ್ಬರಿಗೂ ಆಕೆಯನ್ನು ಪರಿಚಯ ಮಾಡಿಕೊಟ್ಟು, ಉದ್ಯಮ ವೃದ್ಧಿಗೆ ಸಹಕರಿಸುವಂತೆ ಕೋರುತ್ತಿದ್ದ. ಅದೇ ಪಾರ್ಟಿಯಲ್ಲಿ ಎಕ್ಸ್‌ಟೆಸಿ ಡ್ರಗ್ಸ್ ಮಾತ್ರೆಗಳನ್ನು ಸರಬರಾಜು ಮಾಡಲಾಗುತ್ತಿತ್ತು. ಶಿವಪ್ರಕಾಶ್ ಹಾಗೂ ರಾಗಿಣಿ ಸಹ ಮಾತ್ರೆ ತೆಗೆದುಕೊಳ್ಳುತ್ತಿದ್ದರು.’

‘ದಾಬಸ್‌ಪೇಟೆಯ ಶಿವಗಂಗೆ ರಸ್ತೆಯಲ್ಲಿರುವ ತನ್ನ ಒಡೆತನದ ‘ಶಿವಾಸ್’ ಫಾರ್ಮ್‌ಹೌಸ್‌ನಲ್ಲೂ ಶಿವಪ್ರಕಾಶ್ ಹಲವು ಬಾರಿ ಪಾರ್ಟಿ ಆಯೋಜಿಸಿದ್ದ. ರಿಯಲ್ ಎಸ್ಟೇಟ್ ಉದ್ಯಮಿಗಳು, ಏಜೆಂಟರು ಹಾಗೂ ಶ್ರೀಮಂತರ ಮಕ್ಕಳನ್ನು ಪಾರ್ಟಿಗೆ ಕರೆಸುತ್ತಿದ್ದ. ಪ್ರತಿ ಗ್ರಾಂಗೆ ₹ 5,000 ಬೆಲೆಯಲ್ಲಿ ಕೊಕೇನ್ ಡ್ರಗ್ಸ್ ಮಾರುತ್ತಿದ್ದ. ರಾಗಿಣಿ ಸಹ ಅದಕ್ಕೆ ಸಹಕರಿಸುತ್ತಿದ್ದಳು. ನೈಜೀರಿಯಾ ಪ್ರಜೆಗಳೇ ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು. ಫಾರ್ಮ್‌ಹೌಸ್‌ನ ಶೌಚಾಲಯದಲ್ಲೂ ಕೆಲವರು ಡ್ರಗ್ಸ್ ಸೇವಿಸಿದ್ದರು’ ಎಂಬ ಅಂಶವೂ ಆರೋಪ ಪಟ್ಟಿಯಲ್ಲಿದೆ.

ಮೂಗಿನಲ್ಲಿ ಕೊಕೇನ್ ಎಳೆಯುತ್ತಿದ್ದರು: ‘ರಾಗಿಣಿಯ ಮತ್ತೊಬ್ಬ ಸ್ನೇಹಿತನಾದ ಸಾರಿಗೆ ಇಲಾಖೆ ನೌಕರ ಬಿ.ಕೆ. ರವಿಶಂಕರ್ ಸಹ ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದ. ಇಬ್ಬರೂ ಮೂಗಿನ ಮೂಲಕ ಕೊಕೇನ್ ಪೌಡರ್ ಎಳೆದು ನಶೆ ಏರಿಸಿಕೊಳ್ಳುತ್ತಿದ್ದರು’ ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

‘ಕಾರು ಚಾಲಕನನ್ನು ನೈಜೀರಿಯಾ ಪ್ರಜೆ ಬಳಿ ಕಳುಹಿಸಿ ಕೊಕೇನ್ ಪಾರ್ಸೆಲ್ ತರಿಸುತ್ತಿದ್ದ ರಾಗಿಣಿ, ಮನೆಯಲ್ಲೇ ಹಲವು ಬಾರಿ ಡ್ರಗ್ಸ್ ಸೇವಿಸಿದ್ದಳು. ತಟ್ಟೆಯಲ್ಲಿ ಕೊಕೇನ್ ಪೌಡರ್ ಹಾಕಿ, ಎಟಿಎಂ ಕಾರ್ಡ್‌ನಿಂದ ಉಜ್ಜಿ ಎರಡು ಭಾಗ ಮಾಡುತ್ತಿದ್ದಳು. ₹ 100 ಮುಖಬೆಲೆಯ ನೋಟನ್ನು ಸುರುಳಿ ಸುತ್ತಿ ಅದರ ಮೂಲಕ ಮೂಗಿನಲ್ಲಿ ಕೊಕೇನ್ ಎಳೆಯುತ್ತಿದ್ದಳು’ ಎಂಬುದನ್ನೂ ಪಟ್ಟಿಯಲ್ಲಿ ತಿಳಿಸಲಾಗಿದೆ.

‘ಡ್ರಗ್ಸ್ ಮಾರಾಟಕ್ಕೆ ಹುಟ್ಟುಹಬ್ಬ ನೆಪ’

‘ಗ್ರಾಹಕರನ್ನು ಒಂದೆಡೆ ಸೇರಿಸಿ ಡ್ರಗ್ಸ್ ಮಾರಾಟ ಮಾಡುವ ಉದ್ದೇಶದಿಂದ ಕೆಲ ಆರೋಪಿಗಳು, ಒಂದೇ ವರ್ಷದಲ್ಲಿ ಐದಕ್ಕೂ ಹೆಚ್ಚು ಬಾರಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದರು. 2019ರ ಮೇ 26ರಂದು '1 ಕ್ಯೂ 1' ಪಬ್‌ನಲ್ಲಿ ನಟಿ ರಾಗಿಣಿ ತನ್ನ ಹುಟ್ಟುಹಬ್ಬ ಪಾರ್ಟಿ ಆಯೋಜಿಸಿದ್ದಳು' ಎಂಬ ಸಂಗತಿ ಆರೋಪ ಪಟ್ಟಿಯಲ್ಲಿದೆ.



ಶಿವಪ್ರಕಾಶ್



ರಾಗಿಣಿ ದ್ವಿವೇದಿ



ಅಫ್ಗಾನಿಸ್ತಾನದ ಮಕ್ಕಳಿಗೆ ಪೋಲಿಯೊ ಲಸಿಕೆ

ಬೆಂಗಳೂರು: ಅಫ್ಗಾನಿಸ್ತಾನದಿಂದ ಇಲ್ಲಿಗೆ ಬಂದ 15 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಲಸಿಕೆ ನೀಡಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಮಾಣಿತ ಕಾರ್ಯಾಚರಣ ವಿಧಾನದ ಅನುಸಾರ 15 ವರ್ಷದೊಳಗಿನವರ ಮಲದ ಮಾದರಿ ಶೇಖರಿಸಿ, ಎನ್‌ಐವಿ ಪ್ರಯೋಗಾಲಯಕ್ಕೆ ರವಾನಿಸಬೇಕು ಎಂದು ತಿಳಿಸಿದ್ದಾರೆ.

ಬಸ್ ಆದ್ಯತಾ ಪಥ, ಮೆಟ್ರೊ ಬ್ಯಾರಿಕೇಡ್ ನಡುವೆ ಉಳಿಯಲಿದೆ ಒಂದೇ ಪಥ

ರೀಚ್‌2ಎ ಕಾಮಗಾರಿ: ಸಂಚಾರ ದುಸ್ತರ

● ವಿಜಯಕುಮಾರ್ ಎಸ್.ಕೆ.


ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿನ 'ನಮ್ಮ ಮೆಟ್ರೊ' ಎರಡನೇ ಹಂತದ ಬಹು ನಿರೀಕ್ಷಿತ ಸಿಲ್ಕ್ ಬೋರ್ಡ್- ಕೆ.ಆರ್.ಪುರ ಮಾರ್ಗದ (ರೀಚ್ 2ಎ) ಕಾಮಗಾರಿಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮ(-ಬಿಎಂಆರ್‌ಸಿಎಲ್) ಆರಂಭಿಸಿದೆ. ಎಡಕ್ಕೆ ಬಸ್ ಪಥ, ಬಲಕ್ಕೆ ಮೆಟ್ರೊ ಕಾಮಗಾರಿಯ ಬ್ಯಾರಿಕೇಡ್ ನಡುವೆ ಖಾಸಗಿ ವಾಹನಗಳ ಸಂಚಾರಕ್ಕೆ ಒಂದೇ ಒಂದು ಪಥ ಉಳಿದಿದ್ದು, ವಾಹನ ಸಂಚಾರವೇ ದುಸ್ತರವಾಗುತ್ತಿದೆ.

ಸಿಲ್ಕ್ ಬೋರ್ಡ್ ಕಡೆಯಿಂದ ಮೆಟ್ರೊ ಕಾಮಗಾರಿ ನಿಧಾನವಾಗಿ ಆರಂಭವಾಗುತ್ತಿದೆ. ಬೆಳ್ಳಂದೂರು ಬಳಿ ಈಗಾಗಲೇ ಕಾಮಗಾರಿ ಆರಂಭವಾಗಿದ್ದರೆ, ಮಾರತಹಳ್ಳಿ, ದೊಡ್ಡನೆಕ್ಕುಂದಿ, ಮಹದೇವಪುರದ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದೆ. ಎತ್ತರಿಸಿದ ಮೆಟ್ರೊ ಮಾರ್ಗ ಆಗಿರುವ ಕಾರಣ ರಸ್ತೆ ವಿಭಜಕಗಳ ಮೇಲೆ ಪಿಲ್ಲರ್‌ಗಳನ್ನು ನಿರ್ಮಿಸಬೇಕಿದೆ. ಅದಕ್ಕಾಗಿ ಕೆಲವೆಡೆ ಮಣ್ಣು ಪರೀಕ್ಷೆಯೂ ನಡೆಯುತ್ತಿದೆ.

ಸಿಲ್ಕ್ ಬೋರ್ಡ್‌ನಿಂದ ಟಿನ್ ಫ್ಯಾಕ್ಟರಿ ತನಕ ಒಟ್ಟು 16 ಕಿಲೋ ಮೀಟರ್‌ನಲ್ಲಿ ಆರು ಪಥದ ರಸ್ತೆ ಇದೆ. ಎರಡೂ ಕಡೆ ತಲಾ ಮೂರು ಪಥದ ರಸ್ತೆ ಇದ್ದು, ಇದರಲ್ಲಿ ಒಂದನ್ನು ಬಸ್ ಆದ್ಯತಾ ಪಥವಾಗಿ ಪರಿವರ್ತಿಸಲಾಗಿದೆ. ಉಳಿದ ಎರಡು ಪಥದಲ್ಲಿ ಬಹುತೇಕ ಒಂದು ಪಥದಲ್ಲಿ ಮೆಟ್ರೊ ಮಾರ್ಗದ ಕಾಮಗಾರಿಗೆ ಬ್ಯಾರಿಕೇಡ್ ಜೋಡಿಸಲಾಗುತ್ತಿದೆ. ಉಳಿದ ಒಂದು ಪಥದಲ್ಲಿ ಲಾರಿ, ಕಾರು, ಆಟೋರಿಕ್ಷಾ, ದ್ವಿಚಕ್ರ ವಾಹನ, ಖಾಸಗಿ ಬಸ್‌ಗಳು ಸಂಚರಿಸಬೇಕಿದೆ.



ಬೆಳ್ಳಂದೂರು ಬಳಿಯ ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ಕಾಮಗಾರಿಗೆ ಅಳವಡಿಸಿರುವ ಬ್ಯಾರಿಕೇಡ್ ಮತ್ತು ಬಸ್ ಆದ್ಯತಾ ಪಥದ ನಡುವೆ ಖಾಸಗಿ ವಾಹನಗಳಿಗೆ ಉಳಿದಿರುವ ಒಂದೇ ಪಥ



ಮಹದೇವಪುರದ ಬಳಿ ಮೆಟ್ರೊ ಕಾಮಗಾರಿಗೆ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸುತ್ತಿರುವುದು
–ಪ್ರಜಾವಾಣಿ ಚಿತ್ರಗಳು/ ಎಂ.ಎಸ್. ಮಂಜುನಾಥ್

ವರ್ತುಲ ರಸ್ತೆಯೇ ಚಕ್ರವ್ಯೂಹ 1

ಪ್ರಜಾವಾಣಿ ವಿಶೇಷ

ಬೆಂಗಳೂರಿನ ವಾಹನ ದಟ್ಟಣೆಯ ರಸ್ತೆಗಳಲ್ಲಿ ಈ ಹೊರ ವರ್ತುಲ ರಸ್ತೆ ಪ್ರಮುಖವಾದುದು. ಇಲ್ಲಿನ ದಟ್ಟಣೆ ಸಮಸ್ಯೆ ನಿವಾರಣೆಗಾಗಿಯೇ ಬಸ್ ಆದ್ಯತಾ ಪಥವನ್ನು ಬಿಬಿಎಂಪಿ ಮತ್ತು ಬಿಎಂಟಿಸಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿವೆ. ಆದರೆ, ಇದೇ ಬಸ್ ಪಥ ಮತ್ತು ಮೆಟ್ರೊ ಕಾಮಗಾರಿ ಈ ರಸ್ತೆಯಲ್ಲಿ ವಾಹನ ದಟ್ಟಣೆಯನ್ನು ಇನ್ನಷ್ಟು ಹೆಚ್ಚಿಸಲು ಕಾರಣವಾಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಸದ್ಯ ಮೆಟ್ರೊ ಕಾಮಗಾರಿ ಪರಿಪೂರ್ಣವಾಗಿ ಆರಂಭವಾಗಿಲ್ಲ. ಐ.ಟಿ ಕಂಪನಿ ಉದ್ಯೋಗಿಗಳು ಮನೆಯಿಂದ ಕೆಲಸ ಮಾಡುತ್ತಿದ್ದಾರೆ.



ಕಾಮಗಾರಿ ಮುಗಿಯುವ ತನಕ ಈ ರಸ್ತೆಯಲ್ಲಿ ಸಂಚಾರ ಮಾಡುವುದು ಹೇಗೆ ಎಂಬ ಭಯ ಶುರುವಾಗಿದೆ. ಬಸ್ ಆದ್ಯತಾ ಪಥ ಉಳಿಸಿಕೊಂಡರೆ ಸಂಚಾರ ಸಾಧ್ಯವೇ ಇಲ್ಲ –
ವೇಡಿಯಪ್ಪನ್, ಆಟೋರಿಕ್ಷಾ ಚಾಲಕ



ಕೋವಿಡ್ ಪೂರ್ವದಲ್ಲಿ ಈ ರಸ್ತೆಯಲ್ಲಿ ಒಂದು ಕಿ.ಮೀ. ಸಂಚರಿಸಲು ಕನಿಷ್ಠ ಅರ್ಧಗಂಟೆ ಬೇಕಿತ್ತು. ಈಗ ಸಮಸ್ಯೆ ಕಾಣಿಸುತ್ತಿಲ್ಲ, ಐ.ಟಿ ಕಂಪನಿಗಳು ಶುರುವಾದರೆ ಸಮಸ್ಯೆ ಉಲ್ಬಣಿಸಲಿದೆ
ಕೃಷ್ಣಮೂರ್ತಿ, ಟ್ಯಾಕ್ಸಿ ಚಾಲಕ

ಕೋವಿಡ್ ಆರ್ಭಟ ಕಡಿಮೆಯಾಗಿ ಐ.ಟಿ ಕಂಪನಿಗಳು ಕೋವಿಡ್ ಪೂರ್ವದಂತೆ ಕಾರ್ಯ ನಿರ್ವಹಿಸಿದರೆ ಈ ರಸ್ತೆಯಲ್ಲಿ ವಾಹನ ಸಂಚಾರ ಸಾಧ್ಯವೇ ಇಲ್ಲ ಎಂಬುದು ಅವರ ಆತಂಕ.

'ಬಸ್ ಆದ್ಯತಾ ಪಥ ನಿರ್ಮಿಸಿರುವ ಸರ್ಕಾರ, ಅದಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಂಡಿಲ್ಲ. ಸುತ್ತಮುತ್ತಲ ಬಡಾವಣೆಗಳ ಮನೆಗಳಿಂದ ಈ ಆದ್ಯತಾ ಪಥ ತಲುಪಲು ಬಸ್‌ಗಳ ವ್ಯವಸ್ಥೆ ಇಲ್ಲ. ಬಸ್ ಬರಬೇಕೆಂದರೆ ದೊಡ್ಡದಾದ ರಸ್ತೆಗಳಿಲ್ಲ. ಪರಿಸ್ಥಿತಿ ಹೀಗಿರುವಾಗ ಜನರು ತಮ್ಮ ಖಾಸಗಿ ವಾಹನ, ಇಲ್ಲವೇ ಆಟೋರಿಕ್ಷಾ ಅಥವಾ ಟ್ಯಾಕ್ಸಿ ಅವಲಂಬಿಸುತ್ತಾರೆ. ಬಸ್ ಪಥವನ್ನಷ್ಟೇ ನಿರ್ಮಿಸಿದರೆ ಸಾಲದು, ಅಲ್ಲಿಗೆ ಬರಲು ಸಾರ್ವಜನಿಕ ಸಂಪರ್ಕ ವ್ಯವಸ್ಥೆಯನ್ನೂ ಸರ್ಕಾರ ಕಲ್ಪಿಸಬೇಕು' ಎಂದು ಕಸವನಹಳ್ಳಿ ನಿವಾಸಿ ವಿಷ್ಣುಪ್ರಸಾದ್ ಹೇಳಿದರು.

ಬಸ್ ಪಥ ಮತ್ತು ಮೆಟ್ರೊ ಕಾಮಗಾರಿ ನಡುವೆ ಒಂದೇ ಪಥ ಖಾಸಗಿ ವಾಹನಗಳಿಗೆ ಉಳಿಯಲಿದೆ. ಐ.ಟಿ ಕಂಪನಿಗಳು ಪರಿಪೂರ್ಣವಾಗಿ ಆರಂಭವಾಗದಿದ್ದರೂ, ಶನಿವಾರ ಮತ್ತು ಭಾನುವಾರ ಈ ರಸ್ತೆಯಲ್ಲಿ ಸಂಚಾರ ಕಷ್ಟವಾಗಿದೆ. ಮೆಟ್ರೊ ಕಾಮಗಾರಿ ಮುಗಿಯುವ ತನಕ ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಲಿದೆ ಎಂದರು.

ಬಸ್ ಆದ್ಯತಾ ಪಥ ಉಳಿಸಿಕೊಳ್ಳಬೇಕೆಂದರೆ ಸರ್ಕಾರ ಅದಕ್ಕೆ ಅಗತ್ಯ ಮೂಲಸೌಕರ್ಯಗಳನ್ನು ನೀಡಬೇಕು ಎಂದು ಅವರು ಒತ್ತಾಯಿಸಿದರು.

'ಬಸ್ ಆದ್ಯತಾ ಪಥ ಉಳಿಯಲಿದೆ'

ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ ತನಕದ ಮೆಟ್ರೊ ಕಾಮಗಾರಿಗಾಗಿ ಬಸ್ ಆದ್ಯತಾ ಪಥ ತೆರವುಗೊಳಿಸುವುದಿಲ್ಲ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ನಿರ್ವಹಣೆ) ಬಿ.ಎಸ್. ಪ್ರಹ್ಲಾದ್ ಸ್ಪಷ್ಟಪಡಿಸಿದರು.

'ಕಾಮಗಾರಿ ನಿರ್ವಹಣೆ ಸಂದರ್ಭದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದೆ. ಸಮಸ್ಯೆಯಾದರೆ ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸಲು ಜನ ಮುಂದಾಗುತ್ತಾರೆ. ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗಾಗಿಯೇ ಬಸ್ ಆದ್ಯತಾ ಪಥ ನಿರ್ಮಿಸಲಾಗಿದೆ. ಜನ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದರು.

ಸುದ್ದಿಗೋಷ್ಠಿಯಲ್ಲಿ ಪರಿಸರ ಸಚಿವ ಆನಂದ್ ಸಿಂಗ್ ಹೇಳಿಕೆ

'ಅರಿಶಿನ ಗಣಪತಿ ತಯಾರಕರಿಗೆ ಬಹುಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ವರ್ಷ 10 ಲಕ್ಷ ಅರಿಶಿನ ಗಣೇಶ ನಿರ್ಮಿಸಿ ದಾಖಲೆ ಬರೆಯಲು ಮುಂದಾಗಿದ್ದು, ಇದಕ್ಕಾಗಿ ಅಭಿಯಾನವನ್ನೂ ಆರಂಭಿಸಿದೆ. ಇದರಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ವಿಶೇಷ ಬಹುಮಾನ ನೀಡಲು ನಿರ್ಧರಿಸಲಾಗಿದೆ' ಎಂದು ಪರಿಸರ ಸಚಿವ ಆನಂದ್ ಸಿಂಗ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಇಲ್ಲಿ ಮಾತನಾಡಿದ ಅವರು, 'ಅರಿಶಿನ ಗಣಪತಿ ತಯಾರಿಕೆ ಮತ್ತು ಅದರ ಮಹತ್ವದ ಕುರಿತ ವಿಡಿಯೊವನ್ನು ಮಂಡಳಿಯ ಆ್ಯಪ್‌ನಲ್ಲಿ ಹಾಕಲಾಗಿತ್ತು. ಅದನ್ನು ಈವರೆಗೆ 1 ಕೋಟಿ ಜನ ವೀಕ್ಷಿಸಿದ್ದಾರೆ. ಈ ಪೈಕಿ ಗಣಪತಿ ತಯಾರಿಕೆಯಲ್ಲಿ ಎಷ್ಟು ಮಂದಿ ತೊಡಗಿಕೊಂಡಿದ್ದಾರೆ ಎಂಬುದು ಗೊತ್ತಿಲ್ಲ. ಈ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಸಾರ್ವಜನಿಕರನ್ನು ಉತ್ತೇಜಿಸಬೇಕು. ಹೀಗಾಗಿ ಅತ್ಯುತ್ತಮವಾಗಿ ಗಣೇಶ ಮೂರ್ತಿ ನಿರ್ಮಿಸುವ ಮೂವರಿಗೆ ಬಹುಮಾನ ನೀಡಿ ಸನ್ಮಾನಿಸಲು ತೀರ್ಮಾನಿಸಿದ್ದೇವೆ' ಎಂದರು.

ಸಾರ್ವಜನಿಕ ಗಣೇಶೋತ್ಸವದ ಬಗ್ಗೆ ಪರ ವಿರೋಧದ ಚರ್ಚೆಗಳು ಶುರುವಾಗಿವೆ. ಈ ಬಗ್ಗೆ ಮುಖ್ಯಮಂತ್ರಿಯವರು ಸೂಕ್ತ ತೀರ್ಮಾನ ಕೈಗೊಳ್ಳಲಿದ್ದಾರೆ
ಆನಂದ್ ಸಿಂಗ್, ಪರಿಸರ ಸಚಿವ

'ನಾಗರಿಕರು ತಾವು ತಯಾರಿಸಿದ ಅರಿಶಿನ ಗಣಪತಿ ಮೂರ್ತಿಯ ಫೋಟೊ ತೆಗೆದು ಅದನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಆ್ಯಪ್‌ಗೆ ಅಪ್‌ಲೋಡ್ ಮಾಡಬೇಕು. ಈ ಪೈಕಿ ಅತ್ಯುತ್ತಮವಾದ ಮೂರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ' ಎಂದು ತಿಳಿಸಿದರು.

'ರಾಗಿ, ಅಕ್ಕಿ ಹಿಟ್ಟುಗಳಿಂದಲೂ ಗಣೇಶ ಮೂರ್ತಿ ನಿರ್ಮಿಸಬಹುದು. ಅರಿಶಿನದಲ್ಲಿ ರೋಗ ನಿರೋಧಕ ಅಂಶಗಳು ಹೆಚ್ಚಿರುತ್ತವೆ. ಈ ಉದ್ದೇಶದಿಂದ ಅರಿಸಿನ ಗಣಪತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರ ವಿಸರ್ಜನೆಯೂ ಬಹಳ ಸುಲಭ' ಎಂದರು.

'ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ (ಪಿಒಪಿ) ತಯಾರಿಸುವ ಗಣೇಶ ಮೂರ್ತಿಗಳು ಪರಿಸರಕ್ಕೆ ಮಾರಕ. ಇದನ್ನು ಸಂಪೂರ್ಣವಾಗಿ ನಿಷೇಧಿಸುವ ಆಲೋಚನೆ ಇದೆ. ಈ ಉದ್ಯಮವನ್ನು ನಂಬಿಕೊಂಡು ಅನೇಕ ಕಲಾವಿದರು ಬದುಕು ಕಟ್ಟಿಕೊಂಡಿದ್ದಾರೆ. ಏಕಾಏಕಿ ನಿರ್ಧಾರ ಕೈಗೊಂಡರೆ ಅವರಿಗೂ ತೊಂದರೆಯಾಗಬಹುದು. ಹೀಗಾಗಿ ಅವರೊಂದಿಗೆ ಸಭೆ ನಡೆಸಿ ಅಭಿಪ್ರಾಯ ಆಲಿಸಲಾಗುತ್ತದೆ. ಅವರಿಗೆ ಅಗತ್ಯ ನೆರವು ನೀಡುವ ಬಗ್ಗೆಯೂ ಚಿಂತನೆ ನಡೆಸಿದ್ದೇವೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಸ್ಪಷ್ಟ ತೀರ್ಮಾನ ಪ್ರಕಟಿಸುತ್ತೇವೆ' ಎಂದು ಹೇಳಿದರು.

'ಹೊರ ರಾಜ್ಯಗಳಲ್ಲಿ ತಯಾರಾದ ಪಿಒಪಿ ಗಣೇಶ ಮೂರ್ತಿಗಳನ್ನು ತಂದು ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಅಂತಹವರ ಮೇಲೆ ವಿಶೇಷ ನಿಗಾ ಇಡಲಾಗುತ್ತದೆ. ಅಧಿಕಾರಿಗಳು ವ್ಯಾಪಾರಿಗಳಿಂದ ಕಮಿಷನ್ ಪಡೆದು ಮಾರಾಟಕ್ಕೆ ಅನುವು ಮಾಡಿಕೊಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 10 ಲಕ್ಷ ಅರಿಶಿನ ಗಣೇಶ ನಿರ್ಮಿಸಿ ದಾಖಲೆ ಬರೆಯಲು ಮುಂದಾಗಿದ್ದು, ಈ ಅಭಿಯಾನದ ಪೋಸ್ಟರ್ ಅನ್ನು ಸಚಿವ ಆನಂದ್ ಸಿಂಗ್ ಬಿಡುಗಡೆ ಮಾಡಿದರು. ಮಂಡಳಿಯ ಅಧ್ಯಕ್ಷ ಬ್ರಿಜೇಶ್ ಕುಮಾರ್, ಸದಸ್ಯ ಕಾರ್ಯದರ್ಶಿ ಶ್ರೀನಿವಾಸುಲು ಇದ್ದರು
ಪ್ರಜಾವಾಣಿ ಚಿತ್ರ

'ಮಾಧ್ಯಮಗಳ ಮುಂದೆ ಹೇಳಲಾಗದು'

'ಇತ್ತೀಚಿನ ಬೆಳವಣಿಗೆಗಳಿಂದ ಸಾಕಷ್ಟು ಪಾಠ ಕಲಿತಿದ್ದೇನೆ. ಇನ್ನೊಬ್ಬರ ಖಾತೆಯ ವಿಚಾರದಲ್ಲಿ ತಲೆಹಾಕುವುದಿಲ್ಲ. ಯಾವುದೇ ವಿಷಯದ ಬಗ್ಗೆಯೂ ತಿಳಿದುಕೊಳ್ಳದೆ ಪ್ರತಿಕ್ರಿಯಿಸಬಾರದು ಎಂದು ಆಪ್ತರೊಬ್ಬರು ಸಲಹೆ ನೀಡಿದ್ದಾರೆ. ಅದನ್ನು ಪಾಲಿಸುತ್ತಿದ್ದೇನೆ' ಎಂದು ಆನಂದ್ ಸಿಂಗ್ ಹೇಳಿದರು.

'ಪರಿಸರ ಮತ್ತು ಪ್ರವಾಸೋದ್ಯಮವು ಉತ್ತಮ ಖಾತೆಯೇ. ಈ ಖಾತೆ ನೀಡಿರುವ ಬಗ್ಗೆ ಯಾವ ಅತೃಪ್ತಿಯೂ ಇಲ್ಲ. ಹೋಗಿ ಕೆಲಸ ಮಾಡು ಎಂದು ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಹೇಳಿದ್ದಾರೆ. ನನ್ನ ಕೆಲಸದಿಂದ ಅವರು ತೃಪ್ತರಾಗಬೇಕು. ಕೆಲ ಮನವಿಗಳನ್ನು ಮಾಡಿಕೊಂಡಿದ್ದೇನೆ. ಅದನ್ನು ಮಾಧ್ಯಮದವರ ಎದುರು ಬಿಡಿಸಿ ಹೇಳಲು ಸಾಧ್ಯವಿಲ್ಲ. ಅವು ಇನ್ನೂ ಬಾಕಿ ಇವೆ' ಎಂದೂ ತಿಳಿಸಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧೆಡೆ ಇದೇ 28ರಿಂದ 30ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಆಗಸ್ಟ್ 28: ನಡಕೇರಪ್ಪ ಇಂಡಸ್ಟ್ರೀಸ್, ಭೈರವೇಶ್ವರ ಇಂಡಸ್ಟ್ರೀಸ್, ಸೃಷ್ಟಿನಗರ, ವೀರಭದ್ರೇಶ್ವರ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶ.

ಆಗಸ್ಟ್ 29: ಬಯೊಕಾನ್, ಮಾರಗೊಂಡನಹಳ್ಳಿ, ಶಿಕಾರಿಪಾಳ್ಯ, ನಿಯೊ ಟೌನ್, ಜಿ.ಎಂ. ಅಪಾರ್ಟ್‌ಮೆಂಟ್, ತಿರುಪಾಳ್ಯ, ಗೊಲ್ಲಹಳ್ಳಿ, ವೀರಸಂದ್ರ, ಹೆಬ್ಬಗೋಡಿ, ವಿನಾಯಕ ನಗರ, ಜಿಗಣಿ ಸಂಪರ್ಕ ರಸ್ತೆ, ಆರ್.ಎಸ್.ಎಸ್. ಮೋಟಾರ್ಸ್, ಎಂ.ಟಿ.ಆರ್. ರಸ್ತೆ, ಎಸ್‌ಬಿಐ ಬ್ಯಾಂಕ್, ರಾಯಸಂದ್ರ, ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿ, ವೀರಸಂದ್ರ ಕೈಗಾರಿಕಾ ಪ್ರದೇಶ, ಅನಂತಸಂದ್ರ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ವಿದ್ಯಾನಗರ, ಹರಪ್ಪನಹಳ್ಳಿ, ಕೊಪ್ಪ, ಕೆಂಪಾಪುರ, ಬಂಡೇನಲ್ಲಸಂದ್ರ, ಕ್ಯಾಲಸನಹಳ್ಳಿ, ಜಿಗಣಿ ಕೈಗಾರಿಕಾ ಪ್ರದೇಶ, ಎಚ್.ಮಂಚನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶ.

ಆಗಸ್ಟ್ 30: ಕೇತಮಾರನಹಳ್ಳಿ, ಇಂದಿರಾನಗರ ಕೊಳೆಗೇರಿ, ಶೆಟ್ಟಿ ಬಡಾವಣೆ, ಶಿವನಹಳ್ಳಿ, ಭೋವಿ ಕಾಲೊನಿ, ತಿಮ್ಮಯ್ಯ ರಸ್ತೆ, ಮಹಾಗಣಪತಿನಗರ, ಗೃಹಲಕ್ಷ್ಮಿ ಬಡಾವಣೆ, ವಿಜಿಎನ್‌ಎಸ್‌ಎಸ್ ಪಿ ಆ್ಯಂಡ್ ಟಿ ಸ್ಪೋರ್ಟ್ಸ್, ಕಮಲಾನಗರ ಟಿಸಿ, ಗೌತಮ್ ಶಾಲೆ, ಗುಡ್ಡೆ ಗಣಪತಿ ದೇವಸ್ಥಾನ, ಆದರ್ಶ ಬಡಾವಣೆ, ಗಾಯತ್ರಿ ಬಡಾವಣೆ, ಹಳೆಯ ಉಪ ನೋಂದಣಾಧಿಕಾರಿಗಳ ಕಚೇರಿ, ವಸ್ತು ಸಂಗ್ರಹಾಲಯ ಕ್ವಾರ್ಟರ್ಸ್, ಕಾವೇರಿ ನಗರ, ಕೆಇಸಿ ಕಾಲೊನಿ 3ನೇ ಹಂತ, ವೆಂಕಟೇಶ್ವರ ಬಡಾವಣೆ, ಕರ್ನಾಟಕ ಬಡಾವಣೆ, ಎನ್‌ಜಿಒ ಕಾಲೊನಿ ಮತ್ತು ಸುತ್ತಮುತ್ತಲಿನ ಪ್ರದೇಶ.

10 ವರ್ಷಗಳಲ್ಲಿ ಸಂಪೂರ್ಣ ಅನುಷ್ಠಾನ ಗುರಿ: ಸಚಿವ ಅಶ್ವತ್ಥನಾರಾಯಣ

ಎನ್‌ಇಪಿ ಪಠ್ಯಕ್ರಮ ಸೆಪ್ಟೆಂಬರ್‌ಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಆಧಾರಿತ ಪಠ್ಯಕ್ರಮವು ಸೆಪ್ಟೆಂಬರ್ ಮೊದಲ ವಾರದ ವೇಳೆಗೆ ಸಿದ್ಧಗೊಳ್ಳಲಿದ್ದು, ಅ.1ರಿಂದ ತರಗತಿಗಳು ಪ್ರಾರಂಭವಾಗಲಿವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.



ಡಾ.ಸಿ.ಎನ್. ಅಶ್ವತ್ಥ ನಾರಾಯಣ

ನಗರದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಎನ್‌ಇಪಿಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲು 15 ವರ್ಷ ಅವಧಿ ಇದೆ. ಆದರೆ, ಕರ್ನಾಟಕದಲ್ಲಿ 10 ವರ್ಷಗಳಲ್ಲಿಯೇ ಅನುಷ್ಠಾನಗೊಳಿಸುವ ಗುರಿ ಹೊಂದಿದ್ದೇವೆ' ಎಂದರು.

ಖಾಸಗಿ ಸಹಭಾಗಿತ್ವ ಅನಿವಾರ್ಯ: 'ಒಟ್ಟು ಜಿಡಿಪಿಯ ಶೇ 1.8ರಷ್ಟು ಮೊತ್ತವನ್ನು ಮಾತ್ರ ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗುತ್ತಿದೆ. ಅದರಲ್ಲಿ, ಉನ್ನತ ಶಿಕ್ಷಣಕ್ಕೆ ಮೀಸಲಿಡುವ ಅನುದಾನ ತುಂಬಾ ಕಡಿಮೆ ಇದೆ. ಜಿಡಿಪಿಯ ಶೇ 6ರಷ್ಟು ಅನುದಾನ ಶಿಕ್ಷಣ ಕ್ಷೇತ್ರಕ್ಕೆ ಒದಗಿಸಬೇಕು ಎಂಬ ಬೇಡಿಕೆ ಇನ್ನೂ ಈಡೇರಿಲ್ಲ. ಇಂತಹ ಸಂದರ್ಭದಲ್ಲಿ ಖಾಸಗಿ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಅನಿವಾರ್ಯ' ಎಂದರು.

'ಶಿಕ್ಷಣ ಮತ್ತು ಕೈಗಾರಿಕೆಗಳಿಗೆ ಸಂಪರ್ಕವೇ ಇಲ್ಲದ ವ್ಯವಸ್ಥೆ ನಮ್ಮಲ್ಲಿದೆ. ನೂತನ ಶಿಕ್ಷಣ ವ್ಯವಸ್ಥೆಯು ಎಲ್ಲ ವಲಯವನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸುವಂತಾಗಿದೆ. ಕೈಗಾರಿಕೆಗಳಲ್ಲಿ ವಿದ್ಯಾರ್ಥಿಗಳನ್ನು ಪ್ರಶಿಕ್ಷಣಾರ್ಥಿಯಾಗಿ ತೆಗೆದುಕೊಳ್ಳಲಾಗುತ್ತದೆಯಲ್ಲದೆ, ಅವರಿಗೆ ವೇತನವನ್ನೂ ನೀಡುವ ಬಗ್ಗೆ ಕೈಗಾರಿಕೋದ್ಯಮಿಗಳೊಂದಿಗೆ ಚರ್ಚಿಸಲಾಗಿದೆ' ಎಂದರು.

ತರಾತುರಿ ಇಲ್ಲ: 'ನೂತನ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿಗೆ ತರುತ್ತಿಲ್ಲ. 2020ರಲ್ಲಿಯೇ ನೀತಿಯು ಅಂತಿಮವಾಗಿದೆ. 2021–22ರಿಂದಲೇ ಈ ನೀತಿಯನ್ನು ಜಾರಿಗೆ ತರಬೇಕು ಎಂದು ಆಗಲೇ ನಿರ್ಧರಿಸಲಾಗಿತ್ತು. ಎಲ್ಲ ಸಾಧಕ–ಬಾಧಕ ಪರಿಶೀಲಿಸಿ, ಚರ್ಚಿಸಿದ ನಂತರವೇ ಜಾರಿ ಮಾಡಲಾಗಿದೆ. ದೇಶದಲ್ಲಿಯೇ ಈ ನೀತಿಯನ್ನು ಮೊದಲು ಜಾರಿ ಮಾಡುತ್ತಿರುವ ವಿಷಯವನ್ನೂ ನಾವು ಪ್ರತಿಷ್ಠೆಯಾಗಿ ತೆಗೆದುಕೊಂಡಿಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದರು.

'ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅವಶ್ಯಕತೆಯೇ ಬೇರೆ, ಕಲಿಕೆಯೇ ಬೇರೆ ಎನ್ನುವಂತಿತ್ತು. ಈಗ ತಮಗೆ ಇಷ್ಟಬಂದ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ಇದೆಯಲ್ಲದೆ, ಅವರಲ್ಲಿ ಕೌಶಲ ಅಭಿವೃದ್ಧಿಪಡಿಸಿ, ಉದ್ಯೋಗ ಸಾಮರ್ಥ್ಯ ಹೆಚ್ಚಿಸುವ ರೀತಿಯಲ್ಲಿ ನೂತನ ನೀತಿ ರೂಪಿಸಲಾಗಿದೆ' ಎಂದರು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ ಹಾಗೂ ವಿವಿಧ ಪತ್ರಿಕೆಗಳ ಸಂಪಾದಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪದವಿ: ಕನ್ನಡ ಕಲಿಕೆ ಕಡ್ಡಾಯ

'ಪದವಿಯ ಮೊದಲ ಎರಡು ವರ್ಷಗಳಲ್ಲಿ ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯ. ಕನ್ನಡೇತರ ವಿದ್ಯಾರ್ಥಿಗಳು ಸಂವಹನ ಭಾಷೆಯಾಗಿ ಮಾತ್ರ ಕನ್ನಡವನ್ನು ಕಲಿಯಬಹುದು' ಎಂದು ಡಾ.ಸಿ.ಎನ್. ಅಶ್ವತ್ಥ ನಾರಾಯಣ ಸ್ಪಷ್ಟಪಡಿಸಿದರು.

'ಎರಡು ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ಇದೆ. ಆದರೆ, ಅದರಲ್ಲಿ ಒಂದು ಭಾಷೆ ಕನ್ನಡವಾಗಿರುವುದು ಕಡ್ಡಾಯ. ಮತ್ತೊಂದು ಅವರಿಗೆ ಇಷ್ಟ ಬಂದ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು' ಎಂದರು.

ಮತದಾರರ ಪಟ್ಟಿ: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಭಾರತ ಚುನಾವಣಾ ಆಯೋಗವು 2022ರ ಜನವರಿ 1ಕ್ಕೆ ಅರ್ಹತಾ ದಿನಾಂಕ ನಿಗದಿಪಡಿಸಿ, ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯ ನಡೆಸುವ ಸಲುವಾಗಿ ವೇಳಾಪಟ್ಟಿ ಪ್ರಕಟಿಸಿದೆ. ಆಯೋಗದ ಸೂಚನೆಯಂತೆ ಬಿಬಿಎಂಪಿಯೂ ಪರಿಷ್ಕೃತ ವೇಳಾಪಟ್ಟಿ ಹೊರಡಿಸಿದೆ.

ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸಬೇಕು ಹಾಗೂ ನಕಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಸೂಚಿಸಿದ್ದಾರೆ.

ನ.8ರೊಳಗೆ ಸಮಗ್ರ ಕರಡು ಮತದಾರರ ಪಟ್ಟಿಯನ್ನು ನೀಡಬೇಕು. ಹಕ್ಕು ಮತ್ತು ಆಕ್ಷೇಪಣೆಗಳನ್ನು ಡಿ.8ರೊಳಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ನ. 7, 14, 21 ಹಾಗೂ 28ರ ಭಾನುವಾರ ವಿಶೇಷ ಪ್ರಚಾರದ ದಿನಗಳಾಗಿ ನಿಗದಿ ಪಡಿಸಲಾಗಿದೆ.

'ಯುಪಿಎಸ್‌ಸಿ ಪರೀಕ್ಷೆ ಪ್ರಾದೇಶಿಕ ಭಾಷೆಯಲ್ಲಿರಲಿ'

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಅ.10ರಂದು ನಡೆಸಲಿರುವ ನಾಗರಿಕ ಸೇವೆಗಳ ಪ್ರಾಥಮಿಕ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಪೂರ್ವಭಾವಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ಇಲ್ಲದಿರುವುದರಿಂದ ಗ್ರಾಮೀಣ ಭಾಗದ ಪ್ರತಿಭಾನ್ವಿತ ಅಭ್ಯರ್ಥಿಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಪೂರ್ವಭಾವಿ ಪರೀಕ್ಷೆಯು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಇರುವುದು ಸಮಸ್ಯೆಯಾಗಿದೆ. ಗೊತ್ತಿರದ ಭಾಷೆಗಳಲ್ಲಿ ಅಭ್ಯರ್ಥಿಗಳಿಗೆ ತಮ್ಮ ಸಂಪೂರ್ಣ ಸಾಮರ್ಥ್ಯ ಪ್ರದರ್ಶಿಸಲು ಸಾಧ್ಯವಾಗುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಐಎಎಸ್ ಪೂರ್ವಭಾವಿ ಪರೀಕ್ಷೆಯ ಪಠ್ಯ ಮತ್ತು ಕರ್ನಾಟಕ ಸರ್ಕಾರ ನಡೆಸುವ ಕೆಎಎಸ್ ಪೂರ್ವಭಾವಿ ಪರೀಕ್ಷೆಯ ಪಠ್ಯದಲ್ಲಿ ಬಹುತೇಕ ಸಾಮ್ಯತೆ ಇರುತ್ತದೆ. ಭಾಷಾ ಸಮಸ್ಯೆಯಿಂದ ಐಎಎಸ್ ಪರೀಕ್ಷೆಯಲ್ಲಿ ಹೆಚ್ಚಿನ ಅಭ್ಯರ್ಥಿಗಳಿಗೆ ಯಶಸ್ಸು ಸಾಧ್ಯವಾಗುತ್ತಿಲ್ಲ. ಇದರಿಂದ ಕನ್ನಡಿಗರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಆಗ್ರಹಿಸಿದ್ದಾರೆ.



ಪಾರ್ಸೆಲ್‌ನಲ್ಲಿದ್ದ ಸೌಂದರ್ಯವರ್ಧಕಗಳು ಹಾಗೂ ಡ್ರಗ್ಸ್

ಸೌಂದರ್ಯವರ್ಧಕ ಪಾರ್ಸೆಲ್‌ನಲ್ಲಿ ಡ್ರಗ್ಸ್ !

ಬೆಂಗಳೂರು: ಸೌಂದರ್ಯವರ್ಧಕ ಪಾರ್ಸೆಲ್‌ನಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 40 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿರುವ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು, ಆರೋಪಿ ಎಸ್. ಯೋಗಿತಾ ಎಂಬುವರನ್ನು ಬಂಧಿಸಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿಯ ಅಂಚೆ ಕಚೇರಿಗೆ ಬಂದಿದ್ದ ಪಾರ್ಸೆಲ್‌ನಲ್ಲಿ ಡ್ರಗ್ಸ್ ಇರುವ ಬಗ್ಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ಹೋಗಿ ಕಚೇರಿ ಮೇಲೆ ನಿಗಾ ವಹಿಸಲಾಗಿತ್ತು. ಆರೋಪಿಯೇ ಪಾರ್ಸೆಲ್ ತೆಗೆದುಕೊಂಡು ಹೋಗಲು ಕಚೇರಿಗೆ ಬಂದಿದ್ದರು. ಅದೇ ಸಂದರ್ಭದಲ್ಲಿ ಅವರನ್ನು ವಶಕ್ಕೆ ಪಡೆಯಲಾಯಿತು' ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

'ಸೌಂದರ್ಯವರ್ಧಕಗಳಲ್ಲಿ ಎಂಡಿಎಂಎ ಡ್ರಗ್ಸ್ ಹರಳುಗಳನ್ನು ಬಚ್ಚಿಟ್ಟು ಪಾರ್ಸೆಲ್ ಸಿದ್ಧಪಡಿಸಲಾಗಿತ್ತು. ಜರ್ಮನಿಯಿಂದ ಅಂತರರಾಷ್ಟ್ರೀಯ ಅಂಚೆ ಮೂಲಕ ಎಲೆಕ್ಟ್ರಾನಿಕ್ ಸಿಟಿ ಅಂಚೆ ಕಚೇರಿಗೆ ಕಳುಹಿಸಲಾಗಿತ್ತು. ಆರಂಭದಲ್ಲಿ ಪಾರ್ಸೆಲ್ ತೆರೆದಾಗ ಸೌಂದರ್ಯವರ್ಧಕಗಳು ಮಾತ್ರ ಕಂಡಿದ್ದವು. ಅವುಗಳನ್ನು ಸಂಪೂರ್ಣವಾಗಿ ತೆರೆದು ನೋಡಿದಾಗ ಎಂಡಿಎಂಎ ಡ್ರಗ್ಸ್ ಪತ್ತೆಯಾಯಿತು' ಎಂದೂ ತಿಳಿಸಿವೆ.

'ಆಫ್ರಿಕಾ ಪ್ರಜೆಗಳ ಜೊತೆ ನಂಟು ಹೊಂದಿದ್ದ ಆರೋಪಿ ಯೋಗಿತಾ, ಪಾರ್ಸೆಲ್‌ನಲ್ಲಿ ಡ್ರಗ್ಸ್ ತರಿಸಿ ನಗರದ ಹಲವರಿಗೆ ಮಾರುತ್ತಿದ್ದರು. ಮೂರು ವರ್ಷಗಳಿಂದ ಆರೋಪಿ ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಆಕೆಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದೂ ಎನ್‌ಸಿಬಿ ಮೂಲಗಳು ಹೇಳಿವೆ.

ಬಿಡಿಭಾಗ ಕಳವು; ಸೆಕ್ಯುರಿಟಿ ಸಿಬ್ಬಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಸಂಸ್ಥೆಗಳಲ್ಲಿ ಕಂಪ್ಯೂಟರ್ ಬಿಡಿಭಾಗ ಕಳವು ಮಾಡಿದ್ದ ಆರೋಪದಡಿ ರಾಜಪಾತ್ರ ಎಂಬಾತನನ್ನು ಬಾಗಲೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಒಡಿಶಾದ ರಾಜಪಾತ್ರ, ತಾನೊಬ್ಬ ಎಂಜಿನಿಯರಿಂಗ್ ಪದವೀಧರನೆಂದು ಹೇಳುತ್ತಿದ್ದಾನೆ. ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆಯೇ ಆತ ನಗರಕ್ಕೆ ಬಂದಿದ್ದ. ವಿದ್ಯಾರ್ಹತೆಗೆ ತಕ್ಕ ಕೆಲಸ ಸಿಗದಿದ್ದಾಗ, ಕಂಪನಿಗಳಲ್ಲಿ ಸೆಕ್ಯುರಿಟಿ ಸಿಬ್ಬಂದಿ ಆಗಿ ಕೆಲಸಕ್ಕೆ ಸೇರಿದ್ದ. ಇದುವರೆಗೆ ಆತ ₹ 40 ಲಕ್ಷ ಮೌಲ್ಯದ ಬಿಡಿಭಾಗಗಳನ್ನು ಕದ್ದಿರುವ ಮಾಹಿತಿ ಇದ್ದು, ಜಪ್ತಿ ಪ್ರಕ್ರಿಯೆ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಸ್ಥೆಗಳಲ್ಲಿರುವ ಲ್ಯಾಬ್‌ಗಳಿಗೆ ಹೋಗುತ್ತಿದ್ದ ಆರೋಪಿ, ಬಿಡಿಭಾಗಗಳನ್ನು ಗುರುತಿಸುತ್ತಿದ್ದ. ರಾತ್ರಿ ಸಮಯದಲ್ಲಿ ಬಿಡಿಭಾಗಗಳನ್ನು ಕದ್ದೊಯ್ಯುತ್ತಿದ್ದ. ಅವುಗಳನ್ನು ಹಲವೆಡೆ ಮಾರಾಟ ಮಾಡುತ್ತಿದ್ದ. ಇತ್ತೀಚೆಗೆ ಆರೋಪಿ ಕೃತ್ಯ ಸಂಸ್ಥೆಯೊಂದರ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಸಂಸ್ಥೆ ಮುಖ್ಯಸ್ಥರು ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿವೆ.

ಸರ ಕಳವು: ಗುತ್ತಿಗೆ ನೌಕರ ಬಂಧನ

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಚಿನ್ನದ ಸರ ಕದ್ದುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಮಾರುತಿ (30) ಎಂಬಾತನನ್ನು ಸಾರ್ವಜನಿಕರೇ ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಶಿರಾದ ಮಾರುತಿ, ಐಟಿಐ ಪೂರ್ಣಗೊಳಿಸಿದ್ದ. ನಗರದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಡೆಟ್‌ನಲ್ಲಿ (ಬಿಇಎಲ್) ಗುತ್ತಿಗೆ ಆಧಾರದಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದ. ವಿಜಯಾನಂದನಗರದಲ್ಲಿ ವಾಸವಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಜಯಾನಂದನಗರದ ನಿವಾಸಿಯಾದ ಮಹಿಳೆ, ಆಗಸ್ಟ್ 19ರಂದು ತರಕಾರಿ ತರಲು ಮಾರುಕಟ್ಟೆಗೆ ಹೊರಟಿದ್ದರು. ಅದೇ ಸಂದರ್ಭದಲ್ಲೇ ಬೈಕ್‌ನಲ್ಲಿ ಬಂದಿದ್ದ ಆರೋಪಿ, ಮಹಿಳೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದ್ದ, ಮಹಿಳೆ ಸಹಾಯಕ್ಕೆ ಬಂದ ಸ್ಥಳೀಯರು, ಆರೋಪಿಯನ್ನು ಬೆನ್ನಟ್ಟಿ ಹಿಡಿದಿದ್ದರು.' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಆರೋಪಿಯನ್ನು ವಿಚಾರಣೆ ನಡೆಸಿದಾಗ, ನಗರದ ಎರಡು ಕಡೆ ಸರ ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಆತನಿಂದ ₹ 1.99 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಬಿಹಾರದಲ್ಲಿ ಕೊಲೆ; ನಗರದಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಬೆಂಗಳೂರು: ಬಿಹಾರದಲ್ಲಿ ವ್ಯಕ್ತಿಯೊಬ್ಬರನ್ನು ಕೊಂದು ಬಂಧನದ ಭೀತಿಯಲ್ಲಿ ಬೆಂಗಳೂರಿಗೆ ಬಂದಿದ್ದ ಇಬ್ಬರು ಆರೋಪಿಗಳು, ನಗರದ ಚಿಕ್ಕಜಾಲ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಬಿಹಾರದ ಚಂಪಾನೇರ್ ಜಿಲ್ಲೆಯ ಮೊಹಮ್ಮದ್ ಇಸ್ತಿಯಾಕ್ ಹಾಗೂ ಶಬ್ಬೀರ್ ಬಂಧಿತರು. ಅವರ ಬಂಧನದ ಬಗ್ಗೆ ಬಿಹಾರ ಪೊಲೀಸರಿಗೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಮ್ಮೂರಿನಲ್ಲಿ ವ್ಯಕ್ತಿಯೊಬ್ಬರ ಜೊತೆ ಆರೋಪಿಗಳು ಗಲಾಟೆ ಮಾಡಿಕೊಂಡಿದ್ದರು. ಅವೇ ವೈಷಮ್ಯದಿಂದಾಗಿ ಆ ವ್ಯಕ್ತಿಯನ್ನು ಗುಂಡಿಕ್ಕಿ ಕೊಂದಿದ್ದರು. ಸ್ಥಳೀಯ ಪೊಲೀಸರಿಂದ ತಪ್ಪಿಸಿಕೊಳ್ಳಲು ಆರೋಪಿಗಳು ನಗರಕ್ಕೆ ಬಂದಿದ್ದರು.'

'ಹವಾನಿಯಂತ್ರಿತ (ಎ.ಸಿ) ಉಪಕರಣ ದುರಸ್ತಿ ಮಾಡುತ್ತಿದ್ದ ಆರೋಪಿಗಳು, ನಗರದಲ್ಲೂ ಕಳ್ಳತನ ಮಾಡಲು ಸಂಚು ರೂಪಿಸಿದ್ದರು. ಆಗಸ್ಟ್ 1ರಂದು ಎರಡು ಮಳಿಗೆಗಳಿಗೆ ನುಗ್ಗಿ ಮೊಬೈಲ್‌ಗಳನ್ನು ದೋಚಿದ್ದರು. ಈ ಸಂಬಂಧ ದಾಖಲಾದ ದೂರಿನ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ವಿಚಾರಣೆ ನಡೆಸಿದಾಗ, ಬಿಹಾರದ ಕೊಲೆ ರಹಸ್ಯ ಬಯಲಾಗಿದೆ. ಆರೋಪಿಗಳಿಂದ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಚಿನ್ನಾಭರಣ ಸುಲಿಗೆ ಆರೋಪಿಗಳ ಹಿಡಿದುಕೊಟ್ಟ 'ಐಎಂಇಐ'

ಬೆಂಗಳೂರು: ಚಿನ್ನಾಭರಣ ಹಾಗೂ ಮೊಬೈಲ್ ಸುಲಿಗೆ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳು, ಸ್ನೇಹಿತನಿಗೆ ಮಾರಿದ್ದ ಮೊಬೈಲ್‌ನ ಐಎಂಇಐ (ಅಂತರರಾಷ್ಟ್ರೀಯ ಮೊಬೈಲ್ ಸಾಧನ ಗುರುತು) ಸುಳಿವಿನಿಂದ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ನಗರದ ಹಲವೆಡೆ ನಡೆದಿದ್ದ ಸುಲಿಗೆ ಪ್ರಕರಣಗಳಲ್ಲಿ ಆಕಾಶ್ (21) ಹಾಗೂ ಕೆಂಪರಾಜು (25) ಎಂಬುವರನ್ನು ಬಂಧಿಸಲಾಗಿದೆ. ಅವರಿಂದ ₹4.55 ಲಕ್ಷ ಮೌಲ್ಯದ 26 ಮೊಬೈಲ್ ಹಾಗೂ 20 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಗೋಪಾಲನಗರ ನಿವಾಸಿಗಳಾದ ಆರೋಪಿಗಳಿಬ್ಬರು, ಅಪರಾಧ ಹಿನ್ನೆಲೆಯುಳ್ಳವರು. ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವವರು ಹಾಗೂ ಮನೆ ಮುಂದೆ ನಿಂತಿರುತ್ತಿದ್ದವರನ್ನು ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದರು' ಎಂದೂ ತಿಳಿಸಿದರು.

'ಸೀನಪ್ಪ ಮೈದಾನ ಬಳಿ ನಡೆದುಕೊಂಡು ಹೊರಟಿದ್ದ ವ್ಯಕ್ತಿಯೊಬ್ಬರ ಮೊಬೈಲ್ ಸುಲಿಗೆ ಆಗಿತ್ತು. ಆ ಬಗ್ಗೆ ದಾಖಲಾದ ದೂರಿನಡಿ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಹೇಳಿದರು.

ಸ್ನೇಹಿತನಿಗೆ ಮೊಬೈಲ್ ಮಾರಾಟ: 'ಸುಲಿಗೆ ಮಾಡಿದ್ದ ಮೊಬೈಲ್‌ಗಳನ್ನು ಆರಂಭದಲ್ಲಿ ತಾವೇ ಉಪಯೋಗಿಸುತ್ತಿದ್ದ ಆರೋಪಿಗಳು, ಕೆಲದಿನ ಬಿಟ್ಟು ಬೇರೆಯವರಿಗೆ ಮಾರಾಟ ಮಾಡುತ್ತಿದ್ದರು.' ಎಂದು ಪೊಲೀಸರು ತಿಳಿಸಿದರು.

'ಮೊಬೈಲ್‌ನ ಐಎಂಇಐ ಆಧರಿಸಿ ಸ್ನೇಹಿತನನ್ನು ಪತ್ತೆ ಮಾಡಲಾಯಿತು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ ಆಕಾಶ್ ಹಾಗೂ ಕೆಂಪರಾಜು ಹೆಸರು ಬಾಯ್ಬಿಟ್ಟ' ಎಂದೂ ಹೇಳಿದರು.

ಜಾಮೀನು ಮೇಲೆ ಹೊರಬಂದಿದ್ದರು: 'ಬಂಧಿತ ಆರೋಪಿಗಳು, ಈ ಹಿಂದೆ ಕೊಲೆ ಯತ್ನ ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ಸುಲಿಗೆ, ಮನೆಯಲ್ಲಿ ಕಳ್ಳತನ, ವಾಹನ ಕಳವು ಸೇರಿದಂತೆ ಹಲವು ಪ್ರಕರಣಗಳಲ್ಲಿ ಅವರಿಬ್ಬರು ಭಾಗಿಯಾಗಿದ್ದರು' ಎಂದೂ ತಿಳಿಸಿದರು.

ಒಂದೇ ದಿನದಲ್ಲಿ ಒಂದು ಕೋಟಿ ಲಸಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಶುಕ್ರವಾರ ಒಂದು ಕೋಟಿಗೂ ಹೆಚ್ಚು ಕೋವಿಡ್–19 ಲಸಿಕೆಯ ಡೋಸ್‌ಗಳನ್ನು ಹಾಕಲಾಗಿದೆ.

ಕೋವಿನ್ ಡ್ಯಾಷ್‌ಬೋರ್ಡ್ ಮಾಹಿತಿ ಪ್ರಕಾರ 1,00,64,032 ಡೋಸ್‌ಗಳನ್ನು ಹಾಕಲಾಗಿದೆ. ಇದರಿಂದ, ಇದುವರೆಗೆ ಒಟ್ಟು 62.17 ಕೋಟಿ ಡೋಸ್‌ಗಳನ್ನು ಹಾಕಲಾಗಿದೆ.

'ಶುಕ್ರವಾರ ದಾಖಲೆಯ ಸಂಖ್ಯೆಯಲ್ಲಿ ಲಸಿಕೆ ಹಾಕಲಾಗಿದೆ. ಒಂದು ಕೋಟಿ ದಾಟಿರುವುದು ಮಹತ್ವದ ಸಾಧನೆ. ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡು ಯಶಸ್ಸುಗೊಳಿಸಲು ಶ್ರಮಿಸುತ್ತಿರುವ ಎಲ್ಲರಿಗೂ ಅಭಿನಂದನೆಗಳು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

48.08 ಕೋಟಿ ಮಂದಿ ಮೊದಲನೇ ಡೋಸ್ ಹಾಗೂ 14.08 ಕೋಟಿ ಮಂದಿ ಎರಡೂ ಡೋಸ್ ಪಡೆದಿದ್ದಾರೆ.

ವಾಣಿಜ್ಯ, ಕೈಗಾರಿಕಾ ಸಂಸ್ಥೆಗಳು, ಹೋಟೆಲ್ ಸಂಘಟನೆ ಜೊತೆ ಬಿಬಿಎಂಪಿ ಮುಖ್ಯ ಆಯುಕ್ತರ ಸಭೆ

'ನಿತ್ಯ 80 ಸಾವಿರ ಮಂದಿಗೆ ಲಸಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯ ಪ್ರತಿ ವಾರ್ಡ್‌ಗೆ ನಿತ್ಯ 400 ಅಥವಾ ಅದಕ್ಕಿಂತಲೂ ಹೆಚ್ಚು ಲಸಿಕೆಯನ್ನು ಆದ್ಯತೆ ಮೇರೆಗೆ ಪೂರೈಕೆ ಮಾಡಲಾಗುತ್ತಿದೆ. ನಿತ್ಯ 80,000 ರಿಂದ 90,000 ಮಂದಿ ಲಸಿಕೆ ಪಡೆಯುತ್ತಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ನಗರದ ವಾಣಿಜ್ಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಹೋಟೆಲ್ ಸಂಘಟನೆಗಳು ಸೇರಿದಂತೆ ಇನ್ನಿತರೆ ಸಂಘಗಳ ಜೊತೆ ಶುಕ್ರವಾರ ಆನ್‌ಲೈನ್‌ನಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹೋಟೆಲ್, ರೆಸ್ಟೋರೆಂಟ್, ಕಚೇರಿಗಳು ಹಾಗೂ ಹೆಚ್ಚು ಜನಸೇರುವ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿ ಕಡ್ಡಾಯವಾಗಿ ಲಸಿಕೆ ಪಡೆಯಬೇಕು' ಎಂದರು.

'ನಗರದಲ್ಲಿ ಶೇ 74ರಷ್ಟು ಜನರು ಮೊದಲನೇ ಡೋಸ್ ಹಾಗೂ ಶೇ 26ರಷ್ಟು ಜನರು ಎರಡನೇ ಡೋಸ್ ಲಸಿಕೆಯನ್ನು ಪಡೆದಿದ್ದಾರೆ' ಎಂದರು.

'50 ಹಾಗೂ ಅದಕ್ಕಿಂತ ಹೆಚ್ಚಿನ ಮಂದಿ ಲಸಿಕೆ ಪಡೆಯಬೇಕಾದರೆ ಪಾಲಿಕೆ ವತಿಯಿಂದ ವಿಶೇಷ ಲಸಿಕಾ ಶಿಬಿರದ ವ್ಯವಸ್ಥೆ ಮಾಡಿ ಸ್ಥಳಕ್ಕೆ ಬಂದು ಲಸಿಕೆ ನೀಡಲಾಗುವುದು' ಎಂದು ಹೇಳಿದರು.

ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್, 'ಇದೇ 31ರೊಳಗೆ ಎಲ್ಲ ಸಿಬ್ಬಂದಿ ಲಸಿಕೆ ಪಡೆದಿರಬೇಕು. ಸೆಪ್ಟೆಂಬರ್ 1 ರಿಂದ ಪಾಲಿಕೆಯ ಆರೋಗ್ಯಾಧಿಕಾರಿಗಳು, ಮಾರ್ಷಲ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಈ ವೇಳೆ ಕೋವಿಡ್ ನಿಯಮವನ್ನು ಉಲ್ಲಂಘಿಸುವುದು ಕಂಡುಬಂದರೆ ನಿಯಮಾನುಸಾರ ದಂಡ ವಿಧಿಸಲಿದ್ದಾರೆ' ಎಂದು ತಿಳಿಸಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,36,615 ಒಟ್ಟು ಪ್ರಕರಣಗಳು ▲ (12,36,229 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,341 ▼	12,13,296 ▲	15,977 ▲

ದಿನದ ಏರಿಕೆ

ಹೊಸ ಪ್ರಕರಣ	386 ▲
ಗುಣಮುಖ	386 ▲
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಕೋವಿಡೇತರ ಮಕ್ಕಳಿಗೂ ಪರೀಕ್ಷೆ ನಡೆಸಿ'

ಕೋವಿಡ್ ಮೂರನೇ ಅಲೆಯು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂಬ ವರದಿಗಳು ಇರುವುದರಿಂದ, ಕನಿಷ್ಠ ಶೇ 10ರಷ್ಟು ಕೋವಿಡೇತರ ಮಕ್ಕಳಿಗೂ ಕೋವಿಡ್ ಪರೀಕ್ಷೆ ನಡೆಸಬೇಕು ಎಂದು ಬಿಬಿಎಂಪಿಯು ಎಲ್ಲ ವೈದ್ಯಕೀಯ ಸಂಸ್ಥೆಗಳು ಮತ್ತು ಆಸ್ಪತ್ರೆಗಳಿಗೆ ಸೂಚನೆ ನೀಡಿದೆ.

'ಇಂತಹ ಮಕ್ಕಳ ಗಂಟಲು ದ್ರವದ ಮಾದರಿಯ ಪರೀಕ್ಷೆ ನಂತರ, ಸೋಂಕು ದೃಢಪಟ್ಟಲ್ಲಿ ವೈದ್ಯರು ಅನುಕ್ರಮಣಿಕೆ ಪರೀಕ್ಷೆಗೆ ಕಳುಹಿಸಬೇಕು. ಬಿಬಿಎಂಪಿಯ ವಲಯ ತಂಡಗಳೊಂದಿಗೆ ಈ ಬಗ್ಗೆ ಸಂವಹನ ಸಾಧಿಸಬೇಕು' ಎಂದು ಹೇಳಿದೆ.

ಈ ಕಾರ್ಯಕ್ಕೆ ಸಂಬಂಧಿಸಿದಂತೆ ಡಾ. ದೀಪಕ್ ನಾಡಿಗ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಮಕ್ಕಳಲ್ಲಿ ಜ್ವರ, ತೀವ್ರ ಉಸಿರಾಟದ ತೊಂದರೆ ಸೇರಿದಂತೆ ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದರೆ, ಅದರ ವಿವರವನ್ನು ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು) ಪೋರ್ಟಲ್‌ನಲ್ಲಿ ದಾಖಲಿಸಬೇಕು. ಜೊತೆಗೆ, ಮಗುವಿನ ಹೆಸರು, ಸಂಪರ್ಕ ಸಂಖ್ಯೆ ಹಾಗೂ ವಿಳಾಸವನ್ನೂ ದಾಖಲಿಸಬೇಕು ಎಂದೂ ಸೂಚಿಸಲಾಗಿದೆ.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.59 ಕೋಟಿ ▲	3.26 ಕೋಟಿ
ಸಕ್ರಿಯ ಪ್ರಕರಣ	1.83 ಕೋಟಿ ▲	3.53 ಲಕ್ಷ ▲
ಗುಣಮುಖ	19.30 ಕೋಟಿ ▲	3.18 ಕೋಟಿ
ಸಾವು	44.94 ಲಕ್ಷ ▲	4.37 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.23 ಲಕ್ಷ	46,761 ▲
ಗುಣಮುಖ	5.87 ಲಕ್ಷ ▲	31,204 ▼
ಸಾವು	10,806 ▲	512 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.69 ಲಕ್ಷ ▼ ಅಮೆರಿಕ | 38,281 ▲ ಬ್ರಿಟನ್ | 31,024 ▼ ಬ್ರೆಜಿಲ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
79.58 ▲ ಅಮೆರಿಕ | 12.45 ▼ ಬ್ರಿಟನ್ | 4.89 ಬ್ರೆಜಿಲ್

(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.36 ಲಕ್ಷ ▲ ಮಹಾರಾಷ್ಟ್ರ
34,835 ▲ ತಮಿಳುನಾಡು
25,080 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
64.47 ಮಹಾರಾಷ್ಟ್ರ ▲
39.46 ಕೇರಳ ▲
26.08 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ರಸ್ತೆ ನಿರ್ಮಾಣ: ರಾಜ್ಯವನ್ನು ಶ್ಲಾಘಿಸಿದ ಬಿಹಾರ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ನಿರ್ಮಾಣ ಮತ್ತು ಸಂಪರ್ಕ ಸುಧಾರಣೆಯಲ್ಲಿ ಕರ್ನಾಟಕವು ಮಾದರಿಯಾಗಿದೆ. ಮುಂದಿನ ದಿನಗಳಲ್ಲಿ ಬಿಹಾರದಲ್ಲೂ ಈ ಮಾದರಿಯನ್ನು ಅನುಸರಿಸಲಾಗುವುದು' ಎಂದು ಬಿಹಾರದ ರಸ್ತೆ ನಿರ್ಮಾಣ ಸಚಿವ ನಿತಿನ್ ನಬಿನ್ ಹೇಳಿದರು.

ರಾಜ್ಯದ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರನ್ನು ವಿಕಾಸಸೌಧದಲ್ಲಿ ಶುಕ್ರವಾರ ಭೇಟಿಮಾಡಿದ ನಿತಿನ್, ರಾಜ್ಯದಲ್ಲಿನ ರಸ್ತೆ ಅಭಿವೃದ್ಧಿ ಯೋಜನೆಗಳ ಕುರಿತು ಮಾಹಿತಿ ಪಡೆದರು.

ಬಳಿಕ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಮೂಲೆ ಮೂಲೆಗೂ ಹೆದ್ದಾರಿಗಳ ಜಾಲವನ್ನು ವಿಸ್ತರಿಸಲಾಗಿದೆ. ಅತ್ಯುತ್ತಮ ಗುಣಮಟ್ಟದ ರಸ್ತೆಗಳ ನಿರ್ಮಾಣ ಆಗಿರುವುದರಿಂದ ಅಭಿವೃದ್ಧಿಗೆ ಅನುಕೂಲ ಆಗಿದೆ. ಸಂಪರ್ಕ ಕ್ರಾಂತಿಯಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ' ಎಂದರು.



ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘದ ವತಿಯಿಂದ ಮುಖ್ಯಮಂತ್ರಿಯವರಿಗೆ ನೆನಪಿನ ಕಾಣಿಕೆ ನೀಡಲಾಯಿತು. ಸಂಘದ ಅಧ್ಯಕ್ಷ ರಾಮರಾವ್ ವಿ.ರಾಯ್ಕರ್ ಹಾಗೂ ಪದಾಧಿಕಾರಿಗಳು ಇದ್ದಾರೆ

'ಪಾರಂಪರಿಕ ಕಸುಬು ಉಳಿಸಲು ಅಗತ್ಯ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೈವಜ್ಞ ಬ್ರಾಹ್ಮಣ ಸಮಾಜ ಹಾಗೂ ಇತರ ಸಮುದಾಯದವರ ಪಾರಂಪರಿಕ ಕಸುಬನ್ನು ಉಳಿಸಿ ಬೆಳೆಸಲು ಅಗತ್ಯವಿರುವ ಎಲ್ಲಾ ನೆರವು ನೀಡಲು ಸರ್ಕಾರ ಸಿದ್ಧವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘದ ಸಮುದಾಯ ಭವನದ ಅಡಿಗಲ್ಲು ಸಮಾರಂಭದಲ್ಲಿ ಅವರು ಶುಕ್ರವಾರ ಮಾತನಾಡಿದರು.

'ಬದಲಾಗುತ್ತಿರುವ ಕಾಲಘಟ್ಟದಲ್ಲಿ ಅನೇಕ ಸಮುದಾಯಗಳು ತಮ್ಮ ಕುಲಕಸುಬು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸುತ್ತಿವೆ. ಇದು ಅಭಿಮಾನದ ವಿಷಯ' ಎಂದರು.

ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, ಸಂಘದ ಅಧ್ಯಕ್ಷ ರಾಮರಾವ್ ವಿ.ರಾಯ್ಕರ್ ಇದ್ದರು.

1.64 ಲಕ್ಷ ಜನರಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಲ್ಲ ಎಂಟು ವಲಯಗಳಲ್ಲಿ ಶುಕ್ರವಾರ 'ಕೋವಿಡ್ ಲಸಿಕಾ ಮೇಳ' ಹಮ್ಮಿಕೊಳ್ಳಲಾಗಿತ್ತು. ನಿಗದಿತ ಗುರಿಗಿಂತ ಹೆಚ್ಚು ಜನರಿಗೆ ಲಸಿಕೆ ನೀಡಲಾಯಿತು.

1.25 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು. ಖಾಸಗಿ ಕೇಂದ್ರಗಳು ಸೇರಿದಂತೆ 1.64 ಲಕ್ಷ ಮಂದಿ ಲಸಿಕೆ ಪಡೆದರು.

ಆಯಾ ವಾರ್ಡ್‌ಗಳಲ್ಲಿ ಆರೋಗ್ಯ ವೈದ್ಯಾಧಿಕಾರಿಗಳು ಅಲ್ಲಿಯ ಬೇಡಿಕೆಗೆ ತಕ್ಕಂತೆ ಯೋಜನೆ ರೂಪಿಸಿಕೊಂಡು ಶಿಬಿರ ನಡೆಸಿದರು. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ವಾರ್ಡ್ ಕಚೇರಿ, ಸರ್ಕಾರಿ ಆಸ್ಪತ್ರೆಗಳು, ಶಾಲಾ, ಕಾಲೇಜು ಆವರಣ, ಕಲ್ಯಾಣ ಮಂಟಪ, ಕಟ್ಟಡಗಳ ನಿರ್ಮಾಣದ ಸ್ಥಳ, ಅಪಾರ್ಟ್‌ಮೆಂಟ್ ಸಮುಚ್ಚಯ, ಕಾರ್ಖಾನೆಗಳು ಸೇರಿದಂತೆ ಇನ್ನಿತರೆ ಸ್ಥಳಗಳಲ್ಲಿ ಲಸಿಕಾ ಮೇಳವನ್ನು ನಡೆಸಲಾಯಿತು.

ಬೆಸ್ಕಾಂ ಸಿಬ್ಬಂದಿ, ಮಾಲ್‌ಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಕಟ್ಟಡ ನಿರ್ಮಾಣ ಕಾರ್ಮಿಕರು, ಅನಾಥಾಶ್ರಮದಲ್ಲಿರುವವರು, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ 18 ವರ್ಷ ಮೇಲ್ಪಟ್ಟ ಅರ್ಹ ಫಲಾನುಭವಿಗಳಿಗೆ ಕೋವಿಡ್ ಲಸಿಕೆ ನೀಡಲಾಯಿತು.

ಅಂಕಿ–ಅಂಶಗಳು

1.25 ಲಕ್ಷ — ಆರೋಗ್ಯ ಕೇಂದ್ರಗಳಿಗೆ ವಿತರಿಸಲಾಗಿದ್ದ ಹೆಚ್ಚುವರಿ ಡೋಸ್‌ಗಳು

788 — ಲಸಿಕಾ ಮೇಳ ನಡೆದ ಸ್ಥಳಗಳು

321 — ಮೇಳ ನಡೆದ ಖಾಸಗಿ ಕೇಂದ್ರಗಳ ಸಂಖ್ಯೆ

71,564 — ಪ್ರಥಮ ಡೋಸ್ ಲಸಿಕೆ ಪಡೆದವರ ಸಂಖ್ಯೆ

ಕೃಷ್ಣ ಜನ್ಮಾಷ್ಟಮಿ ಇಸ್ಕಾನ್‌ಗೆ ಪ್ರವೇಶ ಇಲ್ಲ

ಇಸ್ಕಾನ್ ದೇಗುಲದಲ್ಲಿ ಆಗಸ್ಟ್ 29 ಮತ್ತು 30ರಂದು ನಡೆಯಲಿರುವ ಶ್ರೀಕೃಷ್ಣ ಜನ್ಮಾಷ್ಟಮಿಯಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಪ್ರವೇಶ ಇಲ್ಲ ಎಂದು ಇಸ್ಕಾನ್ ತಿಳಿಸಿದೆ.

ಜನರ ಸುರಕ್ಷತೆ ಮತ್ತು ಸರ್ಕಾರದ ನಿಯಮಗಳನ್ನು ಪರಿಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಹಬ್ಬದ ವೇಳಾಪಟ್ಟಿಯಂತೆ ಎಲ್ಲ ಸೇವೆಗಳನ್ನೂ ದೇವರಿಗೆ ಅರ್ಪಿಸಲಾಗುವುದು. ಭಕ್ತರು ಆನ್‌ಲೈನ್ (www.iskconbangalore.org) ಮೂಲಕ ಎಲ್ಲವನ್ನೂ ವೀಕ್ಷಿಸಬಹುದು ಎಂದು ಇಸ್ಕಾನ್ ತಿಳಿಸಿದೆ.

ನಗರದಲ್ಲಿ ಇಂದು

'ಮಲ್ಲೇಶ್ವರದ ಮರಗಳನ್ನು ಉಳಿಸಿ' ಅಭಿಯಾನ: ಚಾಲನೆ: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಮಲ್ಲೇಶ್ವರ ಸ್ವಾಭಿಮಾನ ಇನಿಶಿಯೇಟಿವ್, ಮಲ್ಲೇಶ್ವರಂ ನಿವಾಸಿಗಳು, ಬಿಬಿಎಂಪಿ ಅರಣ್ಯ ವಿಭಾಗ, ಸ್ಥಳ: 4ನೇ ಮುಖ್ಯರಸ್ತೆ, ಮಲ್ಲೇಶ್ವರ (ಅನನ್ಯ ಹಾಲ್ ಹತ್ತಿರ), ಬೆಳಿಗ್ಗೆ 11.30

ಭರತನಾಟ್ಯ ರಂಗಪ್ರವೇಶ: ಪವಿತ್ರಾ ಅಶೋಕನ್, ಲಕ್ಷ್ಮಿ ಎಂ. ವೇಣುಗೋಪಾಲ್, ಮುಖ್ಯ ಅತಿಥಿ: ಸಂಜಯ್ ಶಾಂತಾರಾಮ್, ಗೌರವ ಅತಿಥಿಗಳು: ಕೆ. ಹರೀಶ್, ಜಯರಾಮ್ ಎಸ್., ಆಯೋಜನೆ: ಎಂ.ಎಸ್. ನಾಟ್ಯಕ್ಷೇತ್ರ, ಸ್ಥಳ: ಧ್ವನಿ ಸಭಾಂಗಣ, ಸಿಎಂಆರ್ ತಾಂತ್ರಿಕ ವಿದ್ಯಾಸಂಸ್ಥೆ, ಸಂಜೆ 4



ಸ್ನೇಹಾ ನಾದೆಲ್ಲ

ಕಥಕ್ ರಂಗ ಪ್ರವೇಶ: ಸ್ನೇಹಾ ನಾದೆಲ್ಲ, ಗುರುಗಳು: ಹರಿ ಮತ್ತು ಚೇತನಾ ದಂಪತಿ, ಆಯೋಜನೆ: ನೂಪುರ್ ಪರ್ಫಾಮಿಂಗ್ ಆರ್ಟ್ಸ್ ಸೆಂಟರ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ತಿಂಗಳ ಮಾತುಕತೆ: ಅಲೆಕ್ಸ್ ಹೆಲಿ ರೂಟ್ಸ್ ಕಾದಂಬರಿ ಅನುವಾದ 'ತಲೆಮಾರು', ಕೃತಿ ಪರಿಚಯ: ಸಂಧ್ಯಾ ರಾಣಿ, ಉಪಸ್ಥಿತಿ: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಪುಸ್ತಕ ಪ್ರೀತಿ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಸಂವಾದ: ಭಾಷಣಕಾರರು: ಎಂ.ಕೆ. ಶ್ರೀಧರ್, ಇಂದುಮತಿ ರಾವ್, ಶ್ರೀನಿವಾಸ ಬಳ್ಳಿ, ವಲ್ಲೀಶ್ ಹೆರೂರ್, ವಿಷ್ಣುಕಾಂತ್ ಚಟಪಲ್ಲಿ, ಆಯೋಜನೆ: ಅನಂತಕುಮಾರ್ ಪ್ರತಿಷ್ಠಾನ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಚಿಗುರು ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ರಂಗ ಶಿಕ್ಷಣ ಕೇಂದ್ರದ ಸಹಯೋಗ: ಲೇಖಕ ಆನಂದ್ ವೈ.ಮೌರ್ಯ ಅವರ 'ಒಂದು ಪಾದದ ಗುರುತು' ಪದ್ಯ ಸಂಕಲನ ಬಿಡುಗಡೆ, ಅತಿಥಿಗಳು– ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಮಾಜಿ ಸಚಿವ ಆಂಜನಮೂರ್ತಿ, ವಿಮರ್ಶಕ ಡಾ.ಬೈರಮಂಗಲ ರಾಮೇಗೌಡ. ನೆಲಮಂಗಲ ಅಂಬೇಡ್ಕರ್ ಭವನ, ಸಮಯ– ಬೆಳಿಗ್ಗೆ 10ರಿಂದ.

'ಚಿಟ್ ಫಂಡ್ ವ್ಯವಹಾರಕ್ಕೂ ಆನ್‌ಲೈನ್ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಟ್ ಫಂಡ್ ವ್ಯವಹಾರದಲ್ಲೂ ಆನ್‌ಲೈನ್ ವ್ಯವಸ್ಥೆ ತರಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಹೊಸ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಎಲ್ಲರೂ ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಕೊಳ್ಳಬಹುದು. ಆನ್‌ಲೈನ್ ಮೂಲಕವೇ ಶುಲ್ಕವನ್ನೂ ಪಾವತಿಸಬಹುದು. ಈ ಸಂಬಂಧ ಸರ್ಕಾರದಿಂದಲೇ ಅಧಿಸೂಚನೆ ಹೊರಡಿಸಲಾಗುತ್ತದೆ' ಎಂದು ರಾಜ್ಯ ಸಹಕಾರ ಸಂಘಗಳ ನಿಬಂಧಕ ಜಿಯಾ ಉಲ್ಲಾ ತಿಳಿಸಿದರು.

ಚೀಟಿ ಉದ್ಯಮದಿಂದ ಸಾರ್ವಜನಿಕರಿಗೆ ಆಗುತ್ತಿರುವ ನಷ್ಟ ಹಾಗೂ ಮೋಸದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ್ನಾಟಕ ಚಿಟ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. (ಎಡದಿಂದ) ಕರ್ನಾಟಕ ರಾಜ್ಯ ವಾಣಿಜ್ಯೋದ್ಯಮ ಸಂಸ್ಥೆಯ (ಎಫ್‌ಕೆಸಿಸಿಐ) ನಿಯೋಜಿತ ಅಧ್ಯಕ್ಷ ಐ.ಎಸ್.ಪ್ರಸಾದ್, ರಾಜ್ಯ ಸಹಕಾರ ಸಂಘಗಳ ನಿಬಂಧಕ ಜಿಯಾ ಉಲ್ಲಾ, ಕರ್ನಾಟಕ ಚಿಟ್ ಅಸೋಸಿಯೇಷನ್ ಅಧ್ಯಕ್ಷ ಬಸವಲಿಂಗಪ್ಪ ಶಾಂತಗೇರಿ ಹಾಗೂ ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ.ಸುಂದರ್ ಇದ್ದರು.

'ರಾಜ್ಯದಲ್ಲಿ 1,567 ಚಿಟ್ ಫಂಡ್ ಸಂಸ್ಥೆಗಳು ನೋಂದಣಿಯಾಗಿವೆ. ಈ ಸಂಸ್ಥೆಗಳು ಶುಲ್ಕದ ರೂಪದಲ್ಲಿ ಒಟ್ಟು ₹1,790 ಕೋಟಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸುತ್ತಿವೆ. ಅನಧಿಕೃತವಾಗಿ ಚೀಟಿ ನಡೆಸುವವರ ಸಂಖ್ಯೆಯೂ ಹೆಚ್ಚಿದೆ. ಅವರೂ ನೋಂದಣಿ ಮಾಡಿಕೊಂಡರೆ ಅನುಕೂಲವಾಗುತ್ತದೆ. ಒಂದಿಬ್ಬರು ಮೋಸ ಮಾಡುವುದರಿಂದ ಇಡೀ ವ್ಯವಸ್ಥೆಗೆ ಕೆಟ್ಟ ಹೆಸರು ಬರುತ್ತದೆ' ಎಂದರು.

'ಆನ್‌ಲೈನ್ ವ್ಯವಸ್ಥೆಗೆ ಆರಂಭದಲ್ಲಿ ಅಧಿಕಾರಿಗಳಿಂದ ವಿರೋಧ ವ್ಯಕ್ತವಾಗುವುದು ಸಹಜ. ಕ್ರಮೇಣ ಅದಕ್ಕೆ ಹೊಂದಿಕೊಳ್ಳುತ್ತಾರೆ. ರಾಜ್ಯದಲ್ಲಿ ಎಲ್ಲಾ ಇಲಾಖೆಗಳು ಈಗ ಆನ್‌ಲೈನ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಿದ್ಧ. ನಮ್ಮ ಅಧೀನ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯಿಂದ ಯಾವೆಲ್ಲಾ ರೀತಿಯಲ್ಲಿ ಕಿರುಕುಳ ಉಂಟಾಗುತ್ತಿದೆ ಎಂಬುದರ ಅರಿವಿದೆ. ಅದಕ್ಕೆ ಕಡಿವಾಣ ಹಾಕಲು ಪ್ರಯತ್ನಿಸಲಾಗುತ್ತದೆ' ಎಂದು ಭರವಸೆ ನೀಡಿದರು.

'ಕೋವಿಡ್ ನಂತರ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಹೀಗಾಗಿ ಸಾರ್ವಜನಿಕರು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲೇ ಚೀಟಿ ವ್ಯವಹಾರ ನಡೆಸಬೇಕು' ಎಂದು ಕರ್ನಾಟಕ ಚಿಟ್ ಅಸೋಸಿಯೇಷನ್ ಅಧ್ಯಕ್ಷ ಬಸವಲಿಂಗಪ್ಪ ಶಾಂತಗೇರಿ ಹೇಳಿದರು.

'ಅನಧಿಕೃತ ಕಂಪನಿಗಳನ್ನು ಕಾನೂನಿನ ಅಡಿಯಲ್ಲಿ ತರುವ ಕೆಲಸ ಆಗಬೇಕು. ಇದರಿಂದ ಸರ್ಕಾರದ ಬೊಕ್ಕಸಕ್ಕೂ ಆದಾಯ ಬರುತ್ತದೆ. ಆನ್‌ಲೈನ್ ವ್ಯವಸ್ಥೆ ಮಾಡುವುದು ಸ್ವಾಗತಾರ್ಹ ಕ್ರಮ. ಇದರಿಂದ ವ್ಯವಹಾರದಲ್ಲಿ ಪಾರದರ್ಶಕತೆ ತರಬಹುದು. ಪ್ರತಿಯೊಂದು ಕಾರ್ಯಕ್ಕೆ ನಾವು ಇಲಾಖೆಗೆ ಅಲೆಯುವುದೂ ತಪ್ಪುತ್ತದೆ' ಎಂದು ಹೇಳಿದರು.

ನ್ಯಾಯಮೂರ್ತಿಗಳಿಗೆ ಭಾವನಾತ್ಮಕ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರಿಗೆ ಕಾನೂನು ವಲಯದಿಂದ ಭಾವನಾತ್ಮಕ ಬೀಳ್ಕೊಡುಗೆ ನೀಡಲಾಯಿತು.

ವರ್ಚುವಲ್ ಕಾರ್ಯಕ್ರಮದಲ್ಲಿ ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು, 'ನ್ಯಾಯಾಂಗ ವ್ಯವಸ್ಥೆಯಲ್ಲಿ ಇರುವ ಎಲ್ಲರೂ ಶ್ರಮ ವಹಿಸಿದರೆ ಕರ್ನಾಟಕ ರಾಷ್ಟ್ರದಲ್ಲಿಯೇ ಅತ್ಯುತ್ತಮ ಸಾಮರ್ಥ್ಯ ಹೊಂದಿದ ನ್ಯಾಯಾಂಗ ಆಗಬಹುದು' ಎಂದು ಹೇಳಿದರು.

'ನನ್ನ ಎರಡು ವರ್ಷ ಮತ್ತು ಮೂರು ತಿಂಗಳ ಅವಧಿಯಲ್ಲಿ ಒಂದು ವರ್ಷವನ್ನು ಕೋವಿಡ್ ಒಂದು ಮತ್ತು ಎರಡನೇ ಅಲೆ ತೆಗೆದುಕೊಂಡಿತು. ನ್ಯಾಯಾಂಗದಲ್ಲಿ ಆನ್‌ಲೈನ್ ಪದ್ಧತಿಯನ್ನು ಬಲಿಷ್ಠಗೊಳಿಸಲು ಇದು ಸಹಕಾರಿ ಆಯಿತು' ಎಂದರು.

'ನಾನು ತೆಗೆದುಕೊಂಡು ಪ್ರತಿಜ್ಞೆಯಂತೆ ನನ್ನ ಕರ್ತವ್ಯ ನಿರ್ವಹಿಸಿದ್ದೇನೆಯೇ ಇಲ್ಲವೇ ಎಂಬುದನ್ನು ವಕೀಲರು ಮತ್ತು ದಾವೆದಾರರ ನಿರ್ಧಾರಕ್ಕೆ ಬಿಡುತ್ತೇನೆ' ಎಂದು ಹೇಳಿದರು.

ಭಾವುಕರಾದ ನ್ಯಾ. ಬಿ.ವಿ. ನಾಗರತ್ನಾ



ಬೀಳ್ಕೊಡುಗೆ ಪಡೆದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರು ತಮ್ಮ ಹೈಕೋರ್ಟ್ ಒಡನಾಟ ನೆನೆದು ಭಾವುಕರಾದರು. 'ಕೆಂಪು ಕಟ್ಟಡ ಮತ್ತು ಅಲ್ಲಿನ ಜನರೇ ನನಗೆ ಎಲ್ಲವೂ ಆಗಿದ್ದರು. ಎಲ್ಲರನ್ನು ಬಿಟ್ಟು ಹೋಗುವುದು ಕಷ್ಟವಾಗುತ್ತಿದೆ' ಎಂದು ಕಣ್ತುಂಬಿಕೊಂಡರು.

'ವಕೀಲೆಯಾಗಿ, ನ್ಯಾಯಮೂರ್ತಿಯಾಗಿ 34 ವರ್ಷ ಈ ಕಟ್ಟಡದಲ್ಲಿ ಕೆಲಸ ಮಾಡಿದ್ದೇನೆ. ಈ ಸಂದರ್ಭದಲ್ಲಿ ಸಹಕಾರ ನೀಡಿದ ಎಲ್ಲ ಸಿಬ್ಬಂದಿಗೆ ಧನ್ಯವಾದ ಸಲ್ಲಿಸುತ್ತೇನೆ' ಎಂದ ಅವರು, 'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂದು ಹೇಳಲಾಗುತ್ತದೆ. ಆದರೆ, ಪ್ರತಿ ಯಶಸ್ವಿ ಮಹಿಳೆ ಹಿಂದೆ ಒಂದು ಕುಟುಂಬವಿರುತ್ತದೆ. ಕಾನೂನು ಪದವಿ ಪಡೆದ ಬಳಿಕ ದೆಹಲಿಯಿಂದ ವಾಪಸ್ ಬಂದು ಬೆಂಗಳೂರಿನಲ್ಲಿ ವಕೀಲೆಯಾಗಿ ವೃತ್ತಿ ಆರಂಭಿಸಿದ್ದು ನನ್ನ ಜೀವನದ ಅತ್ಯುತ್ತಮ ನಿರ್ಧಾರಗಳಲ್ಲಿ ಒಂದಾಗಿದೆ' ಎಂದರು.

'ಗೃಹ ಸಚಿವರು ಲಘುವಾಗಿ ಮಾತನಾಡಿಲ್ಲ'

ಬೆಂಗಳೂರು: 'ಮೈಸೂರಿನಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರದ ಘಟನೆ ಕುರಿತು ಪ್ರತಿಕ್ರಿಯಿಸುವಾಗ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮಹಿಳೆಯರ ಬಗ್ಗೆ ಕಾಳಜಿಯಿಂದ ಸಲಹೆ ನೀಡಿದ್ದಾರೆ. ಅವರು ಲಘುವಾಗಿ ಮಾತನಾಡಿಲ್ಲ' ಎಂದು ಶಾಸಕಿ ಕೆ. ಪೂರ್ಣಿಮಾ ಶ್ರೀನಿವಾಸ್ ಹೇಳಿದರು.

'ಗೃಹ ಸಚಿವರ ಹೇಳಿಕೆ ಬಗ್ಗೆ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಗೃಹ ಸಚಿವರ ಹೇಳಿಕೆಗೆ ಅಪಾರ್ಥ ಕಲ್ಪಿಸಬಾರದು. ಮಹಿಳೆಯರು ಜಾಗರೂಕರಾಗಿರಬೇಕು ಎಂದಷ್ಟೆ ಹೇಳಿದ್ದಾರೆ' ಎಂದರು.

ಆ.31ರಿಂದ ನವೋದಯ ಶಾಲೆ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಜವಾಹರ ನವೋದಯ ವಿದ್ಯಾಲಯಗಳ 9ರಿಂದ 12ನೇ ತರಗತಿಗಳನ್ನು ಆಗಸ್ಟ್ 31ರಿಂದ ಮರು ಆರಂಭಿಸಲು ನಿರ್ಧರಿಸಲಾಗಿದೆ.

ಶೇಕಡ 50ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಶಾಲೆಯನ್ನು ಮರು ಆರಂಭಿಸಲು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನೀಡಿರುವ ಸೂಚನೆಯ ಅನ್ವಯ ಹಂತ ಹಂತವಾಗಿ ಈ ತರಗತಿಗಳನ್ನು ಆರಂಭಿಸಲಾಗುವುದು ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ಆಗಸ್ಟ್ 31ರಿಂದ ತರಗತಿಗಳಿಗೆ ಹಾಜರಾಗಲು ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಉಳಿದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದೆ. ಜತೆಗೆ, ಆನ್‌ಲೈನ್ ತರಗತಿಗಳು ಸಹ ಮುಂದುವರಿಯಲಿವೆ ಎಂದು ಸಚಿವಾಲಯವು ತಿಳಿಸಿದೆ.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅಭಿಮತ

'ಕಡಿಮೆಯಾಗುತ್ತಿರುವ ಸಂಶೋಧನಾ ಪ್ರವೃತ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಹಂಬಲ ಹೊಂದಿರುವವರು ಮೂಲಭೂತ ಸಂಶೋಧನೆಯನ್ನು ಕೈಗೊಳ್ಳಬೇಕು. ಸಾಧನ ಇಲ್ಲದಿದ್ದರೆ ಸಾಧನೆ ಮಾಡಲು ಸಾಧ್ಯವಿಲ್ಲ' ಎಂದು ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವರು 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಸ್ವೀಕರಿಸಿ, ಮಾತನಾಡಿದರು. ಈ ಪ್ರಶಸ್ತಿಯು ₹ 7 ಲಕ್ಷ ನಗದು ಬಹುಮಾನ ಒಳಗೊಂಡಿದೆ.

'ಹೊಸ ತಲೆಮಾರಿನವರಲ್ಲಿ ಸಂಶೋಧನಾ ಪ್ರವೃತ್ತಿ ಕಡಿಮೆ ಆಗುತ್ತಿದೆ. ಆಳಕ್ಕೆ ಇಳಿದು ಬೇರಿನ ಮೂಲವನ್ನು ಶೋಧಿಸಿದಲ್ಲಿ ಮಾತ್ರ ಸತ್ಯಾಸತ್ಯತೆ ತಿಳಿಯುತ್ತದೆ. ಆದ್ದರಿಂದ ಮೂಲಭೂತ ಸಂಶೋಧನೆಗಳನ್ನು ಕೈಗೊಂಡು, ಸಾಧನೆಯ ಹಾದಿ ಹಿಡಿಯಬೇಕು. ನಂತರ ಸಾಧನಗಳು ಸಿಗುತ್ತಾ ಹೋಗುತ್ತವೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, 'ನಾಡಿನಲ್ಲಿ ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಹಲವರಿದ್ದಾರೆ. ಪ್ರತಿಭೆಗೆ ಮಾತ್ರ ಆದ್ಯತೆ ನೀಡಿ, ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ. ಯುವ ಸಾಹಿತಿಗಳು ಅಧ್ಯಯನಶೀಲರಾಗಿ ಸಾಹಿತ್ಯ ಸೃಷ್ಟಿಸಬೇಕು' ಎಂದು ತಿಳಿಸಿದರು.

ಟಿ.ಜಿ. ಶ್ರೀನಿಧಿ, ಮಮತಾ ಅರಸೀಕೆರೆ, ದೀಪಾ ಹಿರೇಗುತ್ತಿ, ಬಸವರಾಜ ಭಜಂತ್ರಿ ಹಾಗೂ ಜಗದೀಶ ಲಿಂಗನಾಯಕ ಅವರಿಗೆ 'ಮಯೂರವರ್ಮ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಬಹುಮಾನ ಒಳಗೊಂಡಿದೆ.



ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಅವರು 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯನ್ನು ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ಪ್ರದಾನ ಮಾಡಿದರು. (ಎಡದಿಂದ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ರಾಜ್ಯ ಘಟಕ ಅಧ್ಯಕ್ಷ ವ.ಚ. ಚನ್ನೇಗೌಡ, ಬಿಎಂಟಿಸಿ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣ ಅಧಿಕಾರಿ ಮೊಹಮದ್ ಹಫಿಜುಲ್ಲಾ, ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, ಲೇಖಕ ಸರಜೂ ಕಾಟ್ಕರ್ ಮತ್ತು ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ ಇದ್ದರು – ಪ್ರಜಾವಾಣಿ ಚಿತ್ರ

ಲೆಮನ್ ಪೆಪ್ಪರ್ ಫಿಶ್

ನಳಪಾಕ



ಬೇಕಾಗುವ ಸಾಮಗ್ರಿಗಳು: ಮೀನು – ಅರ್ಧ ಕೆ.ಜಿ., ಕಾಳುಮೆಣಸು – 1 ಚಮಚ, ಸೋಂಪು – 1/2 ಚಮಚ, ಕರಿಬೇವು – 2 ಎಸಳು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಹಸಿಮೆಣಸು – 2, ಎಣ್ಣೆ – 2 ಚಮಚ, ಗರಂ ಮಸಾಲೆ – ಸ್ವಲ್ಪ

ನೆನೆಸಿಡಲು: ನಿಂಬೆರಸ – 1 ಟೇಬಲ್ ಚಮಚ, ಅರಿಸಿನ – ಚಿಟಿಕೆ, ಖಾರದಪುಡಿ – ಅರ್ಧ ಚಮಚ, ಉಪ್ಪು – ರುಚಿಗೆ

ತಯಾರಿಸುವ ವಿಧಾನ: ಒಂದು ಬೌಲ್‌ನಲ್ಲಿ ನೆನೆಸಿಡಲು ತಿಳಿಸಿದ ಎಲ್ಲಾ ಸಾಮಗ್ರಿಗಳನ್ನು ಹಾಕಿ ಪೇಸ್ಟ್ ತಯಾರಿಸಿಕೊಳ್ಳಿ. ಅದಕ್ಕೆ ಮೀನಿನ ತುಂಡುಗಳನ್ನು ಸೇರಿಸಿ. ಸೋಂಪು ಹಾಗೂ ಕಾಳುಮೆಣಸಿನ ಹುಡಿಯನ್ನು ನುಣ್ಣಗೆ ಪುಡಿ ಮಾಡಿಕೊಳ್ಳಿ. ಪ್ಯಾನ್ ಬಿಸಿ ಮಾಡಿ ಅದಕ್ಕೆ ತುಪ್ಪ ಅಥವಾ ಎಣ್ಣೆ ಹಾಕಿ. ಅದರ ಮೇಲೆ ಮೀನಿನ ತುಂಡುಗಳನ್ನು ಇರಿಸಿ. ಎರಡೂ ಕಡೆ ಚೆನ್ನಾಗಿ ಬೇಯಿಸಿ. ಅದರ ಮೇಲೆ ಸೋಂಪು ಹಾಗೂ ಕಾಳುಮೆಣಸಿನ ಪುಡಿ ಉದುರಿಸಿ. ಅದಕ್ಕೆ ಕರಿಬೇವು ಸೇರಿಸಿ. ನಂತರ ಮಗುಚಿ ಹಾಕಿ. ಕೊನೆಯಲ್ಲಿ ಗರಂಮಸಾಲೆ ಪುಡಿ ಉದುರಿಸಿ.

ಪೋಷಕಸ್ನೇಹಿ ಕಚೇರಿ ಅವಳಿಗಿಲ್ಲ ಕಿರಿಕಿರಿ!

ಪೋಷಕಸ್ನೇಹಿ ವಾತಾವರಣವಿರುವ ಕಚೇರಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹೆಚ್ಚು ಒಲವು ತೋರುತ್ತಿದ್ದಾರೆ. ಈಗಿನ ಸಂದರ್ಭದಲ್ಲಂತೂ ಇದು ಹೆಚ್ಚು ಪ್ರಸ್ತುತ ಎನ್ನುತ್ತಾರೆ ತಜ್ಞರು.

ಮಂಜುಶ್ರೀ ಎಂ. ಕಡಕೋಳ



ದೊಡ್ಡ ಕಂಪನಿಯೊಂದರಲ್ಲಿ ಕೆಲಸ ಮಾಡುವ ಶಾಲಿನಿಗೆ ತನ್ನ ಆರು ತಿಂಗಳ ಮಗುವನ್ನು ಕೆಲಸದಾಕೆಯ ಕೈಗೊಪ್ಪಿಸಿ ಕಚೇರಿಗೆ ಬರುವಾಗ ನಿತ್ಯವೂ ಮನಸಿನಲ್ಲಿ ಕಸಿವಿಸಿ. ಕಚೇರಿಗೆ ಬಂದರೂ ಚಿತ್ತವೆಲ್ಲಾ ಮಗುವಿನತ್ತಲೇ. ಮೀಟಿಂಗ್ ಮಧ್ಯೆ ಮನೆಯಿಂದ ಕರೆ ಬಂದಾಗಲೆಲ್ಲ ಸಹೋದ್ಯೋಗಿಗಳ ನೋಟ ಎದುರಿಸಲಾಗದೇ ಒಳಗೊಳಗೇ ತಳಮಳಿಸುತ್ತಾಳೆ. ಪ್ರಮುಖ ಪ್ರಾಜೆಕ್ಟ್‌ವೊಂದರ ಜವಾಬ್ದಾರಿ ಅವಳ ಹೆಗಲೇರಿದಾಗ ಅದನ್ನು ಯಶಸ್ವಿಯಾಗಿ ಮುಗಿಸುವಷ್ಟು ಸಮಯ ತನಗೆ ಸಿಗುವುದೇ ಎನ್ನುವ ಪ್ರಶ್ನೆ ಅವಳದು.

ಶಾಲಿನಿಯ ತಳಮಳಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಬಾಸ್ ಒಂದು ದಿನ ಅವಳ ಇಡೀ ಕ್ಯಾಬಿನ್ ಅನ್ನು ಮಗುಸ್ನೇಹಿಯಾಗಿ ರೂಪಿಸಿ ಅಚ್ಚರಿ ಮೂಡಿಸಿದಾಗ ಅವಳ ಕಣ್ಣಂಚಿನಲ್ಲಿ ಸದ್ದಿಲ್ಲದೇ ಹನಿಯೊಂದು ಜಾರಿತ್ತು. 'ನೀನಿನ್ನು ನಿನ್ನ ಮಗುವನ್ನು ಕಚೇರಿಗೆ ಕರೆದುಕೊಂಡು ಬರಬಹುದು. ಅದಕ್ಕಾಗಿ ಈ ತೊಟ್ಟಿಲು' ಎಂದು ಬಾಸ್ ಹೇಳಿದಾಗ ಕಚೇರಿಯೊಂದು ಹೀಗೂ ಇರಬಹುದೇ ಎನ್ನುವ ಅಚ್ಚರಿ ಅವಳದಾಗಿತ್ತು.

ಕೆಲವು ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣವೊಂದರಲ್ಲಿ ಬಂದಿದ್ದ ಜಾಹೀರಾತಿನ ತುಣುಕಿದು. ಇದಕ್ಕೆ ಇಂಬುಗೊಡುವಂತೆ ತಿಂಗಳ ಹಿಂದೆಯಷ್ಟೇ ಅಮೆರಿಕದ ಮಿಸ್ಸೋರಿ ರಾಜ್ಯದ ಸೇಂಟ್ ಲೂಯಿಸ್ ನಗರದ ಮ್ಯಾಗಿ ಮುಂಡ್‌ವಿಲ್ಲರ್ ಅವರ ಇಂಥದ್ದೇ ವಿಡಿಯೊವೊಂದು ವೈರಲ್ ಆಗಿದೆ.

ಕೋವಿಡ್ ಸಾಂಕ್ರಾಮಿಕ ರೋಗದ ಮೊದಲ ಅಲೆಯಲ್ಲಿ ಕೆಲಸ ಕಳೆದುಕೊಂಡಿದ್ದ ಮ್ಯಾಗಿ, ಎರಡನೇ ಅಲೆಯ ವೇಳೆಗೆ ತನ್ನ ಒಂದು ವರ್ಷದ ಮಗುವಿನ ಪೋಷಣೆಯ ಖರ್ಚು ನಿಭಾಯಿಸಲು ಉದ್ಯೋಗ ಮಾಡಲು ಮುಂದಾಗುತ್ತಾರೆ. ಹೊಸ ಉದ್ಯೋಗಕ್ಕಾಗಿ ಸಂದರ್ಶನದ ಕರೆ ಬಂದಾಗ ಮ್ಯಾಗಿ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೆ, ಸಂದರ್ಶನದ ಸಮಯದಲ್ಲಿ ಮಗುವನ್ನು ಬಿಟ್ಟು ಹೋಗುವ ಸ್ಥಿತಿ ಎದುರಾದಾಗ ಅವರಿಗಾದ ಸಂಕಟ ಅಷ್ಟಿಷ್ಟಲ್ಲ. ಸಂದರ್ಶಕರಲ್ಲಿ 'ನನಗೆ ಮಗುವಿದ್ದು, ಸಂದರ್ಶನಕ್ಕೆ ಬೇರೆ ಸಮಯ ನಿಗದಿ ಪಡಿಸಲು ಸಾಧ್ಯವೇ' ಎಂದು ಮ್ಯಾಗಿ ಕೋರಿದಾಗ, ಅತ್ತಲಿಂದ ಬಂದ ಪ್ರತಿಕ್ರಿಯೆ 'ನಮ್ಮ ಕಚೇರಿ ಮಕ್ಕಳ ಸ್ನೇಹಿಯಾಗಿದೆ' ಎಂದಾಗಿತ್ತು!

ಈ ಪ್ರತಿಕ್ರಿಯೆಗೆ ಅಚ್ಚರಿ ವ್ಯಕ್ತಪಡಿಸಿದ್ದ ಮ್ಯಾಗಿ, 'ಇದು ನಿಜವೇ' ಎಂದು ಕೇಳಿದಾಗ ಸಂದರ್ಶಕರು 'ಹೌದು. ನಿಮ್ಮ ಮಗುವನ್ನೂ ಜತೆಗೆ ಕರೆದುಕೊಂಡು ಬನ್ನಿ' ಎಂದೂ ಆಹ್ವಾನಿಸಿದರು.

ಈ ವಿಚಾರ ಕುರಿತು ಮ್ಯಾಗಿ ಹಂಚಿಕೊಂಡ ವಿಡಿಯೊ ಜಗತ್ತಿನ ವಿವಿಧೆಡೆ ಸಣ್ಣದೊಂದು ಸಂಚಲನವನ್ನೇ ಸೃಷ್ಟಿಸಿದೆ. ಪೋಷಕಸ್ನೇಹಿ ಅಥವಾ ಮಗುಸ್ನೇಹಿ ಕಚೇರಿಯ ಅಗತ್ಯವನ್ನು ಪ್ರತಿಪಾದಿಸುವ ಈ ವಿಡಿಯೊ ಉದ್ಯೋಗಸ್ಥ ಮಹಿಳೆಯರಿಗೆ ಪೂರಕ ವಾತಾವರಣ ಕಲ್ಪಿಸಿದಲ್ಲಿ ಕಂಪನಿಯ ಏಳ್ಗೆಗೂ ಸಹಕಾರಿಯಾಗುವ ಕುರಿತೂ ಪರೋಕ್ಷವಾಗಿ ಬೆಳಕು ಚೆಲ್ಲಿದೆ.

ಇದು ಸಕಾಲ..

ಕೋವಿಡ್‌ಗೂ ಮುನ್ನ ಮನೆಯಿಂದ ಕೆಲಸ ಮಾಡುವ ಅವಕಾಶ ಇರದಿದ್ದ ಸಂದರ್ಭದಲ್ಲಿ ಅನೇಕ ಉದ್ಯೋಗಸ್ಥ ಪೋಷಕರು ವಿಶೇಷವಾಗಿ ಮಹಿಳೆಯರು ಮಕ್ಕಳು–ಕುಟುಂಬದ ಸಲುವಾಗಿ ಉದ್ಯೋಗ ಬಿಡುವ ಸ್ಥಿತಿ ಇತ್ತು. ಆದರೆ, ಕೋವಿಡ್ ಸಂದರ್ಭದಲ್ಲಿ ಮನೆಯಿಂದಲೇ ಕೆಲಸ ಮಾಡುವ ಅವಕಾಶ ದೊರೆತಿದ್ದರಿಂದ ಉದ್ಯೋಗಸ್ಥ ಪೋಷಕರಿಗೆ ಕಚೇರಿ ಕೆಲಸದ ಜತೆಗೇ ಮಕ್ಕಳ ಜತೆಗಿರುವ ಅವಕಾಶವು ದೊರೆಯುವಂತಾಯಿತು. ಕೋವಿಡ್ ನಂತರವೂ ಉದ್ಯೋಗಸ್ಥ ಪೋಷಕರಿಗೆ ಇಂಥ ಅವಕಾಶ ದೊರೆಯುತ್ತದೆಯೇ ಎನ್ನುವ ಪ್ರಶ್ನೆಗಳೂ ಎದುರಾಗುತ್ತಿದ್ದು, ಪೋಷಕಸ್ನೇಹಿ ಇಲ್ಲವೇ ಮಕ್ಕಳಸ್ನೇಹಿ ಕಚೇರಿ ರೂಪಿಸಲು ಇದು ಸಕಾಲ ಎನ್ನುತ್ತದೆ ವರದಿಯೊಂದು.

'ಮನೆಯಿಂದ ಕೆಲಸ ಮಾಡುತ್ತಿದ್ದ ಪೋಷಕರಲ್ಲಿ ಬಹುತೇಕರು ಕಚೇರಿಯ ಕೆಲಸಗಳು ದುಪ್ಪಟ್ಟಾಗಿದ್ದರೂ ಅವುಗಳನ್ನು ಸರಿಯಾದ ಸಮಯಕ್ಕೆ ಮಾಡಿದ್ದಾರೆ. ಮನೆಯಲ್ಲಿರುವುದರಿಂದ ಮಕ್ಕಳಿಗೆ ಹೆಚ್ಚಿನ ಸಮಯ ನೀಡಿರುವ ಕಾರಣ ಪೋಷಕರ ಮಾನಸಿಕ ಒತ್ತಡವೂ ಕಡಿಮೆಯಾಗಿದೆ' ಎನ್ನುತ್ತಾರೆ ಕಂಪನಿಯೊಂದರಲ್ಲಿ ಉದ್ಯೋಗಿಗಳ ಯೋಗಕ್ಷೇಮ ಮೇಲ್ವಿಚಾರಕಿಯಾಗಿರುವ ಮಿಷೆಲ್.



ಭಾರತದಲ್ಲಿ ಕೋವಿಡ್‌ಗೂ ಮುನ್ನ ಅನೇಕ ಕಚೇರಿಗಳು ಪೋಷಕಸ್ನೇಹಿಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿವೆ. ಐಟಿ ಹಬ್ ಆಗಿರುವ ಬೆಂಗಳೂರಿನಲ್ಲೇ 13ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗಸ್ಥ ತಾಯಂದಿರಿಗೆ ಅನುಕೂಲ ಕಲ್ಪಿಸಲು ಕಚೇರಿ ಆವರಣದಲ್ಲಿ ಇಲ್ಲವೇ ಕಚೇರಿಯಿಂದ ತುಸು ದೂರದಲ್ಲೇ ಶಿಶುವಿಹಾರ ಮಾದರಿಯ ಕೇಂದ್ರಗಳನ್ನು ಸ್ಥಾಪಿಸಿದ್ದವು.

ದೇಶದ ವಿವಿಧೆಡೆ ಶಾಖೆಗಳನ್ನು ಹೊಂದಿರುವ ಸಿಟಿ ಬ್ಯಾಂಕ್, ಫ್ಲಿಪ್ ಕಾರ್ಟ್, ಗೂಗಲ್ ಇಂಡಿಯಾ, ಆಕ್ಸೆಂಚರ್, ಎಚ್‌ಎಸ್‌ಬಿಸಿ ಇಂಡಿಯಾದಂಥ ಕಂಪನಿಗಳು ಉದ್ಯೋಗಸ್ಥ ತಾಯಂದಿರಿಗೆ ಕಾರ್ಮಿಕ ಕಾಯ್ದೆಯ ಪ್ರಕಾರ 6 ತಿಂಗಳು ವೇತನಸಹಿತ ರಜೆ, ಹಾಲೂಡಿಸುವ ಕೇಂದ್ರ, ವಿಶ್ರಾಂತಿ ಗೃಹ ಸೇರಿದಂತೆ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಿವೆ.

ಮನೆಯಿಂದಲೇ ಕಚೇರಿ ಕೆಲಸ

ಕೋವಿಡ್ ಪೂರ್ವದಲ್ಲಿಯೇ ದೇಶದ ಅನೇಕ ಐಟಿ–ಬಿಟಿ ಕಂಪನಿಗಳು ತಮ್ಮಲ್ಲಿನ ಮಹಿಳಾ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸಿದ್ದವು. ಬಸಿರು, ಬಾಣಂತನದ ನಂತರವೂ ಈ ಉದ್ಯೋಗಿಗಳು ತಮ್ಮ ಕಚೇರಿಯ ಉನ್ನತಿಗೆ ಶ್ರಮಿಸುತ್ತಲೇ ಬಡ್ತಿಯನ್ನೂ ಪಡೆದವರಿದ್ದಾರೆ.

'ಉದ್ಯೋಗಸ್ಥ ತಾಯಂದಿರು ಪುಟ್ಟ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬರುವಾಗ ಮಾನಸಿಕ ಒತ್ತಡದಿಂದ ಬಳಲುತ್ತಾರೆ. ಈ ಒತ್ತಡ ಕಚೇರಿಯಲ್ಲಿ ಕೆಲಸದ ಗುಣಮಟ್ಟದ ಮೇಲೂ ಪ್ರಭಾವ ಬೀರಬಲ್ಲದು. ಹಾಗಾಗಿ, ಅಂಥ ತಾಯಂದಿರಿಗೆ ಪೋಷಕಸ್ನೇಹಿ ಅಥವಾ ಮಗುಸ್ನೇಹಿ ಕೆಲಸದ ವಾತಾವರಣ ಕಲ್ಪಿಸಿದರೆ ಕಚೇರಿಯ ಉತ್ಪಾದಕತೆಯ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗುತ್ತದೆ' ಎನ್ನುತ್ತಾರೆ ಖಾಸಗಿ ಕಂಪನಿಯೊಂದರ ಉದ್ಯೋಗಿ ವಿದ್ಯಾ.

'ಈ ಹಿಂದೆ ನಮ್ಮ ಕೇಂದ್ರಗಳಲ್ಲಿ ಮಕ್ಕಳನ್ನು ಬಿಟ್ಟು ತಾಯಂದಿರು ನೆಮ್ಮದಿಯಿಂದ ಕೆಲಸಕ್ಕೆ ತೆರಳುತ್ತಿದ್ದರು. ಆದರೆ, ಕೆಲ ಕಂಪನಿಗಳು ಮನೆಯಿಂದಲೇ ಕೆಲಸ ಮುಂದುವರಿಸಲು ಹೇಳಿರುವುದರಿಂದ ಪುಟ್ಟ ಮಕ್ಕಳ ಆರೈಕೆ ಮಾಡುವುದು ಪೋಷಕರಿಗೆ ಕಷ್ಟವಾಗುತ್ತಿದೆ. ಅದರಲ್ಲೂ ಪೋಷಕರಿಬ್ಬರೂ ಉದ್ಯೋಗಸ್ಥರಾಗಿದ್ದರೆ ಹೆಚ್ಚಿನ ಹೊರೆ ತಾಯಂದಿರ ಮೇಲೆ ಬೀಳುತ್ತಿದೆ. ಸರ್ಕಾರ ಒಪ್ಪಿಗೆ ನೀಡಿದಲ್ಲಿ ಕ್ರೀಚ್ ಆರಂಭಿಸಬಹುದು' ಎನ್ನುತ್ತಾರೆ 'ವೀ ಕೇರ್' ಕ್ರೀಚ್ ನಡೆಸುವ ಲಕ್ಷ್ಮೀಕಾಂತ್.

ಉದ್ಯೋಗಸ್ಥ ಪೋಷಕರಿಗೆ ಕೆಲಸದ ಸ್ಥಳದಲ್ಲಿ ಮಗುಸ್ನೇಹಿ ಇಲ್ಲವೇ ಪೋಷಕಸ್ನೇಹಿ ವಾತಾವರಣ ಕಲ್ಪಿಸಿದಲ್ಲಿ ಅದು ಕಚೇರಿಯ ಉತ್ಪಾದಕತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎನ್ನುತ್ತಾರೆ ತಜ್ಞರು.

ಪಿಸಿಒಡಿಯಿಂದ ಮಕ್ಕಳಾಗಲು ಸಮಸ್ಯೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

● ನನಗೆ 23 ವರ್ಷ. ಮುಟ್ಟು ತಿಂಗಳು ಸರಿಯಾಗಿ ಆಗುವುದಿಲ್ಲ. ಪಿಸಿಒಡಿ ಸಮಸ್ಯೆ ಇದೆ. ವೈದ್ಯರಿಗೆ ತೋರಿಸಿದ್ದು, ಕಳೆದ ಆರು ವರ್ಷಗಳಿಂದ ಔಷಧ ತೆಗೆದುಕೊಳ್ಳುತ್ತಿದ್ದೇನೆ. ಮುಂದೆ ಮದುವೆ ಆದ ಮೇಲೆ ಮಕ್ಕಳಾಗೋಕೆ ಸಮಸ್ಯೆ ಆಗುತ್ತದೆಯೇ? ಸಹಜ ಪರಿಹಾರವಿದೆಯೇ?

ಪೂಜಾ, ಕಲಬುರ್ಗಿ

ಪೂಜಾ, ನಿಮಗಿರುವುದು ಪಿಸಿಒಡಿ ಸಮಸ್ಯೆ. ನೀವಾಗಲೇ ವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆ ತೆಗೆದುಕೊಂಡಿದ್ದರೂ ನಿಮ್ಮ ಸಮಸ್ಯೆ ಬಗೆಹರಿದಿಲ್ಲ. ನೀವು ನಿಮ್ಮ ತೂಕವನ್ನು ಸರಿಯಾಗಿರುವ ಹಾಗೇ ನಿರ್ವಹಣೆ ಮಾಡಿದ್ದೀರಾ? ನಿಮ್ಮ ಜೀವನಶೈಲಿ ಬದಲಿಸಿಕೊಂಡಿರುವಿರೇ? ಪಿಸಿಒಡಿ ಸಮಸ್ಯೆ ಮುಂದುವರಿದರೆ ಮುಂದೆ ಮದುವೆ ಆದ ಮೇಲೆ ಮಕ್ಕಳಾಗುವುದು ಕಷ್ಟವಾಗಬಹುದು. ಆದರೂ ಸೂಕ್ತ ಚಿಕಿತ್ಸೆ ಹಾಗೂ ಜೀವನಶೈಲಿ ಸುಧಾರಣೆಯಿಂದ ಅಸಾಧ್ಯವೇನೂ ಅಲ್ಲ. ತೂಕ ಹೆಚ್ಚಿದ್ದರೆ ಕನಿಷ್ಠ ಶೇ 10ರಷ್ಟು ತೂಕ ಕಡಿಮೆ ಮಾಡಿಕೊಳ್ಳದಿದ್ದರೆ, ವೈದ್ಯರು ಕೊಟ್ಟ ಔಷಧಿ ಪರಿಣಾಮಕಾರಿ ಆಗುವುದಿಲ್ಲ. ಶೇ 20ರಷ್ಟು ಮಂದಿಗೆ ತೆಳ್ಳಗಿದ್ದರೂ ಪಿಸಿಒಡಿ ಇರುತ್ತದೆ. ಇದರಲ್ಲಿ ಕೇವಲ ಮುಟ್ಟಿನ ಸಮಸ್ಯೆ, ಬಂಜೆತನವಷ್ಟೇ ಅಲ್ಲ ಹಾಗೆಯೇ ಮುಂದುವರೆದರೆ ದೀರ್ಘಾವಧಿ ಆರೋಗ್ಯ ಸಮಸ್ಯೆ, ಟೈಪ್2 ಮಧುಮೇಹ, ಏರು ರಕ್ತದೊತ್ತಡ, ಹೃದಯ ಹಾಗೂ ರಕ್ತಸಂಬಂಧಿ ಕಾಯಿಲೆಗಳು, ಖಿನ್ನತೆ, ನಿದ್ರೆಯಲ್ಲಿ ಉಸಿರಾಟದ ತೊಂದರೆ, ಎಂಡೋಮೆಟ್ರಿಯಲ್ ಕ್ಯಾನ್ಸರ್ ಇತ್ಯಾದಿ ಸಮಸ್ಯೆ ಕಾಣಿಸಿಕೊಳ್ಳಬಹುದು. ನೀವು ತಜ್ಞ ವೈದ್ಯರ ಚಿಕಿತ್ಸೆ ಹಾಗೂ ಸಲಹೆ ಮುಂದುವರಿಸಿ.

ಸಹಜ ಪರಿಹಾರಕ್ರಮ ಎಂದರೆ ಜೀವನಶೈಲಿ ಬದಲಾವಣೆ. ನಮ್ಮ ಆಹಾರಕ್ರಮ, ದೈಹಿಕ ಚಟುವಟಿಕೆ, ನಿದ್ರೆ, ದುಶ್ಚಟಕ್ಕೆ ಒಳಗಾಗಿದ್ದೇವೆಯೇ, ಎಂಬುದನ್ನು ಒಳಗೊಳ್ಳುತ್ತದೆ. ಆಹಾರ ಪದ್ಧತಿಗಳು ಹಲವಾರು ಇದ್ದರೂ ದೀರ್ಘಕಾಲದವರೆಗೆ ಅನುಸರಿಸಬಲ್ಲ ಸರಳ ಡಯೆಟ್ ಪದ್ಧತಿ ಅನುಸರಿಸುವುದು ಬಹಳ ಮುಖ್ಯವಾಗುತ್ತದೆ. ಕಡಿಮೆ ಕ್ಯಾಲೊರಿ, ಕಡಿಮೆ ಶರ್ಕರ– ಪಿಷ್ಟ, ಕಡಿಮೆ ಕೊಬ್ಬಿನಾಂಶ, ಹೆಚ್ಚು ಪ್ರೊಟೀನ್ ಅಂಶವುಳ್ಳ ಆಹಾರಸೇವನೆ ಮುಖ್ಯ. ಜಂಕ್‌ಫುಡ್ ಸೇವನೆ ಬೇಡವೇ ಬೇಡ. ಹಸಿರು ಸೊಪ್ಪು, ತರಕಾರಿಗಳು ಅದರಲ್ಲೂ ಎಲೆಕೋಸು, ಬಸಳೆ, ಪಾಲಕ್, ಮೂಲಂಗಿ- ಇನ್ನಿತರ ಸೊಪ್ಪು– ತರಕಾರಿಗಳನ್ನು ಹೇರಳವಾಗಿ ಸೇವಿಸಬೇಕು. ಒಮೆಗಾ–3 ಹೆಚ್ಚಿರುವ ವಾಲ್‌ನಟ್, ಆಲಿವ್ ಎಣ್ಣೆ, ಒಮೆಗಾ–6 ಅಂಶ ಹೆಚ್ಚಿರುವ ಸ್ಯಾಮನ್ ಮೀನು, ಅಗಸೆಬೀಜ ಇತ್ಯಾದಿ ಸೇವಿಸಿ. ಕೆಂಪಕ್ಕಿ, ಸಿರಿಧಾನ್ಯಗಳ ಸೇವನೆ ರಕ್ತದಲ್ಲಿ ಸಕ್ಕರೆ ಪ್ರಮಾಣ ಕಾಯ್ದುಕೊಳ್ಳಲು ಸಹಾಯಕ. ಒಟ್ಟಾರೆ ದೀರ್ಘಾವಧಿಯವರೆಗೆ ಅನುಸರಿಸಬಲ್ಲ ಸರಳ, ಸುಲಭ, ಪ್ರಕೃತಿದತ್ತ, ಸುಲಭವಾಗಿ ಜೀರ್ಣವಾಗುವ ಸಾತ್ವಿಕ ಆಹಾರ ಹಾಗೂ ಋತುಗನುಗುಣವಾಗಿ ಸ್ಥಳಿಯವಾಗಿ ಸಿಗುವ ತಾಜಾ ಆಹಾರಗಳ ಸೇವನೆ ಬಹುಮುಖ್ಯ. ಜೊತೆಗೆ ಟಿ.ವಿ ವೀಕ್ಷಣೆ ಮಾಡುತ್ತ, ವೃತ್ತಪತ್ರಿಕೆ ಓದುತ್ತಾ, ತಿನ್ನುವುದನ್ನು ಬಿಟ್ಟು ಮನವಿಟ್ಟು ಆಹಾರ ಸೇವನೆ ಮಾಡಬೇಕು (ಮೈಂಡ್ ಫುಲ್ ಈಟಿಂಗ್). ಪ್ರತಿದಿನ ಕನಿಷ್ಠ ಒಂದು ಗಂಟೆ ದೈಹಿಕ ಚಟುವಟಿಕೆ ಅತ್ಯವಶ್ಯಕ. ಯೋಗಾಸನ, ಧ್ಯಾನ, ಪ್ರಾಣಾಯಾಮ ಸಹಾಯಕ. ಇವೆಲ್ಲ ಸಹಜವಾಗಿ ನೀವೇ ಕೈಗೊಳ್ಳಬಹುದಾದ ಕ್ರಮಗಳು. ವೈದ್ಯರ ಸಲಹೆಯ ಮೇರೆಗೆ ಉಳಿದ ಚಿಕಿತ್ಸೆ ಪಡೆದರೆ ನಿಮಗೆ ಮಕ್ಕಳಾಗುತ್ತದೆ. ಚಿಂತಿಸಬೇಡಿ.

● ನನಗೆ ಮದುವೆಯಾಗಿ ಒಂದೂವರೆ ವರ್ಷ ಆಗಿದೆ. ಮಗುವಿಗೆ ಪ್ರಯತ್ನ ಮಾಡುತ್ತಿದ್ದೇವೆ, ಮಕ್ಕಳು ಆಗಿಲ್ಲ. ಮುಟ್ಟು ಸರಿಯಾದ ಸಮಯಕ್ಕೆ ಆಗುತ್ತಿಲ್ಲ. 2–3 ತಿಂಗಳಿಗೆ, ಅದೂ ವೈದ್ಯರ ಹತ್ತಿರ ತೋರಿಸಿ ಔಷಧಿಯನ್ನು ತೆಗೆದುಕೊಂಡಾಗ ಆಗುತ್ತದೆ. ಪರಿಹಾರ ತಿಳಿಸಿ.

ರಾಧಿಕಾ, ಊರಿನ ಹೆಸರು ತಿಳಿಸಿಲ್ಲ

ನಿಮಗೆ ಪಿಸಿಒಡಿ ಸಮಸ್ಯೆ ಇದೆ ಎಂದೆನಿಸುತ್ತದೆ. ನೀವು ಸೂಕ್ತ ತಜ್ಞವೈದ್ಯರ ಚಿಕಿತ್ಸೆಯನ್ನು ಮುಂದುವರೆಸಿ. ನಿಯಮಿತ ಋತುಚಕ್ರ ಆಗಲು, ಅಂಡೋತ್ಪತ್ತಿಯನ್ನು ನಿಯಮಿತವಾಗಿ ಪ್ರಚೋದಿಸಲು, ಬಂಜೆತನವನ್ನು ನೀಗಿಸಲು ಹಲವು ಪರಿಣಾಮಕಾರಿ ಔಷಧಿಗಳು ಈಗ ಲಭ್ಯವಿದೆ. ನೀವು ತಜ್ಞ ವೈದ್ಯರ ಸಲಹೆಯ ಮೇರೆಗೆ ಅವುಗಳನ್ನು ಸೂಕ್ತವಾಗಿ ಬಳಸಿ. ಜೊತೆಗೆ ಮೇಲೆ ತಿಳಿಸಿದ ಹಾಗೇ ನಿಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳಿ. ಆದಷ್ಟು ಬೇಗನೇ ನಿಮಗೆ ಮಗು ಆಗಲಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...
ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

'ಸಂಪುಟ ವಿಸ್ತರಣೆ ಚರ್ಚೆಯಾಗಿಲ್ಲ'

ಬೆಂಗಳೂರು: ದೆಹಲಿ ಪ್ರವಾಸದ ವೇಳೆ ಅಭಿವೃದ್ಧಿ ಕುರಿತು ಹಲವು ಚರ್ಚೆಗಳು ನಡೆಸಲಾಗಿದೆ. ಸಂಪುಟ ವಿಸ್ತರಣೆಯೂ ಸೇರಿದಂತೆ ರಾಜಕೀಯ ವಿಚಾರಗಳ ಕುರಿತು ಚರ್ಚೆ ನಡೆದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಕುಟುಂಬದ ಸದಸ್ಯರೊಬ್ಬರಿಗೆ ಅನಾರೋಗ್ಯ ಸಮಸ್ಯೆ ಉಂಟಾಗಿರುವ ಕಾರಣದಿಂದ ಅವರ ಭೇಟಿ ಸಾಧ್ಯವಾಗಿಲ್ಲ' ಎಂದರು.

ಮೈಸೂರಿನಲ್ಲಿ ವಿದ್ಯಾರ್ಥಿನಿ ಮೇಲೆ ನಡೆದಿರುವ ಸಾಮೂಹಿಕ ಅತ್ಯಾಚಾರ ಪ್ರಕರಣದ ತನಿಖೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ (ಡಿಜಿಪಿ) ಮೇಲುಸ್ತುವಾರಿಯಲ್ಲಿ ನಡೆಯಲಿದೆ. ನನಗೆ ನೇರವಾಗಿ ವರದಿ ನೀಡಲು ತಿಳಿಸಿದ್ದೇನೆ ಎಂದರು.

ಇಂದಿನಿಂದ ಮೂರು ದಿನ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿಇಟಿ) ಶನಿವಾರದಿಂದ ಆರಂಭವಾಗಲಿದ್ದು, 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಬೆಂಗಳೂರಿನ 86 ಕೇಂದ್ರಗಳು ಸೇರಿದಂತೆ ರಾಜ್ಯದ 530 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ನಡೆಯಲಿದೆ. ಕೋವಿಡ್ ಕಾರಣ ಎಲ್ಲ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಪರೀಕ್ಷೆ ನಡೆಸಲಾಗುತ್ತಿದೆ. ಗಡಿ ಪ್ರದೇಶದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಕೋವಿಡ್ ದೃಢಪಟ್ಟಿರುವ 12 ವಿದ್ಯಾರ್ಥಿಗಳಿಗೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ.

28ರಂದು ಜೀವವಿಜ್ಞಾನ ಮತ್ತು ಗಣಿತ, 29ರಂದು ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನ ವಿಷಯಗಳ ಪರೀಕ್ಷೆ ನಡೆಯಲಿದೆ. ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಬೆಂಗಳೂರು, ಬೀದರ್, ವಿಜಯಪುರ, ಬಳ್ಳಾರಿ, ಬೆಳಗಾವಿ ಹಾಗೂ ಮಂಗಳೂರು ಕೇಂದ್ರದಲ್ಲಿ ಇದೇ 30ರಂದು ಕನ್ನಡ ಪರೀಕ್ಷೆ ನಡೆಯಲಿದೆ.

ಆರ್ಯ ಈಡಿಗ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘವು ನಗರದ ಶೇಷಾದ್ರಿಪುರದಲ್ಲಿರುವ ಉಚಿತ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ತಾಂತ್ರಿಕ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ವೈದ್ಯಕೀಯ, ಔಷಧ ವಿಜ್ಞಾನ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ನಂ 185, ಈಡಿಗ ಭವನ, ರಾಜೀವಗಾಂಧಿ ವೃತ್ತ ಇಲ್ಲಿ ಇದೇ 30ರಿಂದ ಅರ್ಜಿ ನೀಡಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸೆಪ್ಟೆಂಬರ್ 30ರೊಳಗೆ ಇದೇ ವಿಳಾಸಕ್ಕೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗೆ 080-48145442 ಅಥವಾ 080-23560574 ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಬಹುದು.

ದಾಖಲೆ ನೀಡಲು ಕಂದಾಯ ಹಾಗೂ ಬ್ಯಾಂಕ್‌ಗಳ ನಡುವೆ ಹಗ್ಗ ಜಗ್ಗಾಟ

ಬೆಳೆ ಸಾಲಕ್ಕಾಗಿ ರೈತರ ಪರದಾಟ

● ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಬೆಳೆ ಸಾಲ ಪಡೆಯಲು ನೀಡಬೇಕಾಗಿರುವ ನೋಂದಣಿ ದಾಖಲೆಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಹಾಗೂ ಬ್ಯಾಂಕ್‌ಗಳ ನಡುವೆ ಉಂಟಾಗಿರುವ ಗೊಂದಲದಿಂದಾಗಿ ರೈತರು ಪರದಾಡುವಂತಾಗಿದೆ.

ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಕಾರ್ಮಿಕರ ಕೂಲಿ ಪಾವತಿ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಸರ್ಕಾರವು ಶೂನ್ಯ ಹಾಗೂ ಕಡಿಮೆ ಬಡ್ಡಿ ದರದಲ್ಲಿ ದೊರೆಯುವ ಸಾಲ ಪಡೆಯುವುದನ್ನು ಉತಾರದಲ್ಲಿ ನೋಂದಣಿ ಮಾಡಿಕೊಡದ್ದರಿಂದ ರೈತರು ಖಾಸಗಿ ಸಾಲ ಮಾಡಬೇಕಾದ ಸ್ಥಿತಿ ಬಂದಿದೆ.

ಬೆಳೆ ಸಾಲ ಪಡೆಯಲು ಉತಾರದಲ್ಲಿ 'ಬೋಜಾ ಕೂಡಿಸಬೇಕು' (ಸಾಲ ಪಡೆಯುವುದನ್ನು ಉತಾರದಲ್ಲಿ ದಾಖಲು ಮಾಡುವುದು). ಆದರೆ ಈ ಕಾರ್ಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಗುತ್ತಿತ್ತು. ಈಗ ಬ್ಯಾಂಕಿನವರೇ ಮಾಡಿಕೊಡಬೇಕು ಎಂದು ಸರ್ಕಾರ ಆದೇಶಿಸಿದೆ ಎಂದು ರೈತರನ್ನು ಅಧಿಕಾರಿಗಳು ವಾಪಸು ಕಳುಹಿಸುತ್ತಿದ್ದಾರೆ.

ಇತ್ತ ಬ್ಯಾಂಕಿನವರು ಸಾಲ ಪಡೆಯುತ್ತಿರುವುದನ್ನು ಉತಾರದಲ್ಲಿ ದಾಖಲಿಸಿಕೊಡಲು ಮುಂದಾಗುತ್ತಿಲ್ಲ. ಇದರಿಂದಾಗಿ ರೈತರು ಉಪನೋಂದಣಾಧಿಕಾರಿ ಕಚೇರಿ ಹಾಗೂ ಬ್ಯಾಂಕ್‌ಗಳಿಗೆ ಅಲೆದಾಡುವಂತಾಗಿದೆ.

'ಮೊದಲಿನಿಂದಲೂ ಉಪನೋಂದಣಾಧಿಕಾರಿ ಕಚೇರಿಯಲ್ಲಿಯೇ ಬೋಜಾ ಕೂಡಿಸಲಾಗುತ್ತಿತ್ತು. ಈಗ ಅವರು ಮಾಡುವುದಿಲ್ಲ ಎನ್ನುವುದು ಗಮನಕ್ಕೆ ಬಂದಿದೆ. ಆದರೆ, ಈ ಕುರಿತು ದಾಖಲೆ ನೀಡುವಂತೆ ಮೇಲಾಧಿಕಾರಿಗಳಿಂದ ಯಾವುದೇ ಆದೇಶ ಬಂದಿಲ್ಲ' ಎನ್ನುತ್ತಾರೆ ಲೀಡ್ ಬ್ಯಾಂಕ್ ಮ್ಯಾನೇಜರ್ ಅಣ್ಣಯ್ಯ.

'ನೋಂದಣಿ ಮಾಡಿಕೊಡಲು ಸಾಫ್ಟ್‌ವೇರ್ ಬೇಕು. ಜತೆಗೆ ಹೆಚ್ಚುವರಿ ಸಿಬ್ಬಂದಿ ಬೇಕು. ಅದ್ಯಾವುದೇ ಸೌಲಭ್ಯವಿಲ್ಲ' ಎಂದು ಬ್ಯಾಂಕ್ ಅಧಿಕಾರಿಗಳು ರೈತರನ್ನು ಸಾಗಹಾಕುತ್ತಿದ್ದಾರೆ.

'ಸಾಲ ತೆಗೆದುಕೊಳ್ಳುವುದನ್ನು ಉತಾರದಲ್ಲಿ ಉಪನೋಂದಣಾಧಿಕಾರಿ ಕಚೇರಿಯ ಅಧಿಕಾರಿಗಳೇ ನೋಂದಣಿ ಮಾಡಿಕೊಡುತ್ತಿದ್ದರು. ಈಗ ಬ್ಯಾಂಕ್‌ಗೆ ಕಳಿಸುತ್ತಿದ್ದಾರೆ. ಬ್ಯಾಂಕಿನವರು ನಮಗೆ ಆದೇಶ ಬಂದಿಲ್ಲ ಎನ್ನುತ್ತಿದ್ದಾರೆ. ಸಾಲ ಪಡೆಯಲಾಗುತ್ತಿಲ್ಲ' ಎಂದು ಹುಬ್ಬಳ್ಳಿ ತಾಲ್ಲೂಕಿನ ಭಂಡಿವಾಡ ಗ್ರಾಮದ ರೈತ ಮಂಜು ಜಿ.

ಸರ್ವರ್ ಸಮಸ್ಯೆ: ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸರ್ವರ್ ಸಮಸ್ಯೆಯಿಂದ ಆಸ್ತಿಗಳ ನೋಂದಣಿಯೇ ಸ್ಥಗಿತವಾಗಿ ಬಿಡುತ್ತಿದೆ. ನಾಲ್ಕಾರು ಬಾರಿ ಅಲೆದಾಡುವಂತಾಗಿದೆ. ಬೆಳೆ ಸಾಲ ಪಡೆಯುವ ರೈತರ ಸಂಖ್ಯೆ ಹೆಚ್ಚಾಗುವುದರಿಂದ ನೋಂದಣಿ ಅಸಾಧ್ಯ ಎಂದು ಬ್ಯಾಂಕ್‌ಗಳಿಗೆ ಕಳುಹಿಸಲಾಗುತ್ತಿದೆ ಎಂಬುದು ರೈತರ ಆರೋಪ.

ಮುಖ್ಯಾಂಶಗಳು
- ನೋಂದಣಿಗೆ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನಿರಾಕರಣೆ
- ಬ್ಯಾಂಕ್‌ಗಳಿಗೆ ಈ ಕುರಿತು ಆದೇಶ ಬಂದಿಲ್ಲ
- ನೋಂದಣಿಗೆ ಕಾದುಕುಳಿತಿರುವ ಸಮಸ್ಯೆ

ಸಹಕಾರ ಇಲಾಖೆಯ ನಿಬಂಧಕರ ಜೊತೆಗೆ ಈ ಬಗ್ಗೆ ಚರ್ಚಿಸಿದ್ದೇನೆ. ಬ್ಯಾಂಕ್ ಮೇಲಧಿಕಾರಿಗಳಿಂದಲೂ ನಿರ್ದೇಶನ ಕೋರಲಾಗಿದೆ.
ಅಣ್ಣಯ್ಯ, ಲೀಡ್ ಬ್ಯಾಂಕ್ ಮ್ಯಾನೇಜರ್, ಧಾರವಾಡ


ತಂತಿ ಉರುಳಿಗೆ ಸಿಲುಕಿ ಕಪ್ಪು ಚಿರತೆ ಸಾವು

ಶಿರಸಿ: ತಾಲ್ಲೂಕಿನ ಬೆಂಗಳೆ ಗ್ರಾಮದ ಬಳಿ ಕಾಡುಹಂದಿ ಸೆರೆಗೆ ಹಾಕಿದ್ದ ಉರುಳಿಗೆ ಸಿಲುಕಿ ನಾಲ್ಕು ವರ್ಷದ ಹೆಣ್ಣು ಕಪ್ಪುಚಿರತೆ ಸಾವನ್ನಪ್ಪಿದೆ. ಬನವಾಸಿ ಅರಣ್ಯದಲ್ಲಿ ಪತ್ತೆಯಾಗಿದ್ದ ಮೊದಲ ಕಪ್ಪುಚಿರತೆ ಇದಾಗಿತ್ತು.

ಚಿರತೆಯ ಸೊಂಟದ ಭಾಗಕ್ಕೆ ತೀವ್ರ ಪೆಟ್ಟುಬಿದ್ದಿತ್ತು. ಚಿರತೆ ಬೇಲಿಗೆ ಸಿಲುಕಿದ್ದನ್ನು ಕಂಡು ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗೆ ವಿಷಯ ತಿಳಿಸಿದ್ದರು.

'ಚಿರತೆಯನ್ನು ಸುರಕ್ಷಿತವಾಗಿ ಸೆರೆಹಿಡಿಯುವ ಪ್ರಯತ್ನ ನಡೆಯಿತು. ಜನಜಂಗುಳಿ ಇತ್ತು. ಚಿರತೆ ಭಯದಿಂದಲೂ ಮೃತಪಟ್ಟಿರಬಹುದು ಪ್ರಕರಣ ದಾಖಲಿಸಲಾಗಿದೆ' ಎಂದು ಆರ್.ಎಫ್.ಒ. ಉಷಾ ಕಬ್ಬೇರ ತಿಳಿಸಿದರು.

ಪಶು ವೈದ್ಯಾಧಿಕಾರಿ ಡಾ.ದಿನೇಶ ಕೆ.ಎನ್. ಅವರು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಲಯ ಅರಣ್ಯಾಧಿಕಾರಿ ಕಚೇರಿ ಪಕ್ಕದ ಜಾಗದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.



ಶಿರಸಿ ತಾಲ್ಲೂಕಿನ ಬನವಾಸಿ ವಲಯ ಅರಣ್ಯ ವ್ಯಾಪ್ತಿಯಲ್ಲಿ ಮೃತಪಟ್ಟಿರುವ ಕಪ್ಪು ಚಿರತೆ.

ವಿವಿಧೆಡೆ ಮಳೆ: ಗೋಡೆ ಕುಸಿದು ಕಾರು ಜಖಂ



ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಶುಕ್ರವಾರ ಭಾರಿ ಮಳೆಗೆ ಮನೆಯೊಂದರ ಗೋಡೆ ಕುಸಿದಿರುವುದು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಜ್ಯದ ಬೆಳಗಾವಿ, ಉತ್ತರ ಕನ್ನಡ, ಕೊಪ್ಪಳ ಸೇರಿದಂತೆ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಎರಡು ತಾಸು ಧಾರಾಕಾರ ಮಳೆಯಾಗಿದೆ. ಬೈಲಹೊಂಗಲದಲ್ಲಿ ಗೋಡೆ ಕುಸಿದು ಎರಡು ಕಾರುಗಳು ಜಖಂಗೊಂಡಿವೆ. ಬೈಲಹೊಂಗಲ-ಮುನವಳ್ಳಿ ಸಂಪರ್ಕ ಸೇತುವೆ ಮುಳುಗಡೆಯಾಗಿ ಸಂಚಾರ ಕಡಿತಗೊಂಡಿದೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆಯೂ ಉತ್ತಮ ಮಳೆಯಾಗಿದೆ. ದಾಂಡೇಲಿ, ಶಿರಸಿ, ಜೊಯಿಡಾದಲ್ಲಿ ಸಾಧಾರಣ ಮಳೆ ಬಂದಿದೆ. ಗದಗ ನಗರ ಹಾಗೂ ಹುಬ್ಬಳ್ಳಿ, ಧಾರವಾಡದಲ್ಲಿ ಸಾಧಾರಣ ಮಳೆಯಾಗಿದೆ.

ಕೊಪ್ಪಳ ಉತ್ತಮ ಮಳೆ

ಕೊಪ್ಪಳ ವರದಿ: ನಗರದಲ್ಲಿ ಮಧ್ಯಾಹ್ನ ಒಂದು ತಾಸಿಗೂ ಹೆಚ್ಚುಕಾಲ ಉತ್ತಮ ಮಳೆಯಾಯಿತು. ಕೇಂದ್ರ ಬಸ್ ನಿಲ್ದಾಣ ಮತ್ತು ವಿವಿಧ ತಗ್ಗು ಪ್ರದೇಶಕ್ಕೆ ನೀರು ನುಗ್ಗಿ, ಜನ ತೊಂದರೆ ಅನುಭವಿಸಿದರು.

ಅಳವಂಡಿ, ಹಿಟ್ನಾಳ, ಕುಕನೂರು, ಯಲಬುರ್ಗಾ ಹೋಬಳಿಗಳಲ್ಲಿಯೂ ಬಿರುಸಿನ ಮಳೆಯಾದರೆ, ಗಂಗಾವತಿ, ಕಾರಟಗಿ, ಕನಕಗಿರಿ, ಕುಷ್ಟಗಿಯಲ್ಲಿ ಸಾಧಾರಣ ಮಳೆಯಾಯಿತು. ಯಾದಗಿರಿ ನಗರ, ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶುಕ್ರವಾರ ಮೋಡ ಕವಿದ ವಾತಾವರಣ ವಿದ್ದು, ಅಲ್ಲಲ್ಲಿ ಸಾಧಾರಣ ಮಳೆ ಬಂದಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ತಲಕಾವೇರಿ, ಸಿದ್ದಾಪುರ, ನಾಪೋಕ್ಲು, ಭಾಗಮಂಡಲ ಭಾಗದಲ್ಲಿ ಗುರುವಾರ ತಡರಾತ್ರಿ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	118.81	2,441	9,560
ಹಾರಂಗಿ	2,859	2,857.43	958	1,749
ಕಬಿನಿ	2,284	2,281.96	2,778	5,000
ಹೇಮಾವತಿ	2,922	2,917.93	1,897	4,920
ಲಿಂಗನಮಕ್ಕಿ	1,819	1,812.60	7,741	-
ಸೂಪಾ (ಮೀ)	564	554.71	2,554	4,706
ಮಾಣಿ	594.36	585.82	739	-
ತುಂಗಭದ್ರಾ	1,633	1,632.39	4,857	14,302
ಮಲಪ್ರಭಾ	2079.50	2,078.30	582	694
ಘಟಪ್ರಭಾ	2175	2,175.00	3,121	3,121
ಭದ್ರಾ	186	185.1	2,982	3,896
ಆಲಮಟ್ಟಿ (ಮೀ)	519.60	519.60	2,226	2,226
ನಾರಾಯಣಪುರ (ಮೀ)	492.25	491.94	480	7,500

* ನೆಲಮಟ್ಟದಿಂದ

'ಜಿಲ್ಲೆಗೊಂದು ಇಎಸ್‌ಐ ಆಸ್ಪತ್ರೆ'

ಬೆಂಗಳೂರು: ರಾಜ್ಯದಲ್ಲಿ ಕಾರ್ಮಿಕರ ವಿಮಾ ನಿಗಮದಿಂದ (ಇಎಸ್‌ಐ) ಪ್ರತಿ ಜಿಲ್ಲೆಗೆ ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಆರಂಭಿಸುವ ಚಿಂತನೆ ನಡೆದಿದೆ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈಗ ಹೆಚ್ಚಿನ ಇಎಸ್‌ಐ ಆಸ್ಪತ್ರೆಗಳಲ್ಲಿ ಉತ್ತಮ ಸೌಲಭ್ಯಗಳಿವೆ. ಆದರೂ, ರೋಗಿಗಳನ್ನು 'ಎಂ-ಪ್ಯಾನೆಲ್' ಪಟ್ಟಿಯಲ್ಲಿರುವ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ. ಇದರಿಂದ ಇಲಾಖೆಯು ಹೆಚ್ಚಿನ ಮೊತ್ತದ ಚಿಕಿತ್ಸಾ ವೆಚ್ಚ ಭರಿಸುತ್ತಿದೆ. ಇದನ್ನು ತಪ್ಪಿಸಲು ಪ್ರತಿ ಜಿಲ್ಲೆಯಲ್ಲೂ ಆಸ್ಪತ್ರೆ ಆರಂಭಿಸುವ ಯೋಜನೆ ಇದೆ' ಎಂದರು.

ಸದ್ಯ 180 ಇಎಸ್‌ಐ ಚಿಕಿತ್ಸಾಲಯಗಳಿವೆ. ಅವುಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಮುಂದಿನ ವಾರ ತಾವು ದೆಹಲಿಗೆ ತೆರಳಲಿದ್ದು, ಹೊಸ ಇಎಸ್‌ಐ ಆಸ್ಪತ್ರೆಗಳ ಆರಂಭಕ್ಕೆ ನೆರವು ಕೋರಿ ಪ್ರಸ್ತಾವ ಸಲ್ಲಿಸಲಾಗುವುದು ಎಂದರು.

ಬಿ.ಇ ವಿದ್ಯಾರ್ಥಿಗಳ ಮೇಲೆ ಶಂಕೆ

ಒಂದನೇ ಪುಟದಿಂದ...

ಕಾರ್ಯಾಚರಣೆ: ಸ್ಥಳದಲ್ಲಿ ಸಿಕ್ಕ ಮದ್ಯದ ಬಾಟಲಿಗಳ ಆಧಾರದ ಮೇಲೆ ಸುತ್ತಮುತ್ತ ಇರುವ ಮದ್ಯದಂಗಡಿಗಳನ್ನು ಪೊಲೀಸರು ಜಾಲಾಡಿದ್ದಾರೆ. ಅಲ್ಲಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪಡೆದು ತನಿಖೆ ಮುಂದುವರಿಸಿದ್ದಾರೆ.

'ಕೃತ್ಯಕ್ಕೆ ಮುನ್ನ ಆರೋಪಿಗಳು ಸಂತ್ರಸ್ತೆಯ ಕಪಾಳಕ್ಕೆ ಹೊಡೆದು, ಕೈ ತಿರುಚಿ ಹಿಂಸಿಸಿದ್ದಾರೆ. ತೋಳಿನ ಮಾಂಸಖಂಡಗಳಿಗೆ ಹೆಚ್ಚು ಪೆಟ್ಟಾಗಿದ್ದು, ಆಕೆ ಆಘಾತದಿಂದ ಇನ್ನೂ ಈಚೆ ಬಂದಿಲ್ಲ. ಗುರುವಾರ ಮಧ್ಯಾಹ್ನ ಆಹಾರ ಸೇವನೆ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹೇಳಿಕೆ ಪಡೆಯದ ಪೊಲೀಸರು- ಉಗ್ರಪ್ಪ: 'ಸಾಮೂಹಿಕ ಅತ್ಯಾಚಾರದ ಸಂತ್ರಸ್ತೆಯಿಂದ ಪೊಲೀಸರು ಯಾವುದೇ ಹೇಳಿಕೆ ಪಡೆಯದೇ ಮೈಸೂರಿನ ಆಸ್ಪತ್ರೆಯಿಂದ ಬೇರೆ ಕಡೆಗೆ ಕಳುಹಿಸಿದ್ದಾರೆ' ಎಂದು ಕೆಪಿಸಿಸಿ ರಚಿಸಿರುವ ಸತ್ಯಶೋಧನಾ ಸಮಿತಿಯ ಅಧ್ಯಕ್ಷ ವಿ.ಎಸ್.ಉಗ್ರಪ್ಪ ಆರೋಪಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಅವರು ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಯುವಕನನ್ನು ಗುರುವಾರ ಹಾಗೂ ಯುವತಿಯನ್ನು ಶುಕ್ರವಾರ ಬೆಳಿಗ್ಗೆ ಆಸ್ಪತ್ರೆಯಿಂದ ಕಳುಹಿಸಿದ್ದಾಗಿ ವೈದ್ಯರು ತಿಳಿಸಿದ್ದಾರೆ. ಸಂತ್ರಸ್ತೆಯ ಮನವೊಲಿಸಿ ಹೇಳಿಕೆ ಪಡೆಯುವಲ್ಲಿ ಪೊಲೀಸರು ವಿಫಲರಾಗಿದ್ದಾರೆ' ಎಂದು ದೂರಿದರು.

ಸಂತ್ರಸ್ತೆ ಮೌನ: ಘಟನೆಯ ಕುರಿತು ಮಾಹಿತಿ ನೀಡಬೇಕಾದ ಸಂತ್ರಸ್ತೆ ಮೌನ ವಹಿಸಿದ್ದಾರೆ. ಅವರ ಪೋಷಕರು ಕೂಡ ಯಾರನ್ನೂ ಭೇಟಿ ಮಾಡುವುದಿಲ್ಲ ಎಂದು ಪತ್ರ ಬರೆದಿರುವುದು ತನಿಖೆಗೆ ಹಿನ್ನಡೆ ಉಂಟು ಮಾಡಿದೆ' ಎಂದು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸುದ್ದಿಗಾರರಿಗೆ ತಿಳಿಸಿದರು.

ಮುತ್ತಿಗೆ ಯತ್ನ: ನಗರದ 'ಜಲದರ್ಶಿನಿ' ಅತಿಥಿಗೃಹದಿಂದ ಸಂಜೆ ಸಚಿವರ ಕಾರು ಹೊರಬರುತ್ತಲೇ ಯುವ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಅವರನ್ನು ಚದುರಿಸಿ ನಂತರ ಕೆಲವರನ್ನು ವಶಕ್ಕೆ ಪಡೆದರು.

ಪ್ರತಿಭಟನೆ: ಅತ್ಯಾಚಾರ ಕೃತ್ಯವನ್ನು ಖಂಡಿಸಿ ನಗರದ ವಿವಿಧೆಡೆ ಮೈಸೂರು ಕನ್ನಡ ವೇದಿಕೆ, ಆಮ್ ಆದ್ಮಿ ಪಾರ್ಟಿ, ಮಾನವ ಹಕ್ಕುಗಳ ಜಾಗೃತಿ ಸಮಿತಿ, ಮೈಸೂರು ವಿಶ್ವವಿದ್ಯಾಲಯ ಸಂಶೋಧಕರ ಸಂಘ, ಜಿಲ್ಲಾ ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಆಂಧ್ರ ಮಾದರಿ' ಕ್ರಮ ಅಗತ್ಯ: ಎಚ್‌ಡಿಕೆ

ಒಂದನೇ ಪುಟದಿಂದ...

'ನಮ್ಮ ದೇಶದ ವ್ಯವಸ್ಥೆಯಲ್ಲಿ ಅಪರಾಧಿಗಳಿಗೆ ಭಯ ಇಲ್ಲ. ಎರಡು ದಿನ ಜೈಲಿನಲ್ಲಿಟ್ಟು ಮೂರನೇ ದಿನ ಜಾಮೀನು ಕೊಡುತ್ತಾರೆ ಎಂಬ ಭಾವನೆಯಿದೆ. ಹೀಗಾಗಿ ಕಠಿಣ ಕ್ರಮಕ್ಕೆ ಮುಂದಾಗಬೇಕು. ದುಷ್ಟರನ್ನು ಕುಡಿಯಲ್ಲಿಯೇ ಚಿವುಟಿ ಹಾಕುವ ಕೆಲಸ ಆಗಬೇಕು. ಅಲ್ಲಿಯವರೆಗೆ ಮೈಸೂರಿನಂತಹ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ' ಎಂದು ಎಚ್‌ಡಿಕೆ ಹೇಳಿದರು.

ಅತ್ಯಾಚಾರ ಪ್ರಕರಣ ಕುರಿತು ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, 'ಅವರು ಆ ರೀತಿ ಏಕೆ ಹೇಳಿದರೋ ಗೊತ್ತಿಲ್ಲ. ಗೃಹ ಸಚಿವರಾದ ಆರಂಭದಲ್ಲಿಯೇ 'ಇದರಿಂದ ನಿದ್ದೆಗೆಟ್ಟಿದ್ದೇನೆ' ಎಂಬ ಆತಂಕದ ಮಾತನಾಡಿದ್ದರು. ಗೃಹ ಇಲಾಖೆ ಸೂಕ್ಷ್ಮ ಇಲಾಖೆಯಾಗಿದೆ. ಉತ್ತಮವಾಗಿ ಕೆಲಸ ಮಾಡದೇ ಇದ್ದರೆ ಕಾನೂನುವ್ಯವಸ್ಥೆ ನಿರ್ವಹಣೆ ಕಷ್ಟ' ಎಂದರು.

ಅತ್ಯಾಚಾರ ಸಂತ್ರಸ್ತೆಯ ದೂರಿಗಾಗಿ ಕಾಯುವುದಿಲ್ಲ. ಲಭ್ಯ ಸಾಕ್ಷ್ಯಗಳನ್ನು ಆಧರಿಸಿ ತನಿಖೆ ಮುಂದುವರಿಸಲಾಗುವುದು
ಪ್ರವೀಣ್ ಸೂದ್
ರಾಜ್ಯ ಪೊಲೀಸ್ ಮಹಾನಿರ್ದೇಶಕ

ಸಂತ್ರಸ್ತೆಯ ಹೇಳಿಕೆ ಪಡೆಯದೆ ಪೊಲೀಸರು ಆಸ್ಪತ್ರೆಯಿಂದ ಬೇರೆ ಕಡೆಗೆ ಕಳುಹಿಸಿರುವುದು ಕಾನೂನಿಗೆ ವಿರುದ್ಧವಾಗಿದೆ
ವಿ.ಎಸ್.ಉಗ್ರಪ್ಪ
ಕಾಂಗ್ರೆಸ್ ಸತ್ಯಶೋಧನಾ ಸಮಿತಿ ಅಧ್ಯಕ್ಷ

ಅವಿವೇಕದ ಮಾತುಗಳು ಇಂದಿಗೇ ಕೊನೆಯಾಗಲಿ: ನಟಿ ರಮ್ಯಾ

ಬೆಂಗಳೂರು: 'ಅತ್ಯಾಚಾರ ಅಥವಾ ದೈಹಿಕವಾಗಿ ಮಹಿಳೆ ಮೇಲೆ ಪುರುಷನೊಬ್ಬ ದೌರ್ಜನ್ಯ ಎಸಗಿದರೂ ದೂಷಣೆಗೆ ಒಳಗಾಗುವುದು ಮಹಿಳೆಯೇ. ಮಹಿಳೆಯರ ಮೇಲಿನ ಅಪರಾಧಗಳ ಬಗ್ಗೆ ಕುರುಡರಾಗಬೇಡಿ. ಈ ಕುರಿತು ಧ್ವನಿ ಎತ್ತಿ' ಎಂದು ಮಾಜಿ ಸಂಸದೆ, ನಟಿ ರಮ್ಯಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ಕುರಿತು, ಗೃಹ ಸಚಿವ ಆರಗ ಜ್ಞಾನೇಂದ್ರ ನೀಡಿದ್ದ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ರಮ್ಯಾ, 'ಇದು ನಿನ್ನ ತಪ್ಪು, ನೀನು ಆ ರೀತಿ ಮಾತನಾಡಬಾರದಿತ್ತು, ನೀನು ಆ ರೀತಿ ಮಾಡಬಾರದಿತ್ತು, ನೀನು ಆ ಉಡುಪು ಧರಿಸಬಾರದಿತ್ತು...ಈ ಅವಿವೇಕದ ಮಾತುಗಳು ಸಾಕು. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಈ ದೂಷಣೆಯನ್ನು ನಾನೂ ಎದುರಿಸಿದ್ದೇನೆ. ಇದು ಇಂದಿಗೇ ಕೊನೆಯಾಗಲಿ' ಎಂದು ಉಲ್ಲೇಖಿಸಿದ್ದಾರೆ.



ಬಿಜೆಪಿ ಸರ್ಕಾರದ ಆಡಳಿತದಲ್ಲಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಸೇರಿದಂತೆ ರಾಜ್ಯದ ಯಾರೊಬ್ಬರೂ ಸುರಕ್ಷಿತರಲ್ಲ
ಡಿ.ಕೆ. ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ



ನಾನೀಗ ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದೇನೆ. ಹೋರಾಟಗಾರ್ತಿ ರೀತಿಯಲ್ಲಿ ಮಾತನಾಡಲು ಆಗುವುದಿಲ್ಲ
ಶೋಭಾ ಕರಂದ್ಲಾಜೆ
ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ

12x16

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಹದಿಹರೆಯದ ಮಕ್ಕಳೊಂದಿಗೆ ಹೋರಾಡುವುದು, ಪ್ರಚಂಡ ಅಲೆಗಳೊಟ್ಟಿಗೆ ಹೋರಾಡಿದಷ್ಟೇ ಅಪಾಯಕಾರಿ ಎಂಬುದು ಪ್ರಜ್ಞಾವಂತ ಪೋಷಕರಿಗೆ ತಿಳಿದಿರುತ್ತದೆ.

-ಹಯಮ್ ಜಿನಾಟ್

ನಗದೀಕರಣ ಯೋಜನೆ: ಹಲವು ಗಂಭೀರ ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡಲೇಬೇಕು

ದೇಶದಲ್ಲಿನ ಮೂಲಸೌಕರ್ಯ ಅಭಿವೃದ್ಧಿಗಾಗಿ 2020-25ರ ಅವಧಿಯಲ್ಲಿ ₹111 ಲಕ್ಷ ಕೋಟಿ ಹೂಡಿಕೆ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ಸಾಂಪ್ರದಾಯಿಕ ಮೂಲಗಳಿಂದ ಶೇ 85ರವರೆಗಿನ ಮೊತ್ತವನ್ನು ಮಾತ್ರ ಹೊಂದಿಸಲು ಸಾಧ್ಯ. ಉಳಿದ ಮೊತ್ತವನ್ನು ಸಂಗ್ರಹಿಸಲು ವಿನೂತನವಾದ ದಾರಿಯನ್ನು ಹುಡುಕಿಕೊಳ್ಳಬೇಕು ಎಂಬುದು ಸರ್ಕಾರದ ಚಿಂತನೆ. ರಾಷ್ಟ್ರೀಯ ನಗದೀಕರಣ ಯೋಜನೆಯು (ಎನ್ಎಂಪಿ) ಇಂತಹ ವಿನೂತನ ಕಾರ್ಯತಂತ್ರದ ಭಾಗ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಇದರ ಭಾಗವಾಗಿ 2021-25ರ ನಾಲ್ಕು ವರ್ಷಗಳ ಅವಧಿಯಲ್ಲಿ ₹ 6 ಲಕ್ಷ ಕೋಟಿ ಸಂಗ್ರಹಿಸುವ ಯೋಜನೆಯನ್ನು ನಿರ್ಮಲಾ ಘೋಷಿಸಿದ್ದಾರೆ. ಸರ್ಕಾರದ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ಮೂಲಕ ನೀಡಿ ಹಣ ಸಂಗ್ರಹಿಸುವುದು ಈ ಯೋಜನೆಯ ಹಿಂದಿನ ಕಾರ್ಯತಂತ್ರ. ರಸ್ತೆ, ರೈಲ್ವೆ, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಮುಂತಾದ 12 ಸಚಿವಾಲಯಗಳ ವ್ಯಾಪ್ತಿಯಲ್ಲಿ ಬರುವ 20 ಆಸ್ತಿ ವರ್ಗಗಳನ್ನು ನಗದೀಕರಣ ಯೋಜನೆಗಾಗಿ ಗುರುತಿಸಲಾಗಿದೆ. ಇದು, ಸರ್ಕಾರದ ಪಾಲು ಮಾರಾಟ ಅಥವಾ ಖಾಸಗೀಕರಣ ಅಲ್ಲ ಎಂದು ಕೇಂದ್ರ ಸರ್ಕಾರವು ಸ್ಪಷ್ಟವಾಗಿ ಹೇಳಿದೆ. ಯೋಜನೆಯು ನಾಲ್ಕು ವರ್ಷಗಳ ಅವಧಿಗೆ ಮಾತ್ರ ಚಾಲ್ತಿಯಲ್ಲಿ ಇರುತ್ತದೆ. ಗುತ್ತಿಗೆ ನೀಡಿದ ಆಸ್ತಿಯ ಮಾಲೀಕತ್ವವು ಸರ್ಕಾರದ ವಶದಲ್ಲಿಯೇ ಇರುತ್ತದೆ. ಉತ್ಪಾದಕ ಉದ್ದೇಶಕ್ಕಾಗಿ ಮಾತ್ರ ಆಸ್ತಿಯನ್ನು ಖಾಸಗಿ ಸಂಸ್ಥೆಗಳ ವಶಕ್ಕೆ ಒಪ್ಪಿಸಲಾಗುತ್ತದೆ ಎಂದು ಸರ್ಕಾರ ಹೇಳಿದೆ.



ಸರ್ಕಾರದ ಸೊತ್ತು ಖಾಸಗಿಯವರ ನಿರ್ವಹಣೆಗೆ ಒಳಪಡುವುದರಿಂದ ವಿಧಿಸಬಹುದಾದ ಹೊಸ ಶುಲ್ಕಗಳು ಜನರಿಗೆ ಹೊರೆಯಾಗದಂತೆ ನೋಡಿಕೊಳ್ಳಬೇಕು

ಯೋಜನೆಯು ಹೇಗೆ ಅನುಷ್ಠಾನಗೊಳ್ಳಲಿದೆ, ಇದರಿಂದ ಸಿಕ್ಕ ವರಮಾನವು ಯಾವ ರೀತಿಯಲ್ಲಿ ವಿನಿಯೋಗ ಆಗಲಿದೆ ಎಂಬುದಕ್ಕೆ ಸಂಬಂಧಿಸಿದ ಪ್ರಶ್ನೆಗಳು ಇವೆ. ಯೋಜನೆಯು ಸ್ವಜನಪಕ್ಷಪಾತಕ್ಕೆ ದಾರಿ ಮಾಡಿಕೊಡಲಿಕ್ಕಿಲ್ಲವೇ ಎಂಬ ಪ್ರಶ್ನೆಯೂ ಇದೆ. ಪ್ರಮುಖವಾದ ಕೆಲವು ಆಸ್ತಿಗಳು ಅಧಿಕಾರದಲ್ಲಿ ಇರುವವರ ನೆಚ್ಚಿನ ಖಾಸಗಿ ಕಂಪನಿಗಳ ಪಾಲಾಗಬಹುದು, ಪರಿಣಾಮವಾಗಿ ಅದು ಏಕಸ್ವಾಮ್ಯ ಹಾಗೂ ಸಂಬಂಧಿಸಿದ ಸಮಸ್ಯೆಗಳಿಗೆ ಮೂಲವಾಗಬಹುದು ಎಂಬ ಅನುಮಾನಗಳಿಗೆ ಸ್ಪಷ್ಟವಾದ ಉತ್ತರಗಳನ್ನು ಸರ್ಕಾರ ನೀಡಿಲ್ಲ. ಈ ಯೋಜನೆಯ ಅನುಷ್ಠಾನವು ಅತ್ಯಂತ ಪಾರದರ್ಶಕವಾಗಿ ಇರಲಿದೆ ಎಂಬ ಭರವಸೆಯನ್ನು ಸರ್ಕಾರ ನೀಡಿದೆ. ಆದರೆ, ಸರ್ಕಾರದ ವ್ಯವಸ್ಥೆಯು ಅಪಾರದರ್ಶಕವಾಗಿ ಇರುವುದಕ್ಕೇ ಕುಖ್ಯಾತವಾಗಿದೆ ಎಂಬುದನ್ನು ಮರೆಯಲಾಗದು. ವರಮಾನ ಸಂಗ್ರಹವಷ್ಟೇ ಈ ಯೋಜನೆಯ ಉದ್ದೇಶ ಅಲ್ಲ; ಸಾರ್ವಜನಿಕ ಸೊತ್ತುಗಳ ದಕ್ಷ ನಿರ್ವಹಣೆಯ ಗುರಿಯೂ ಈ ಯೋಜನೆ ರೂಪಿಸುವಿಕೆಯ ಹಿಂದೆ ಇದೆ. ಹಾಗೆಯೇ, ಈ ಯೋಜನೆಯಿಂದ ದೊರೆತ ಮೊತ್ತವು ಮೂಲಸೌಕರ್ಯ ನಿರ್ಮಾಣಕ್ಕೆ ಬಳಕೆ ಆಗಲಿದೆ ಎಂದು ಹೇಳಲಾಗಿದೆ. ಆದರೆ, ಈ ಮೊತ್ತವನ್ನು ವರಮಾನ ಎಂದು ಸರ್ಕಾರವು ಪರಿಗಣಿಸುವುದರಿಂದ ಯಾವುದೇ ಉದ್ದೇಶಕ್ಕೂ ಅದು ಬಳಕೆ ಆಗಬಹುದಾಗಿದೆ. ಮೂಲಸೌಕರ್ಯಕ್ಕೆ ಮಾತ್ರ ಹಣ ವಿನಿಯೋಗ ಆಗುವ ರೀತಿಯಲ್ಲಿ ನೋಡಿಕೊಳ್ಳುವುದು ಹೇಗೆ? ಇಂತಹ ಹಲವು ಪ್ರಶ್ನೆಗಳಿಗೆ ಯೋಜನೆಯ ಅನುಷ್ಠಾನದಲ್ಲಿ ಉತ್ತರ ಸಿಗಲಿದೆ. ಆಸ್ಟ್ರೇಲಿಯಾ, ಸಿಂಗಪುರದಂತಹ ದೇಶಗಳು ಸಾರ್ವಜನಿಕ ಆಸ್ತಿಯನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡುವ ಕಾರ್ಯತಂತ್ರವನ್ನು ಅನುಸರಿಸಿವೆ. ಆದರೆ, ಅಲ್ಲಿನ ಅನುಭವವು ಅತ್ಯಂತ ಉತ್ತೇಜಕವಾಗಿಯೇನೂ ಇಲ್ಲ ಎಂಬುದು ನಮ್ಮ ದೇಶದಲ್ಲಿ ಇಂತಹ ಯೋಜನೆ ಅನುಷ್ಠಾನಕ್ಕೆ ಎಚ್ಚರಿಕೆಯಾಗಿ ಪರಿಣಮಿಸಬೇಕು. ನಮ್ಮ ವ್ಯವಸ್ಥೆಯು ದಕ್ಷವಾಗಿ ಕಾರ್ಯನಿರ್ವಹಿಸಿದ ನಿದರ್ಶನಗಳು ಬಹಳ ಕಡಿಮೆ. ಯೋಜನೆಗಳ ಜಾರಿಯಲ್ಲಿ ಭ್ರಷ್ಟಾಚಾರಕ್ಕೆ ಯಥೇಚ್ಛ ಅವಕಾಶಗಳೂ ಇವೆ. ಆಸ್ತಿಗಳ ಮೌಲ್ಯವನ್ನು ಕಡಿಮೆ ಅಂದಾಜು ಮಾಡುವ ಮೂಲಕ ಭ್ರಷ್ಟಾಚಾರ ನಡೆಸಬಹುದು. ಅದಕ್ಷತೆಯ ಕಾರಣಕ್ಕೆ ಸೊತ್ತಿನ ಮೌಲ್ಯವನ್ನು ಹೆಚ್ಚಾಗಿ ಅಂದಾಜು ಮಾಡಿದರೆ ಯೋಜನೆಯೇ ವಿಫಲವಾಗಬಹುದು. ಈ ಎರಡೂ ಅಪಾಯಗಳನ್ನು ಮೀರುವ ರೀತಿಯಲ್ಲಿ ಸರ್ಕಾರವು ಕಾರ್ಯನಿರ್ವಹಿಸಬಹುದೇ ಎಂಬುದು ಪ್ರಶ್ನಾರ್ಹ. ಸಾರ್ವಜನಿಕ ರಂಗದ ಉದ್ದಿಮೆಗಳಲ್ಲಿದ್ದ ಸರ್ಕಾರದ ಪಾಲು ಮಾರಾಟವು ದಕ್ಷವಾಗಿ, ಭ್ರಷ್ಟಾಚಾರರಹಿತವಾಗಿ ನಡೆದ ಉದಾಹರಣೆಯೇ ಇಲ್ಲ. ಆಸ್ತಿ ನಗದೀಕರಣವು ಖಾಸಗೀಕರಣದ ರೀತಿಯದ್ದೇ ಯೋಜನೆ ಆಗಿರುವುದರಿಂದ ಈ ಪ್ರಶ್ನೆಯು ಮಹತ್ವದ್ದೇ ಆಗಿದೆ. 'ಇದು ಹಿಂಬಾಗಿಲಿನ ಖಾಸಗೀಕರಣ, ಸ್ವಜನಪಕ್ಷಪಾತಕ್ಕಾಗಿಯೇ ಈ ಯೋಜನೆ ರೂಪಿಸಲಾಗಿದೆ ಮತ್ತು ಇದು ವಿವೇಚನೆರಹಿತ ಯೋಜನೆ' ಎಂಬ ಗಂಭೀರ ಆರೋಪಗಳನ್ನು ವಿರೋಧ ಪಕ್ಷಗಳು ಮಾಡಿವೆ. ₹ 6 ಲಕ್ಷ ಕೋಟಿ ಸಂಗ್ರಹಿಸುವ ಉದ್ದೇಶದ ಬೃಹತ್ ಯೋಜನೆಯನ್ನು ರೂಪಿಸುವಾಗ ಇಂತಹ ಆರೋಪಗಳು ಬಾರದಂತೆ ಸರ್ಕಾರ ಎಚ್ಚರ ವಹಿಸಬೇಕಾಗಿತ್ತು. ಸರ್ಕಾರವು ಈ ಪ್ರಶ್ನೆಗಳಿಗೆ ಈಗಲಾದರೂ ಮನವರಿಕೆ ಆಗುವ ರೀತಿಯ ಉತ್ತರವನ್ನು ಜನರಿಗೆ ನೀಡುವುದು ಅಗತ್ಯ. ಯಾಕೆಂದರೆ, ಈ ಎಲ್ಲ ಆಸ್ತಿಗಳು ಜನರ ತೆರಿಗೆ ಹಣದಿಂದಲೇ ನಿರ್ಮಾಣ ಆಗಿವೆ.

ಯೋಜನೆಯ ಕಾರ್ಯಸಾಧುತ್ವದ ಬಗ್ಗೆಯೂ ಹಲವು ಪ್ರಶ್ನೆಗಳು ಇವೆ. ಲಾಭದಾಯಕ ಅಲ್ಲದ ಸೊತ್ತುಗಳನ್ನು ಯಾವ ಖಾಸಗಿ ಕಂಪನಿಯೂ ವಹಿಸಿಕೊಳ್ಳುವುದಿಲ್ಲ. ಅಲ್ಲಿಗೆ ಸಾರ್ವಜನಿಕ ಸೊತ್ತಿನ ದಕ್ಷ ನಿರ್ವಹಣೆಯ ಉದ್ದೇಶವೇ ವಿಫಲವಾಗಬಹುದು. ಈ ವರ್ಷ ₹ 88 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ. ಮಾರುಕಟ್ಟೆಯಿಂದ ಹಣ ಸಂಗ್ರಹಿಸುವ ಉದ್ದೇಶದ ಹಲವು ಯೋಜನೆಗಳು ಈಗಾಗಲೇ ಚಾಲ್ತಿಯಲ್ಲಿ ಇವೆ. ಹಾಗಾಗಿ, ಈ ಗುರಿಯನ್ನು ಸಾಧಿಸುವ ದಿಸೆಯಲ್ಲಿ ಖಾಸಗಿ ಕಂಪನಿಗಳು ಕೈಜೋಡಿಸುವುದು ಸಾಧ್ಯವೇ? ಜಾಗತಿಕ ಮಟ್ಟದಲ್ಲಿ ಈಗ ಇರುವ ನಗದು ಹರಿವು ದೀರ್ಘಕಾಲ ಉಳಿಯದು. ಹಾಗಾಗಿ, ಯೋಜನೆ ಘೋಷಣೆಯ ಸಮಯವು ಸೂಕ್ತವೇ ಆಗಿದೆ. ಮುಂಬೈ-ಪುಣೆ ಹೆದ್ದಾರಿಯನ್ನು ಖಾಸಗಿಯವರಿಗೆ ವಹಿಸಿದ ಯಶಸ್ಸಿನ ಕತೆಯೂ ಸರ್ಕಾರದ ಬಳಿ ಇದೆ. ಹಾಗಾಗಿ, ಯೋಜನೆಯು ಯಶಸ್ವಿ ಆಗುವುದೇ ಇಲ್ಲ ಎಂಬ ನಕಾರಾತ್ಮಕ ಯೋಚನೆಯೂ ಅನಗತ್ಯ. ಸಾರ್ವಜನಿಕ ಸೊತ್ತುಗಳು ಖಾಸಗಿಯವರ ನಿರ್ವಹಣೆಗೆ ಹೋದರೆ, ಅದರ ಬಳಕೆಗೆ ಜನರು ನಿರ್ದಿಷ್ಟ ಶುಲ್ಕವನ್ನು ಪಾವತಿಸುವುದು ಅನಿವಾರ್ಯ. ಕೋವಿಡ್ ಕಾಲವು ಜನರ ಆರ್ಥಿಕ ಸಾಮರ್ಥ್ಯವನ್ನು ಉಡುಗಿಸಿದೆ. ತೈಲ ಬೆಲೆಯೇ ಜನರ ಬೆನ್ನೆಲುಬು ಮುರಿದಿದೆ. ಇಂತಹ ಸಂದರ್ಭದಲ್ಲಿ ವಿಧಿಸಬಹುದಾದ ಹೊಸ ಶುಲ್ಕವು ಜನಜೀವನವನ್ನು ಇನ್ನಷ್ಟು ದುಸ್ತರ ಮಾಡುವುದನ್ನು ತಡೆಯುವ ದಿಸೆಯಲ್ಲಿಯೂ ಸರ್ಕಾರವು ಮುತುವರ್ಜಿ ವಹಿಸಬೇಕಿದೆ.

ದಿನದ ಟ್ವೀಟ್



ಇದು ನಮ್ಮ ಸ್ಥಿತಿ!

ಕೇರಳದಲ್ಲಿ ಆದಿವಾಸಿ ಹುಡುಗಿಯೊಬ್ಬಳು ಮರದಿಂದ ಬಿದ್ದು ಬೆನ್ನುಮೂಳೆ ಮುರಿದುಕೊಂಡಿದ್ದಾಳೆ. ಆನ್‌ಲೈನ್ ತರಗತಿಗಾಗಿ ಇಂಟರ್ನೆಟ್ ಸಂಪರ್ಕ ಪಡೆಯಲು ಅವಳು ಆ ಮರ ಹತ್ತಿದ್ದಳು. ಭಾರತದಲ್ಲಿ ಅತಿಹೆಚ್ಚು ಅಂತರ್ಜಾಲ ಸಂಪರ್ಕ ಹೊಂದಿರುವ ರಾಜ್ಯದ ಸ್ಥಿತಿ ಇದು. ಇನ್ನು ಡಿಜಿಟಲ್ ಅವಕಾಶಗಳಿಗೆ ತೆರೆದುಕೊಳ್ಳುವುದರಲ್ಲಿ ಹಿಂದೆ ಉಳಿದಿರುವ ಒಡಿಶಾದ ಸ್ಥಿತಿ ಹೇಗಿರಬಹುದು ಯೋಚಿಸಿ.

ಬಿಜಯಾ ಬಿಸ್ವಾಲ್, ಸಾಮಾಜಿಕ ಕಾರ್ಯಕರ್ತೆ

ಕಿಡಿನುಡಿ



ಮನುಷ್ಯನಿಗೆ ಬದುಕಲು ತಿಂಗಳಿಗೆ ಐದು ಕೆ.ಜಿ ಅಕ್ಕಿ ಸಾಕು. ನನಗೆ 60 ವರ್ಷ. 2 ಚಪಾತಿ ಮೇಲೆ ಒಂದಿಷ್ಟು ಅನ್ನ ಸಾಕು. ಮುಖ್ಯಮಂತ್ರಿಯಾದರೆ 10 ಕೆ.ಜಿ. ಪಡಿತರ ಕೊಡುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಯಾಕೆ ಅಷ್ಟು ಕೊಡಲಿಲ್ಲ? ಆಗ ಅವರು 7 ಕೆ.ಜಿ. ಕೊಟ್ಟಿದ್ದರು. ಎಚ್‌.ಡಿ. ಕುಮಾರಸ್ವಾಮಿ ಅವಧಿಯಲ್ಲಿ 5 ಕೆ.ಜಿ. ಆಗಿದೆ. ನಾವು ಅಕ್ಕಿ, ರಾಗಿ ಸೇರಿ ತಿಂಗಳಿಗೆ 5 ಕೆ.ಜಿ ಕೊಡುತ್ತಿದ್ದೇವೆ. ಒಬ್ಬನಿಗೆ ಅಷ್ಟು ಸಾಕು.

ಉಮೇಶ ಕತ್ತಿ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

25 ವರ್ಷಗಳ ಹಿಂದೆ

ಬುಧವಾರ, 28-8-1996

● **ಪಟೇಲ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ತಿರಸ್ಕೃತ**

ಬೆಂಗಳೂರು, ಆ. 27– 3 ತಿಂಗಳ ಅಧಿಕಾರ ಪೂರ್ಣಗೊಳಿಸುವ ಹೊಸ್ತಿಲಲ್ಲಿರುವ ಜೆ.ಎಚ್. ಪಟೇಲ್ ನೇತೃತ್ವದ ಸಚಿವ ಸಂಪುಟದ ಮೇಲೆ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ಅನಿರೀಕ್ಷಿತವಾಗಿ ನಡೆದ ಧರಣಿ, ಕೋಲಾಹಲದ ನಡುವೆ ಇಂದು ವಿಧಾನಸಭೆಯಲ್ಲಿ ಧ್ವನಿಮತದಿಂದ ಬಿದ್ದುಹೋಯಿತು.

ಮುಖ್ಯಮಂತ್ರಿ ಪಟೇಲ್ ಅವರ ಉತ್ತರಕ್ಕಾಗಿ ಕಾದಿದ್ದ ಕ್ಷಣದಲ್ಲಿ ಎಂಇಎಸ್ ಹಾಗೂ ಬೆಳಗಾವಿಯ ಕಾಂಗ್ರೆಸ್ ಸದಸ್ಯರು ಕಬ್ಬಿನ ಸಮಸ್ಯೆ ಹಿನ್ನೆಲೆಯಲ್ಲಿ ಹೂಡಿದ ಧರಣಿಯಿಂದ ಕೋಲಾಹಲ ಉಂಟಾಯಿತು.

50 ವರ್ಷಗಳ ಹಿಂದೆ

ಶನಿವಾರ, 28-8-1971


● **ರೈತರಿಂದ ಬಾಕಿ ಇದ್ದರೂ ಮತ್ತೆ ತಕಾವಿ ಸಾಲ ನೀಡಿಕೆ ಪರಿಶೀಲಿಸಲು ಸೂಚನೆ**

ಬೆಂಗಳೂರು, ಆ. 27– ಅಭಾವ ಪ್ರದೇಶಗಳಲ್ಲಿ ರೈತರಿಂದ ತಕಾವಿ ಸಾಲದ ಬಾಕಿ ಇದ್ದರೂ ಬಿತ್ತನೆ ಬೀಜ ಮುಂತಾದವನ್ನು ಕೊಳ್ಳಲು ತಕಾವಿ ಸಾಲಕ್ಕಾಗಿ ಅರ್ಜಿ ಹಾಕಿದರೆ ಬಾಕಿ ತೀರಿಸುವಂತೆ ಒತ್ತಾಯಪಡಿಸದೆ ಅಂತಹ ಅರ್ಜಿಗಳನ್ನು ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇದರಿಂದ ಸಕಾಲದಲ್ಲಿ ಬಿತ್ತನೆ ಬೀಜ ಹಾಗೂ ಗೊಬ್ಬರ ಕೊಳ್ಳಲು ರೈತರಿಗೆ ಅನುಕೂಲವಾಗುವುದೆಂಬ ಆಶಯವನ್ನು ರಾಜ್ಯಪಾಲ ಶ್ರೀ ಧರ್ಮವೀರ ವ್ಯಕ್ತಪಡಿಸಿದ್ದಾರೆ.

ಈ ತೆರಿಗೆಯನ್ನು ರದ್ದುಪಡಿಸುವ ಈಗಿನ ಸರ್ಕಾರದ ಕ್ರಮ ಇನ್ನಷ್ಟು ಸುಧಾರಣೆಗಳಿಗೆ ದಾರಿಯಾಗಲಿ

ಪೂರ್ವಾನ್ವಯ ತೆರಿಗೆ: ಪ್ರಣವ್ ವೃತ್ತಾಂತ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು 2012ರಲ್ಲಿ ಜಾರಿಗೆ ತಂದಿದ್ದ ಪೂರ್ವಾನ್ವಯ ತೆರಿಗೆ (retrospective tax) ಕಾನೂನನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಅಧಿಕೃತವಾಗಿ ಪರಿಸಮಾಪ್ತಿಗೊಳಿಸಿದೆ. ಯುಪಿಎ ಅವಧಿಯ ಕಾನೂನು ಒಂದು ಕರಾಳ ಶಾಸನವಾಗಿತ್ತು. ಸಾರ್ವಭೌಮತ್ವವನ್ನು ತಪ್ಪಾಗಿ ಗ್ರಹಿಸಿಕೊಂಡು ಇಂತಹ ಕಾನೂನು ತರಲಾಗಿತ್ತು.

ನಿಸ್ತೇಜರಾಗಿದ್ದ ಹೂಡಿಕೆದಾರರಲ್ಲಿ ಇಂದಿನ ಸರ್ಕಾರದ ಕ್ರಮವು ಒಂದಿಷ್ಟು ಸಮಾಧಾನ ಮೂಡಿಸಿರಬಹುದು. ಭಾರತದಲ್ಲಿ ಹಣ ಹೂಡಿಕೆ ಮಾಡಲು ಆಮಿಷವೊಡ್ಡುವ ನಮ್ಮ ಅಧಿಕಾರಶಾಹಿಯು ನಂತರದಲ್ಲಿ ತೋಡುವ ಖೆಡ್ಡಾ ಹೇಗಿರುತ್ತದೆ ಎಂಬುದನ್ನು ಊಹಿಸಲು ಹೂಡಿಕೆದಾರರಿಗೆ ಸಾಧ್ಯವಾಗುವುದೇ ಇಲ್ಲ. 2014ರ ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು, 'ಕಾಂಗ್ರೆಸ್ಸು ತೆರಿಗೆ ಭಯೋತ್ಪಾದನೆಯಲ್ಲಿ ತೊಡಗಿದೆ' ಎಂದು ಆರೋಪಿಸಿದ್ದರು. ತಾನು ಅಧಿಕಾರಕ್ಕೆ ಬಂದರೆ ಈ ಬಗೆಯ ತೆರಿಗೆಗಳನ್ನು ರದ್ದು ಮಾಡುವುದಾಗಿ ಬಿಜೆಪಿ ಹೇಳಿತ್ತು. ಆದರೆ ಅಧಿಕಾರಕ್ಕೆ ಬಂದ ನಂತರ ಕೆಲವು ಸಂಗತಿಗಳನ್ನು ಉದ್ದೇಶಪೂರ್ವಕವಾಗಿ ಮರೆಯುವ ಪ್ರವೃತ್ತಿ ಬೆಳೆಸಿಕೊಂಡಿತ್ತು.

ಪೂರ್ವಾನ್ವಯ ತೆರಿಗೆ ಕಾನೂನು ಜಾರಿಗೆ ತಂದಿದ್ದಕ್ಕೆ ಅಷ್ಟೂ ದೂಷಣೆಯನ್ನು ಅಂದು (2012ರಲ್ಲಿ) ಕೇಂದ್ರ ಹಣಕಾಸು ಸಚಿವರಾಗಿದ್ದ ಪ್ರಣವ್ ಮುಖರ್ಜಿ ಅವರೇ ಹೊತ್ತುಕೊಳ್ಳಬೇಕು. ಭಾರತದಲ್ಲಿ ಆಸ್ತಿ ಹೊಂದಿರುವ ವಿದೇಶಿ ಕಂಪನಿಗಳು 1962ರ ನಂತರ ನಡೆಸಿದ ಷೇರು ವರ್ಗಾವಣೆಯನ್ನು ತೆರಿಗೆ ವ್ಯಾಪ್ತಿಗೆ ತರುವ ಉದ್ದೇಶ ಈ ಕಾನೂನಿನದ್ದು. ಮುಖರ್ಜಿ ಅವರು ಹಿಂದಕ್ಕೆ ಹೋಗಿ, ಈಸ್ಟ್ ಇಂಡಿಯಾ ಕಂಪನಿಯ ಕಾಲದವರೆಗೂ ತೆರಿಗೆ ವಿಧಿಸಬಹುದಿತ್ತು!

'ಪ್ರತೀ ನೌಕರನೂ ಕಾಲಕ್ರಮೇಣ ತನ್ನ ಅಸಾಮರ್ಥ್ಯದ ಹಂತವನ್ನು ತಲುಪುತ್ತಾನೆ' ಎಂದು ಲಾರೆನ್ಸ್ ಜೆ. ಪೀಟರ್ ಹೇಳಿದ್ದರು. ಕೆಲವು ಕಂಪನಿಗಳು ಈ ಅಸಾಮರ್ಥ್ಯವನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುತ್ತವೆ. ಕೆಲವು ಸಂಸ್ಥೆಗಳು ತಮ್ಮ ಸಿಬ್ಬಂದಿಯನ್ನು ವಜಾ ಮಾಡುತ್ತವೆ. ಇನ್ನು ಕೆಲವು ಸಂಸ್ಥೆಗಳು ಆ ವ್ಯಕ್ತಿ ಸಂಸ್ಥೆಯ ಬಗ್ಗೆ ಹೊಂದಿರುವ ನಿಷ್ಠೆಯನ್ನು ನೋಡಿ ವಜಾ ಮಾಡುವುದಿಲ್ಲ. ಇಂತಹ ಸಂದರ್ಭದಲ್ಲಿ ಅಂತಹ ವ್ಯಕ್ತಿಗಳಿಗೆ ಬಡ್ತಿ ನೀಡಿ ಮೂಲೆಗೆ ತಳ್ಳುವ ಪದ್ಧತಿಗಳೂ ಇವೆ ಎಂದು ಲಾರೆನ್ಸ್ ಹೇಳಿದ್ದರು!

ಮುಖರ್ಜಿ ಅವರು ಅರ್ಥವ್ಯವಸ್ಥೆಯನ್ನು ಹಾಳು-ಮಾಡಿಬಿಟ್ಟರು ಎಂಬ ವಿಚಾರದಲ್ಲಿ ಸಮ್ಮತಿ ಮೂಡಿತ್ತು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿ ಹಾಗೂ ಪಿ. ಚಿದಂಬರಂ ಅವರು ಹಣಕಾಸು ಸಚಿವರಾಗಿ ಮಾಡಿದ್ದನ್ನೆಲ್ಲ ಮುಖರ್ಜಿ ಅವರು ತಲೆಕೆಳಗು ಮಾಡಿದ್ದರು. ಹಗರಣಗಳು ಇದ್ದರೂ ಯುಪಿಎ ಅವಧಿಯಲ್ಲಿ ಅರ್ಥ ವ್ಯವಸ್ಥೆಯು ವೇಗವಾಗಿ ಬೆಳೆದಿತ್ತು. ಮುಖರ್ಜಿ ಅವರಿಗೆ ತಮ್ಮ ನಡೆಯು ಹೂಡಿಕೆದಾರರ ಭಾವನೆಗಳ ಮೇಲೆ, ಅರ್ಥವ್ಯವಸ್ಥೆಯ ಮೇಲೆ ಬೀರಬಹುದಾದ ಪರಿಣಾಮವನ್ನು ಗ್ರಹಿಸಲು ಆಗಲಿಲ್ಲ ಎಂದು ಹಲವರು ಹೇಳಿದ್ದರು.

ಪ್ರತಿಗಾಮಿ ನಡೆಗಳಿಂದಾಗಿ ಅಂತರರಾಷ್ಟ್ರೀಯ ಸಮುದಾಯದಿಂದ ವ್ಯಕ್ತವಾದ ಟೀಕೆಗಳನ್ನು, ಅರ್ಥ-ವ್ಯವಸ್ಥೆಯು ಇಳಿಕೆಯ ಹಾದಿ ಹಿಡಿದಿದ್ದನ್ನು ಗ್ರಹಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು, ಹಣಕಾಸು ಸಚಿವಾಲಯದ ನೀತಿಗಳನ್ನು ಬಹಿರಂಗವಾಗಿ, ಅತ್ಯಂತ ಕಟುವಾಗಿ ಟೀಕಿಸಿತ್ತು. ಸಚಿವಾಲಯವನ್ನು ಟೀಕಿಸುವುದು ಅಂದರೆ, ಪರಿಣಾಮದಲ್ಲಿ ಅದರ ಸಚಿವರನ್ನೂ ಟೀಕಿಸಿತ್ತು ಎಂದೇ ಅರ್ಥಮಾಡಿಕೊಳ್ಳಬೇಕು. ಚುನಾವಣೆಯಲ್ಲಿ ಪಕ್ಷಕ್ಕೆ ತೊಂದರೆ ಆಗಬಹುದು ಎಂಬುದನ್ನು ಹಲವರು ಆಗಲೇ ಅಂದಾಜಿಸಿದ್ದರು. ಇಲ್ಲಿ ಒಂದು ವ್ಯಂಗ್ಯವಿದೆ. ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಮನಮೋಹನ್ ಸಿಂಗ್ ಅವರು ಸರ್ಕಾರದ ನಾಯಕನಾಗಿ ಇವನ್ನೆಲ್ಲ ಮೌನವಾಗಿ ನೋಡುತ್ತ ಕುಳಿತಿದ್ದರು.

ಮುಖರ್ಜಿ ಅವರ ಬಗ್ಗೆ ಬಹುತೇಕರಿಗೆ ಬಹಳ ಗೌರವ ಇತ್ತು. ಅವರು ಮುತ್ಸದ್ದಿಯಂತಹ ವ್ಯಕ್ತಿತ್ವ ಹೊಂದಿದ್ದರು. ಸುಸಂಸ್ಕೃತರಾಗಿದ್ದರು. ಕಾಂಗ್ರೆಸ್ಸಿಗೆ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವ ವ್ಯಕ್ತಿ ಎಂಬ ಹೆಸರಿಗೆ ತಕ್ಕಂತೆ ಯಾವತ್ತೂ ನಡೆದುಕೊಂಡಿದ್ದರು. ಅವರನ್ನು ಹಣಕಾಸು ಸಚಿವ ಸ್ಥಾನದಿಂದ ಮೇಲಕ್ಕೆ ಎತ್ತುವುದು ಪಕ್ಷ ಕೈಗೊಂಡ ಮಹತ್ವದ ತೀರ್ಮಾನವಾಗಿತ್ತು. ಲಾರೆನ್ಸ್ ಪೀಟರ್ ಅವರು ಮೇಲೆ ಉಲ್ಲೇಖಿಸಿದ ಮಾತನ್ನು ಹೇಳುವ ಮೊದಲೇ, ಆ ಮಾತಿನಲ್ಲಿದ್ದ ತತ್ವವನ್ನು ಜಾರಿಗೆ ತಂದ ಪಕ್ಷ ಕಾಂಗ್ರೆಸ್. ಕೆಲವರನ್ನು ಮಂತ್ರಿ ಸ್ಥಾನದಿಂದ ಇಳಿಸಿ ಅವರನ್ನು ರಾಜ್ಯಪಾಲರನ್ನಾಗಿಸುವ ದಾರಿಯನ್ನು ಹುಡುಕಿದ್ದೇ ಕಾಂಗ್ರೆಸ್! ಮುಖರ್ಜಿ ಅವರ ವ್ಯಕ್ತಿತ್ವ ಅದೆಷ್ಟು ಹಿರಿದಾಗಿತ್ತೆಂದರೆ, ಅವರಿಗೆ ರಾಷ್ಟ್ರಪತಿ ಹುದ್ದೆಯನ್ನು ಮಾತ್ರ ನೀಡಲು ಸಾಧ್ಯವಿತ್ತು. ಅವರನ್ನು ರಾಷ್ಟ್ರಪತಿ ಭವನಕ್ಕೆ ತಳ್ಳಿ, ಕೈತೊಳೆದುಕೊಳ್ಳಲಾಯಿತು.

ಪೂರ್ವಾನ್ವಯ ತೆರಿಗೆ ವಿಚಾರದಲ್ಲಿ ಯುಪಿಎ ಸರ್ಕಾರವನ್ನು ಬಿಜೆಪಿಯು ಸರಿಯಾಗಿಯೇ ಟೀಕಿಸಿದ್ದರೂ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅದೇ ನೀತಿಯನ್ನು ಕಾಂಗ್ರೆಸ್ಸಿನಂತೆಯೇ ಮುಂದುವರಿಸಿಕೊಂಡು ಬಂದಿದ್ದು ಏಕೆ, ವೊಡಾಫೋನ್ ಮತ್ತು ಕೇನ್ ಎನರ್ಜಿ ಕಂಪನಿಗಳನ್ನು ಕಾಡಿದ್ದು ಏಕೆ ಎಂಬ ಪ್ರಶ್ನೆ ಮೂಡುತ್ತದೆ. ಚುನಾವಣೆಯ ವೇಳೆ ನೀಡಿದ್ದ ಭರವಸೆಯನ್ನು ಈಡೇರಿಸದೇ ಇದ್ದುದು ಅರ್ಥ ವ್ಯವಸ್ಥೆಯ ಬುಡಕ್ಕೇ ಕೊಡಲಿಪೆಟ್ಟು ನೀಡುತ್ತಿದೆ ಎಂಬುದು ಅರ್ಥವಾಗಲು ಈಗಿನ ಸರ್ಕಾರಕ್ಕೆ ಏಳು ವರ್ಷ ಬೇಕಾಗಿದ್ದೇಕೆ? ಅಂತರರಾಷ್ಟ್ರೀಯ ನ್ಯಾಯಮಂಡಳಿಗಳು ವೊಡಾಫೋನ್, ಕೇನ್ ಪರ ತೀರ್ಪು ನೀಡಿದವು. ಇದರಿಂದಾಗಿ ಭಾರತದ ಬಗ್ಗೆ ಕೆಟ್ಟ ಚಿತ್ರಣ ಮೂಡಿತು. ಭಾರತವು ವಿಶ್ವಾಸಾರ್ಹ ಪಾಲುದಾರ ಅಲ್ಲ, ಸುಪ್ರೀಂ ಕೋರ್ಟ್ ತೀರ್ಪನ್ನು ಅಗೌರವದಿಂದ ಕಾಣುವುದಷ್ಟೇ ಅಲ್ಲದೆ ಈ ದೇಶವು ಅಂತರರಾಷ್ಟ್ರೀಯ ದ್ವಿಪಕ್ಷೀಯ ಒಪ್ಪಂದಗಳನ್ನು ಕೂಡ ಉಪೇಕ್ಷಿಸುತ್ತದೆ ಎಂಬ ಭಾವನೆ ಮೂಡಿತು. ವಾಣಿಜ್ಯ, ವಹಿವಾಟಿನ ನೆಲೆಗಟ್ಟು ಗಟ್ಟಿಯಾಗಿರಬೇಕು ಎಂದಾದರೆ ಈ ಬಗೆಯ ಚಿತ್ರಣ ರೂಪುಗೊಳ್ಳಲು ಬಿಡಬಾರದು.

ಪೂರ್ವಾನ್ವಯ ತೆರಿಗೆ ವ್ಯವಸ್ಥೆಯು ವೈಫಲ್ಯ ಕಾಣುವುದು ಆರಂಭದಲ್ಲೇ ಖಚಿತವಾಗಿತ್ತು. ಹಠಮಾರಿತನದ ಎದುರಿನಲ್ಲಿ ವಿವೇಕಕ್ಕೆ ಹೆಚ್ಚಿನ ಮಾನ್ಯತೆಯನ್ನು ತಡವಾಗಿಯಾದರೂ ನೀಡಬಹುದು. ಪೂರ್ವಾನ್ವಯ ತೆರಿಗೆಯನ್ನು ರದ್ದುಪಡಿಸುವ ಈಗಿನ ಸರ್ಕಾರದ ತೀರ್ಮಾನವನ್ನು ಸ್ವಾಗತಿಸಬೇಕು. ಈ ಕ್ರಮವು ಮುಂದಿನ ದಿನಗಳಲ್ಲಿ ಇನ್ನಷ್ಟು ಸುಧಾರಣೆಗಳಿಗೆ ದಾರಿ ಮಾಡಿಕೊಡಲಿ.

ಆದರೆ, ಅಂತರರಾಷ್ಟ್ರೀಯ ನ್ಯಾಯಮಂಡಳಿಗಳು ನೀಡಿದ ತೀರ್ಪುಗಳನ್ನು ಒಪ್ಪಿಕೊಳ್ಳುವ ನಿಲುವನ್ನು ಕೇಂದ್ರ ಸರ್ಕಾರವು ಆರಂಭದಲ್ಲೇ ಏಕೆ ತೋರಲಿಲ್ಲ ಎಂಬುದು ಆಶ್ಚರ್ಯಕರ. ಈ ತೀರ್ಪುಗಳು ನಮ್ಮ ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿಯೇ ಇದ್ದವು. ನ್ಯಾಯಮಂಡಳಿಗಳ ತೀರ್ಪುಗಳನ್ನು ಪೂರ್ತಿಯಾಗಿ ಒಪ್ಪಿ, ಪೂರ್ವಾನ್ವಯ ತೆರಿಗೆ ಬೇಡಿಕೆಗಳನ್ನು ಹಿಂಪಡೆಯಲಾಗುತ್ತದೆ, ತೆರಿಗೆ ಪಾವತಿಸಿದ್ದರೆ ಅದನ್ನು ಬಡ್ಡಿ ಮತ್ತು ಖರ್ಚು ಸಮೇತ ಹಿಂದಿರುಗಿಸಲಾಗುತ್ತದೆ, ಅದಕ್ಕೆ ಪ್ರತಿಯಾಗಿ ಸಂಬಂಧಪಟ್ಟ ಕಂಪನಿಗಳು ನ್ಯಾಯಮಂಡಳಿಗಳಿಗೆ ಸರ್ಕಾರದ ವಿರುದ್ಧ ಸಲ್ಲಿಸಿರುವ ಅರ್ಜಿಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಹೇಳಿದ್ದರೆ ಸಾಕಿತ್ತು. ಸ್ನೇಹದಲ್ಲಿ ರಾಜಿ ಮಾಡಿಕೊಳ್ಳುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಹೆಸರು ಗಳಿಸಬಹುದಿತ್ತು. ನಾವು ಯಾರನ್ನಾದರೂ ಕೆಟ್ಟದಾಗಿ ನಡೆಸಿಕೊಂಡಾಗ, ಅವರು ನ್ಯಾಯಕ್ಕಾಗಿ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಕಾನೂನು ಹೋರಾಟ ನಡೆಸಬೇಕಾಗಿ ಬಂದಾಗ ಅವರ ವಿಚಾರದಲ್ಲಿ ವಿಶಾಲ ಹೃದಯ ತೋರುವುದು ಒಳ್ಳೆಯದು. ನ್ಯಾಯಮಂಡಳಿಗಳ ತೀರ್ಪು ಜಾರಿಗೆ ಬರುವುದನ್ನು ತಡೆಯಲು ಬೇರೆ ಬೇರೆ ಕ್ರಮಗಳ ಮೊರೆ ಹೋಗುವುದಕ್ಕಿಂತ ಉದಾರಿಗಳಾಗಿ ವರ್ತಿಸುವುದು ಉತ್ತಮ.

ಕಾನೂನಿನ ಕೈಗಳು ಹಾಗೂ ಅಧಿಕಾರಶಾಹಿಯ ಮನಸ್ಸು ಕೆಲವು ಸಂದರ್ಭಗಳಲ್ಲಿ ಸ್ವರ್ಗವನ್ನು ನರಕವಾಗಿಯೂ ನರಕವನ್ನು ಸ್ವರ್ಗವಾಗಿಯೂ ಪರಿವರ್ತಿಸಬಲ್ಲವು. ಮುಂಬರುವ ವರ್ಷಗಳಲ್ಲಿ ಮನಸ್ಸು ಬದಲಾಗುತ್ತದೆ ಎಂದು ನಾವು ನಿರೀಕ್ಷಿಸೋಣವೇ?



ಚುರುಮುರಿ



ರೋಮಾಯಣ!

● ಬಿ.ಎನ್.ಮಲ್ಲೇಶ್

'**ಗುರೂ** ನ್ಯೂಸ್ ನೋಡಿದ್ಯಾ, ಡ್ರಗ್ಸ್ ತಗಂಡಿರಾದು ಕೂದಲ ಪರೀಕ್ಷೆಯಿಂದ ಗೊತ್ತಾಗುತ್ತಂತೆ. ವಿಚಿತ್ರ ಅಲ್ವ?' ತೆಪರೇಸಿನ ಗುಡ್ಡೆ ಕೇಳಿದ.

'ವಿಚಿತ್ರ ಯಾಕೆ, ಕೂದಲು ಅಂದ್ರೆ ಏನಂತ ತಿಳ್ಕಂಡಿದಿ? ಬರೀ ಕೂದಲು ನೋಡೇ ಈ ಮನುಷ್ಯ ಹಿಂಗೆ ಅಂತ ಹೇಳಿಬಿಡಬಹುದು...' ತೆಪರೇಸಿ ತನ್ನ ಪಾಂಡಿತ್ಯ ಪ್ರದರ್ಶಿಸಿದ.

'ಹೌದಾ ಅದ್ಹೆಂಗೆ?'

'ನೋಡಿದ್ರೆ ಗೊತ್ತಾಕ್ಕತಿ, ತೆಲಿ ಮ್ಯಾಲ ಕೂದಲು ಜಾಸ್ತಿ ಇದ್ರೆ ಒಂದರ್ಥ, ಬೋಳು ತೆಲಿ ಇದ್ರೆ ಇನ್ನೊಂದರ್ಥ. ಮೂಗಿನ ಕೆಳಗೆ ಮೀಸಿ ಬರದೇ ಇದ್ರೆ ಮತ್ತೊಂದರ್ಥ. ಹೆಣಮಕ್ಕಳಿಗೆ ಉದ್ದ ಕೂದಲಿದ್ರೆ ತಾಳ್ಮೆ ಹೆಚ್ಚು ಅಂತ ಅರ್ಥ...'

'ಅಲೆ ಇವ್ನ, ಹಂಗೆಲ್ಲ ಇರ್ತಾವೇನಲೆ...'

'ಮತ್ತೆ ಏನಂತ ತಿಳಿದಿ? ಊಟದಾಗೆ ಕೂದಲು ಸಿಕ್ರೆ ಅವತ್ತಿನ ಅಡುಗಿ ಮಾಡಿದ್ಯಾರು, ಅವರ ವಯಸ್ಸೆಷ್ಟು ಎಲ್ಲ ಹೇಳಿಬಿಡಬಹುದು...'

'ಅದು ಗೊತ್ತು, ಆದ್ರೆ ಕೂದಲಿನಾಗೆ ಡ್ರಗ್ಸ್ ಹೆಂಗೆ ಗೊತ್ತಾಕ್ಕತಿ ಅಂತ... ಡ್ರಗ್ಸ್ ತಗಂಡಿರೋರ ಕೂದಲು ತೇಲಾಡ್ತಿರ್ತಾವೇನು?'

'ಇಲ್ಲ, ವಾಲಾಡ್ತಿರ್ತಾವು. ನಿನ್ನ ಕಣ್ಣು ನೋಡಿದ್ರೆ ನೀ ಎಷ್ಟ್ ಕುಡಿದಿದಿ ಅಂತ ಗೊತ್ತಾಗಲ್ಲೇನು, ಹಂಗೇ ಇದು...'

'ನನ್ ಬುಡಕ್ಕೇ ಬಂದ್ಯಲ್ಲಲೆ... ಹೋಗ್ಲಿ ಬಿಡಪ್ಪ, ಕೂದಲ ಬಗ್ಗೆ ಮತ್ತೆ ಏನೇನ್ ತಿಳ್ಕಂಡಿದಿ?'

'ಈ ದೇಶದ ಎಕಾನಮಿ ನಡೀತಿರೋದೇ ಕೂದಲ ಮ್ಯಾಲೆ. ಸೋಪು, ಶಾಂಪು, ಹೇರಾಯಿಲ್ಲು ಎಲ್ಲ ಕೋಟಿ ಕೋಟಿ ಬಿಸಿನೆಸ್ಸು. ಕೂದಲಿದ್ರೆ ಅಷ್ಟೇ ಅಲ್ಲ, ಬೋಳಿಸಿದ್ರೂ ಕೋಟಿಗಟ್ಲೆ ದುಡ್ಡು...'

'ಬೋಳಿಸಿದ್ರಾ? ಅದ್ಹೆಂಗೆ?'

'ದೇವರಿಗೆ ಮುಡಿಕೊಟ್ಟ ಕೂದಲು ತಿರುಪತೀಲಿ ಕೋಟಿಗಟ್ಲೆ ದುಡ್ಡಿಗೆ ಹರಾಜಾಗ್ತತಿ ಗೊತ್ತಿಲ್ಲೇನು?'

'ಹೌದಲ್ಲಲೆ, ನಾನು ಈ ಜುಜುಬಿ ಕೂದಲು ಯಾವನ್ ತಗಂತಾನೆ ಅನ್ಕಂಡಿದ್ದೆ. ನೀನ್ಯಾಕೆ ಈ ಕೂದಲಿನ ಮ್ಯಾಲೆ ಒಂದು ಡಾಕ್ಟರೇಟ್ ಮಾಡಬಾರ್ದು?' ಗುಡ್ಡೆ ನಕ್ಕ.

'ಯಾಕೆ? ಆಮೇಲೆ ನೀವೆಲ್ಲ ನನ್ನ 'ಕೂದಲಿನ ಡಾಕ್ಟ್ರು' ಅಂತ ತಮಾಷೆ ಮಾಡೋಕಾ?' ತೆಪರೇಸಿಗೂ ನಗು ಬಂತು.

ಸಂಗತ

'ಗ್ರಾಮ ವಾಸ್ತವ್ಯ': ಆರಂಭವಾಗಲಿ ಅಭಿಯಾನ

ವೃತ್ತಿಪರ ತರಬೇತಿ ಪಡೆದವರು ಹಳ್ಳಿಗಳಲ್ಲೇ ಉಳಿಯುವಂತಾದರೆ ಹಳ್ಳಿಗರ ಬವಣೆಯೂ ನೀಗುತ್ತದೆ, ನಗರಗಳಿಗೆ ವಲಸೆಯೂ ತಪ್ಪುತ್ತದೆ

● ಡಾ. ನಿರಂಜನ ವಾನಳ್ಳಿ

ಹಳ್ಳಿಗಳಿಗೆ ಮೂಲಸೌಕರ್ಯ ಒದಗಿಸಿಕೊಡಲು ಸರ್ಕಾರ ಸರ್ವರೀತಿಯಲ್ಲೂ ಪ್ರಯತ್ನಿಸು-ತ್ತಿದ್ದರೂ ಯಾಕೆ ಹಳ್ಳಿಗಳ ಜನ ನಗರಗಳಿಗೆ ವಲಸೆ ಹೋಗುತ್ತಾರೆ ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನವೊಂದು ಈಚೆಗೆ ದೊರೆಯಿತು.


ಹಿಂದಿನ ತಿಂಗಳು ಅವ್ಯಾಹತ ಮಳೆ ಸುರಿಯುತ್ತಿದ್ದ ಕಾಲದಲ್ಲೇ, ಮಲೆನಾಡಿನ ಮೂಲೆಯಲ್ಲಿರುವ ನಮ್ಮೂರಿಗೆ ಹೆಂಡತಿ, ಮಗಳ ಸಮೇತ ಹೋಗಿದ್ದೆ. ನಾವು ಹೋದ ದಿನವೇ ಸಂಜೆ ನಿರಂತರ ಜಡಿ ಮಳೆ ಹೊಡೆಯತೊಡಗಿತು. ಫಕ್ಕನೆ ಕರೆಂಟು ಹೋಯ್ತು. ಈ ಮಳೆಯಲ್ಲಿ ಇನ್ನು ಕರೆಂಟು ಬರುವುದು ಎಷ್ಟು ದಿನಕ್ಕೋ ಎಂದು ಆಯಿ ಸೂಚನೆ ನೀಡಿದಳು. ಸೌರ ವಿದ್ಯುತ್ ಇರುವುದರಿಂದ ಒಂದು ದಿನ ಪರವಾಗಿಲ್ಲ ಎಂದುಕೊಂಡೆವು. ಆದರೆ ಸೂರ್ಯನ ದರ್ಶನವೇ ಇಲ್ಲದ ಕಾರಣ ಸೌರಶಕ್ತಿಯೂ ಸೋಲುತ್ತಾ ಬಂತು. ಹೀಗಾಗಿ ಮೊದಲ ರಾತ್ರಿ ಕರೆಂಟು ಇರಲಿಲ್ಲವಾದರೂ ನಮ್ಮ ಫೋನುಗಳು ಕೆಲಸ ಮಾಡುತ್ತಿದ್ದವು. ಎರಡನೆಯ ದಿನ ನಮ್ಮ ಫೋನುಗಳಿಗೂ ಚಾರ್ಜ್ ಇಲ್ಲದ ಪರಿಸ್ಥಿತಿ ಬಂತು.

ಬಾವಿಗೆ ಪಂಪು ಇದೆ, ಆದರೆ ಕರೆಂಟು ಇಲ್ಲದೇ ಅದು ನಿಷ್ಪ್ರಯೋಜಕವಾಗಿತ್ತು. ಹಗ್ಗ ಇಳಿಸಿ ಬಾವಿಯಿಂದ ನೀರು ಎತ್ತಬೇಕಾಗಿ ಬಂತು. ಮೊದಲ ದಿನ ಬಾವಿಯಿಂದ ನೀರೆತ್ತುವಾಗ ನಮಗೆ ಖುಷಿಯಿತ್ತು. ಎರಡು ದಿನಗಳಾದರೂ ಕರೆಂಟು ಬಾರದೇ ಅಡುಗೆಗೆ, ಸ್ನಾನಕ್ಕೆ, ಶೌಚಕ್ಕೆ ಎಲ್ಲದಕ್ಕೂ ಬಾವಿಯಿಂದ ನೀರು ಎತ್ತಬೇಕಾಗಿ ಬಂದಾಗ ನಮಗೆ ಸಾಕು ಬೇಕಾಯ್ತು. ವಯಸ್ಸಾದ ಇಬ್ಬರೇ ಇಂಥ ದಿನಗಳಲ್ಲಿ ನೀರು ಸೇದಿಕೊಳ್ಳುವುದು ಎಷ್ಟು ಕಷ್ಟ ಎಂಬ ಸತ್ಯ ಅರಿವಾಗತೊಡಗಿತು.

ಮನೆಗೆ ಬಂದಾಗಲೇ ಗಮನಿಸಿದ್ದೆ. ಸ್ನಾನದ ಮನೆಯಲ್ಲಿ ಲೈಟು ಉರಿಯುತ್ತಿರಲಿಲ್ಲ. ಆಯಿ ಹೇಳಿದಳು: 'ಎರಡು ತಿಂಗಳಿನಿಂದ ಕರೆಂಟು ರಿಪೇರಿಯವನಿಗೆ ಹೇಳಿದರೂ ಬಂದು ರಿಪೇರಿ ಮಾಡಿಲ್ಲ. ಅದು ಬರೀ ಬಲ್ಬು ಹೋಗಿರುವುದಲ್ಲ. ಸ್ವಿಚ್ ಬೋರ್ಡಿನಲ್ಲೇ ಏನೋ ತೊಂದರೆಯಿದೆ. ಆದರೆ ರಿಪೇರಿ ಮಾಡಿಕೊಡುವವರು ಯಾರೂ ಇಲ್ಲ. ಹಾಗೆಯೇ ಮನೆಯ ಒಂದು ಕಡೆಯ ಫೈಬರ್ ಬಾಗಿಲು ಮುರಿದು ಹೋಗಿದೆ. ಹೊಸತು ತಂದಿಟ್ಟು ಮೂರು ತಿಂಗಳಾಯಿತು. ಆ ಬಾಗಿಲನ್ನು ಫಿಕ್ಸ್ ಮಾಡಿಕೊಡಲು ಆಚಾರಿ ಬೇಕು. ನಾವು ಮುದುಕರ ಹತ್ತಿರ ಆಗದು. ಆದರೆ ಎಷ್ಟು ಹೇಳಿಕಳಿಸಿದರೂ ಆಚಾರಿ ಬರುತ್ತಿಲ್ಲ. ಹಳ್ಳಿಗಳಲ್ಲಿ ಸಣ್ಣ ಪುಟ್ಟ ಅಗತ್ಯ ಕೆಲಸಗಳನ್ನು ಮಾಡಿಕೊಡುವವರು ಯಾರೂ ಇರುವುದಿಲ್ಲ. ಅದೊಂದಕ್ಕಾಗಿ ಪೇಟೆಗೆ ಹೋಗಲಾಗದು. ಹೀಗಾಗಿ ಹಳ್ಳಿಯ ಬದುಕು ಯಾರಿಗೂ ಬೇಡ'.

ನಮ್ಮಲ್ಲಿ ವಿದ್ಯುತ್ ರಿಪೇರಿ, ಕುಶಲ ಕೆಲಸಗಳು, ಮೋಟರ್ ರಿಪೇರಿ, ವಾಹನ ರಿಪೇರಿಗಳನ್ನು ಕಲಿಸುವ ಕೈಗಾರಿಕಾ ತರಬೇತಿ ಸಂಸ್ಥೆಗಳು, ಪಾಲಿಟೆಕ್ನಿಕ್‌ಗಳು ಅನೇಕವಿವೆ. ಅಲ್ಲಿಗೆ ಬಂದು ಸೇರಿಕೊಳ್ಳುವ ವಿದ್ಯಾರ್ಥಿಗಳು ಕೂಡಾ ಬಹುತೇಕ ಹಳ್ಳಿಯವರೇ ಆಗಿರುತ್ತಾರೆ. ಆದರೆ ಅವರು ತರಬೇತಿಯ ನಂತರ ನಗರಗಳಲ್ಲೇ ಕೆಲಸ ಹುಡುಕಿಕೊಂಡು ನಗರವಾಸಿಗಳಾಗುವುದು, ಹಳ್ಳಿಗೆ ಹಿಂದಿರುಗದಿರುವುದು ಸಮಸ್ಯೆಯ ಮೂಲ.

ನಗರಗಳಲ್ಲೇ ನೌಕರಿಗೆ ಸೇರುವ ಬದಲು ಅವರು ಹಳ್ಳಿಗೆ ಹಿಂತಿರುಗಿ ಸ್ವಂತವಾಗಿ ಸೇವೆ ಆರಂಭಿಸಿದರೆ ಇಂದು ಪ್ರತೀ ಹಳ್ಳಿಯಲ್ಲೂ ಬದುಕಲು ಅವಕಾಶವಿದೆ. ಈಗಂತೂ ಕೊರೊನಾ ಸಮಯದಲ್ಲಿ ಈ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ.



ನಗರಗಳಲ್ಲಿದ್ದ ಅನೇಕ ಐ.ಟಿ., ಬಿ.ಟಿ.ಯವರು ಮನೆಯಿಂದಲೇ ಕೆಲಸ ಮಾಡುವ ಉಮೇದಿನಲ್ಲಿ ಊರುಗಳಿಗೆ ಹಿಂತಿರುಗಿದ್ದಾರೆ. ಅವರಿಗೆ ಮೊಬೈಲು ರಿಪೇರಿಯಿಂದ ಹಿಡಿದು, ವಿದ್ಯುತ್ತು, ಟಿ.ವಿ, ಫ್ಯಾನು ಮುಂತಾಗಿ ಏನೇ ತೊಂದರೆಯಾದರೂ ರಿಪೇರಿಗೆ ಜನ ಬೇಕಾಗುತ್ತದೆ. ಅವರು ಸಾಕಪ್ಪಾ ಹಳ್ಳಿಯ ಸಹವಾಸ ಅಂತ ಮತ್ತೆ ನಗರಗಳಿಗೆ ಮರಳುವ ಮುನ್ನ ಒಂದಷ್ಟು ಜನ ಕುಶಲಕರ್ಮಿಗಳು ಹಳ್ಳಿಗಳಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಬದುಕನ್ನು ರೂಪಿಸಿ-ಕೊಳ್ಳಬೇಕಿದೆ.

ನಗರಗಳಲ್ಲಾದರೆ ದುಡ್ಡು ಕೊಟ್ಟರೆ ನಡುರಾತ್ರಿಯಲ್ಲೂ ನಾಗರಿಕ ಸೇವೆ ಒದಗುತ್ತದೆ. ಹಳ್ಳಿಗಳಲ್ಲಿ ಆ ಪರಿಸ್ಥಿತಿ ಇಲ್ಲ. ದುಡ್ಡು ತೆರಲು ಸಿದ್ಧವಿದ್ದರೂ ಕೆಲಸ ಮಾಡಿಕೊಡುವವರು ಇಲ್ಲ. ಇರುವ ಒಬ್ಬರೋ ಇಬ್ಬರೋ ರಿಪೇರಿಯವರ ಮೇಲೆ ವಿಪರೀತ ಹೊರೆ. ಹೀಗಾಗಿ ತಿಂಗಳುಗಳು ಕಳೆದರೂ ಒಂದು ಸ್ವಿಚ್ಚು ರಿಪೇರಿ ಮಾಡುವವರು ಸಿಕ್ಕದೇ ಪರಿತಪಿಸಬೇಕಾಗುತ್ತದೆ.

ವಿದ್ಯುತ್ತು, ವಾಹನ ರಿಪೇರಿಯವರು, ಮೊಬೈಲೂ ಸೇರಿ ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮಾಡುವವರು ಪಾರಂಪರಿಕ ಕುಶಲಕರ್ಮಿಗಳನ್ನು ಹಳ್ಳಿಗಳಲ್ಲಿ ನೆಲೆಗೊಳಿಸಲು ಸರ್ಕಾರ ಯೋಜನೆಯನ್ನು ಹಾಕಿಕೊಳ್ಳಬೇಕು. ಹಾಗೆ ನೆಲೆಗೊಳ್ಳುವವರಿಗೆ ಸಾಲ ಸೌಲಭ್ಯಗಳನ್ನೂ ಸುಲಭ ರಹದಾರಿಗಳನ್ನೂ ಒದಗಿಸಿಕೊಡಬೇಕು. ಆಗಮಾತ್ರ ಜನ ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುವುದನ್ನು ತಪ್ಪಿಸಲು ಸಾಧ್ಯವಾದೀತು. ಇಲ್ಲವಾದರೆ ಯಾವುದೇ ವಿದ್ಯೆ ಕಲಿಯುವುದೂ ನಗರ ಸೇರಲಿಕ್ಕೆ ಎಂಬ ಪರಿಸ್ಥಿತಿ ಬರುತ್ತದೆ. ಹಳ್ಳಿಗಳು ಖಾಲಿಯಾಗುತ್ತವೆ. ನಗರಗಳ ಕೊಳೆಗೇರಿಗಳು ಬೆಳೆಯುತ್ತವೆ.

ಹಳ್ಳಿಗಳಲ್ಲಿ ಬದುಕುವ ಸ್ಥಿತಿಯನ್ನು ಸಹನೀಯಗೊಳಿಸುವುದು ಸರ್ಕಾರಗಳ ಮೊದಲ ಆದ್ಯತೆಯಾಗಬೇಕು.

ವಾಚಕರ ವಾಣಿ

ನ್ಯಾಯಾಂಗ ವ್ಯವಸ್ಥೆಗೆ ಅಮೋಘ ಕೊಡುಗೆ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ದಿವಂಗತ ಇ.ಎಸ್.ವೆಂಕಟರಾಮಯ್ಯ ಅವರ ಪುತ್ರಿ ನಾಗರತ್ನ ಅವರು ಪ್ರಸ್ತುತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಆಯ್ಕೆಯಾಗಿರುವುದರಿಂದ, ಶ್ರೀಯುತರ ತವರಾದ ಪಾಂಡವಪುರ ತಾಲ್ಲೂಕಿಗೆ ಹೆಮ್ಮೆಯ ಗರಿ ಮೂಡಿದಂತಾಗಿದೆ. ಅಷ್ಟೇ ಅಲ್ಲದೆ, ನ್ಯಾ.ವೆಂಕಟರಾಮಯ್ಯ ಅವರ ಸಹೋದರನ ಪುತ್ರ ಇಂದ್ರೇಶ್ ಅವರು ಹೈಕೋರ್ಟ್ ನ್ಯಾಯಮೂರ್ತಿಯಾಗಿರುವುದು ಮತ್ತೊಂದು ವಿಶೇಷ.

ಇದಲ್ಲದೆ ತಾಲ್ಲೂಕಿನ ದಿವಂಗತ ದೊಡ್ಡಕಾಳೇಗೌಡರು ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದರು. ತಮಿಳುನಾಡು ಹೈಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ನ್ಯಾಯಮೂರ್ತಿ ಸಿ.ಶಿವಪ್ಪ ಅವರು ಪಾಂಡವಪುರದಲ್ಲೇ ವಾಸಿಸುತ್ತಿರುವುದು, ಸಣ್ಣ ತಾಲ್ಲೂಕೊಂದು ದೇಶದ ನ್ಯಾಯಾಂಗ ವ್ಯವಸ್ಥೆಗೆ ನೀಡಿದ ಅಮೋಘ ಕೊಡುಗೆಯೆನಿಸಿದೆ. ಈ ಸಂಗತಿ ನಮ್ಮ ಗ್ರಾಮೀಣ ಪರಿಸರದ ಯುವಕರಿಗೆ ಮಾದರಿ ಹಾಗೂ ಮಾರ್ಗ-ದರ್ಶನವಾಗಲಿ.

ಜೆ.ಬಿ.ಮಂಜುನಾಥ, ಪಾಂಡವಪುರ

ಮಳೆ ಜ್ಞಾನದ ಶೂನ್ಯತೆ ಹೋಗಲಿ

ಮಳೆ ಮುನ್ಸೂಚನೆಯಲ್ಲಿ ನಿಖರತೆ ಇಲ್ಲದೆ ಕೃಷಿ ಬೆಳೆ ನಾಶವಾಗುತ್ತಿರುವುದನ್ನು ಡಾ. ಎಚ್.ಆರ್.ಕೃಷ್ಣಮೂರ್ತಿ ವಿವರಿಸಿದ್ದಾರೆ (ಪ್ರ.ವಾ., ಆ. 26). ಕರ್ನಾಟಕದಲ್ಲಿ ಶೇ 70ರಷ್ಟು ಕೃಷಿ ಪ್ರದೇಶ ಮಳೆಯನ್ನೇ ಅವಲಂಬಿಸಿದೆ. ಮಳೆ ವಿಜ್ಞಾನ ಕಳೆದ 100 ವರ್ಷಗಳಿಂದಲೂ ನಿಖರತೆ ಇಲ್ಲದೆ ಕೃಷಿಗೆ ಹೊಡೆತ ನೀಡಿದೆ. ಮಳೆ ಪ್ರಮಾಣ, ಮಳೆ ಬಜೆಟ್ ಬಗ್ಗೆ ರೈತರು, ವಿದ್ಯಾರ್ಥಿಗಳು, ಆಡಳಿತಗಾರರಿಗೆ ಸರಿಯಾದ ಜ್ಞಾನ ಇಲ್ಲ.

ಕೆಲವೆಡೆ ಮಳೆಯು ಬೆಳೆ ಇಲ್ಲದ ಸಮಯದಲ್ಲಿ ಬಿದ್ದು ನಷ್ಟವಾಗುತ್ತದೆ, ಹರಿದು ಹೋಗಿ ನಷ್ಟವಾಗುತ್ತದೆ ಹಾಗೂ ಆವಿಯಾಗಿ ನಷ್ಟವಾಗುತ್ತದೆ. ಅದುಬಿಟ್ಟರೆ ಉಳಿಯುವ ಸ್ವಲ್ಪವೇ ಮಳೆ ನೀರಿನಿಂದ ಬೆಳೆ ಉತ್ಪಾದನೆ ಕುಂಠಿತವಾಗುತ್ತದೆ. ವಾರ್ಷಿಕ ಬೆಳೆಗಳಾದ ರಾಗಿ, ಜೋಳ, ನೆಲಗಡಲೆಯು ಮಳೆ ಜ್ಞಾನ ಇಲ್ಲದೆ ನಾಶವಾಗುತ್ತವೆ. ಆದರೆ ಮರಗಳಾದ ಮಾವು, ನೇರಳೆ, ಹಲಸು, ಹುಣಸೆ ಮಳೆ ನಿಖರತೆ ಇಲ್ಲದೆ ಇದ್ದರೂ ನಾಶವಾಗದೆ ರೈತರನ್ನು ಕಾಪಾಡುತ್ತವೆ. ಮನೆ ಮೇಲೆ ಬಿದ್ದ ಮಳೆ ನೀರು ಮನೆಯಲ್ಲಿ, ಹೊಲದ ನೀರು ಹೊಲದಲ್ಲಿ, ಹಳ್ಳಿ ನೀರನ್ನು ಹಳ್ಳಿಯಲ್ಲಿ ಸಂಗ್ರಹಿಸಿ, ಸಂರಕ್ಷಿಸಿ ಜಾಣ್ಮೆಯಿಂದ ಬಳಸುವುದರಿಂದ ಮಳೆ ಜ್ಞಾನದ ಶೂನ್ಯತೆ ಹೋಗಲಾಡಿಸಬಹುದು.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ದಾಖಲೆ ನಕಲು ಪಡೆಯುವ ಸಲ್ಲದ ಸಾಹಸ

ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರು ಹಿಂದೊಮ್ಮೆ ತಮ್ಮ ಜಮೀನಿನ ಕಾಫಿಗೆ ಕಂದಾಯ ನಿಗದಿ ಮಾಡುವಂತೆ ಮೂಡಿಗೆರೆ ತಹಶೀಲ್ದಾರ್ ಅವರಿಗೆ ಅರ್ಜಿ ನೀಡಿದಾಗ, ಅರ್ಜಿಗೆ ಪೂರಕವಾಗಿ ಮ್ಯುಟೇಶನ್, ಪಹಣಿ, ಆಕಾರ್ ಬಂದ್ ಸಲ್ಲಿಸುವಂತೆ ಅವರು ತೇಜಸ್ವಿಯವರಿಗೆ ಹಿಂಬರಹ ನೀಡಿದ್ದರು. ಆಗ ತೇಜಸ್ವಿಯವರು 'ತಹಶೀಲ್ದಾರ್ ಅವರೆ, ಮ್ಯುಟೇಶನ್, ಪಹಣಿ, ಆಕಾರ್ ಬಂದ್ ಎಲ್ಲ ಎಲ್ಲಿ ಸಿಗುತ್ತವೆ' ಎಂದು ಪ್ರಶ್ನಿಸಿದರು. ತಹಶೀಲ್ದಾರ್ ಅವರು 'ನಮ್ಮ ಕಚೇರಿಯಲ್ಲಿಯೇ' ಎಂದರು. 'ಎಲ್ಲ ದಾಖಲೆಗಳೂ ನಿಮ್ಮ ಕಚೇರಿಯಲ್ಲಿಯೇ ಸಿಗುವುದರಿಂದ ನಾವೇಕೆ ದಾಖಲೆಗಳನ್ನು ಲಗತ್ತಿಸಬೇಕು? ನೀವೇ ಅವುಗಳನ್ನು ಪಡೆದು ಕೆಲಸ ಮಾಡಿ ಹಾಗೂ ಈ ವಿಚಾರವಾಗಿ ಅನಗತ್ಯವಾಗಿ ಪತ್ರ ವ್ಯವಹಾರ ಮಾಡಬೇಡಿ' ಎಂದು ಎಚ್ಚರಿಸಿದ್ದರು.

ತೇಜಸ್ವಿಯವರ ಅಂದಿನ ಆಲೋಚನೆ ಸರಿಯಾಗಿಯೇ ಇದೆ. ಇಂದು ಒಂದು ಸಣ್ಣ ಕೆಲಸಕ್ಕೂ ಅರ್ಜಿಯ ಜೊತೆ ನಾನಾ ದಾಖಲೆಗಳನ್ನು ಲಗತ್ತಿಸಬೇಕಾಗಿದೆ, ಅಗತ್ಯವಿಲ್ಲದೆಯೂ! ಅವರು ಕೋರುವ ದಾಖಲೆಗಳು ತಾಲ್ಲೂಕು ಕಚೇರಿಯ ಅಭಿಲೇಖಾಲಯ, ಭೂಮಿ ಕೇಂದ್ರಗಳಲ್ಲಿಯೇ ಲಭ್ಯವಿರುವುದರಿಂದ, ಅರ್ಜಿಗೆ ಪೂರಕವಾಗಿರುವ ಎಲ್ಲ ದಾಖಲೆಗಳ ನಕಲುಗಳನ್ನು ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಅಲ್ಲಿಂದ ಪಡೆದು ಕೆಲಸ ಮಾಡಬಹುದಲ್ಲವೇ? ರೈತರು ಯಾವುದಾದರೊಂದು ಕೆಲಸಕ್ಕೆ ಅರ್ಜಿ ಸಲ್ಲಿಸಲು ದಾಖಲೆಗಳ ನಕಲು ಪಡೆಯುವುದೇ ದೊಡ್ಡ ಕೆಲಸವಾಗಿದೆ. ಕಂದಾಯ ಇಲಾಖೆ ಇತ್ತ ಗಮನಹರಿಸಿ, ತೇಜಸ್ವಿಯವರ ಆಲೋಚನೆಯನ್ನು ಅನುಷ್ಠಾನ ಮಾಡಿದರೆ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಸಂಸ್ಕೃತಕ್ಕೆ ಅನ್ಯ ಭಾಷೆ ಪ್ರತಿಸ್ಪರ್ಧಿಯಲ್ಲ

ಸಂಸ್ಕೃತ ಭಾಷೆಯ ವಾಸ್ತವಾಂಶಗಳನ್ನು ಎತ್ತಿ ತೋರಿಸುವ ಭರದಲ್ಲಿ ಡಾ. ಆರ್.ಲಕ್ಷ್ಮೀನಾರಾಯಣ ಅವರು ಕೆಲವು ಬೀಸು ಹೇಳಿಕೆ ನೀಡಿದ್ದಾರೆ (ಪ್ರ.ವಾ., ಆ. 27). ಸಂಸ್ಕೃತವನ್ನು ಮತ್ತೆ ಜನಬಳಕೆಗೆ ತರಲು 'ಬೆಟ್ಟಕ್ಕೆ ಕಲ್ಲು ಹೊರುವ ವ್ಯರ್ಥ ಸಾಹಸ'ವನ್ನು ಅಸಂಖ್ಯಾತ ಭಾಷಾಪ್ರೇಮಿಗಳು ಮಾಡುತ್ತಿದ್ದಾರೆ. ಅದು ಯಶಸ್ವಿ ಸಾಹಸ ಅನಿಸಿಕೊಂಡಿದೆ. 'ಗಿಳಿಪಾಠ'ದಂತೆ ಲೇಖಕರಿಗೆ ಕೇಳಿಸಿದ ವ್ಯಾವಹಾರಿಕ ಸಂಸ್ಕೃತದ ಕಲಿಕೆಯು ಜನರನ್ನು ಭಾಷೆಯ ಆಳವಾದ ಅಧ್ಯಯನದತ್ತ ಪ್ರೇರೇಪಿಸುತ್ತಿದೆ. ಸಂಸ್ಕೃತದ ವ್ಯಾಕರಣವನ್ನು ಅಭ್ಯಾಸ ಮಾಡಿದರೆ, ಕಾಲಕಾಲಕ್ಕೆ ನಡೆದ ಭಾಷಾ ಬದಲಾವಣೆಗಳನ್ನು ಹೇಗೆ ದಾಖಲಿಸಲಾಗಿದೆ ಎಂಬ ಅರಿವು ದೊರೆಯುತ್ತದೆ.

ಸಂಸ್ಕೃತವು ಸಾವಿರಾರು ಭಾಷೆಗಳ ಮುಖಾಂತರ ನಿಸ್ಸಂಶಯವಾಗಿ ಜನಬಳಕೆಯಲ್ಲಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಕನ್ನಡ ಅಥವಾ ಅನ್ಯ ಭಾಷೆಗಳು ಸಂಸ್ಕೃತದ ಪ್ರತಿಸ್ಪರ್ಧಿಗಳಲ್ಲ, ಎಲ್ಲವೂ ಒಂದಕ್ಕೊಂದು ಪೂರಕವಾಗಿವೆ. ಭಾಷಾ ಕಲಿಕೆಯ ಉತ್ಸಾಹಕ್ಕೆ ಭಾಷೆ- ದೇಶ- ಪ್ರದೇಶದ ಬೇಲಿಗಳನ್ನು ಹಾಕುವುದು ಸರ್ವಥಾ ತಪ್ಪು. ಶಾಲೆ ಕಾಲೇಜುಗಳಲ್ಲಿ ಸಂಸ್ಕೃತವನ್ನು ನಿರರ್ಗಳವಾಗಿ ಮಾತನಾಡಲು ಕಲಿಸುತ್ತಿರುವ ಸಾವಿರಾರು ಶಿಕ್ಷಕರ ಉದಾಹ-ರಣೆಗಳಿವೆ. ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಸಂಸ್ಕೃತದಲ್ಲಿ ಮಾತನಾಡುತ್ತಿದ್ದಾರೆ, ಕಲಿಯುತ್ತಿದ್ದಾರೆ ಎಂದು ಆತ್ಮವಿಶ್ವಾಸದಿಂದ ಮತ್ತು ನನ್ನ ಅನುಭವದ ಆಧಾರದಿಂದ ಹೇಳಬಲ್ಲೆ. ನೂತನ ಶಿಕ್ಷಣ ನೀತಿ ಏಕಕಾಲಕ್ಕೆ ಎರಡು ಪದವಿಗಳನ್ನು ಕಲಿಯಲು ಅವಕಾಶ ಮಾಡಿಕೊಟ್ಟಿದೆ. ನನ್ನ ಒಬ್ಬ ವಿದ್ಯಾರ್ಥಿನಿ ಐಐಟಿ ಚೆನ್ನೈಯಲ್ಲಿ ಕಂಪ್ಯೂಟರ್ ಪದವಿಯ ಜೊತೆಗೆ ಚಿನ್ಮಯ ಯೂನಿವರ್ಸಿಟಿಯಲ್ಲಿ ಸಂಸ್ಕೃತದ ಪದವಿಯನ್ನೂ ಅಭ್ಯಾಸ ಮಾಡುತ್ತಿದ್ದಾಳೆ. ಸಂಸ್ಕೃತದ ಲಾಭಗಳ ಬಗ್ಗೆ ಅತಿರಂಜಿತ ಹೇಳಿಕೆಗಳು ತಪ್ಪು.

ವೇದಾ ಆಠವಳೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಾತಿಗಳ ಆರ್ಥಿಕ ಪ್ರಗತಿಯ ಗಣತಿ ಏಕೆ ಅಗತ್ಯ?

ಜಾತಿ ವಿನಾಶದ ಮೊದಲ ಹೆಜ್ಜೆ ಜಾತಿಗಣತಿ



• ಸಿದ್ದರಾಮಯ್ಯ

ಜಾತಿ ಗಣತಿಯ ಬೇಡಿಕೆಯನ್ನು ಸಂಕುಚಿತ ಅರ್ಥದಿಂದ ನೋಡಬೇಕಾಗಿಲ್ಲ. ಇದು ಕೇವಲ ತಲೆಎಣಿಕೆ ಮೂಲಕ ಜಾತಿ ಸಂಖ್ಯೆಯನ್ನು ಗುರುತಿಸಲು ಮಾಡುವ ಸಮೀಕ್ಷೆ ಅಲ್ಲ. ಇದು ಎಲ್ಲ ಜಾತಿ-ಧರ್ಮಗಳ ಜನತೆಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಸಮಗ್ರರೂಪದ ಸಮೀಕ್ಷೆ. ಕರ್ನಾಟಕದಲ್ಲಿ ಇದನ್ನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನಡೆಸಿದೆ ಎನ್ನುವ ಕಾರಣಕ್ಕೆ ಇದನ್ನು ಕೇವಲ ಹಿಂದುಳಿದ ಜಾತಿಗಳಿಗೆ ಸೀಮಿತಗೊಳಿಸಿ ವಿಶ್ಲೇಷಿಸುವುದು ತಪ್ಪು.

ನಮ್ಮದು ಜಾತಿಗ್ರಸ್ತ ಸಮಾಜ. ಇಲ್ಲಿನ ಪ್ರತಿಯೊಂದು ಜಾತಿಗೆ ಸಾಮಾಜಿಕವಾಗಿ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತ್ಯೇಕ ಗುರುತುಗಳಿವೆ. ಇವರ ಸಮಸ್ಯೆಗಳು ಮತ್ತು ಪರಿಹಾರಗಳೂ ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಇಡೀ ಜನಸಮುದಾಯಕ್ಕೆ ಅನ್ವಯವಾಗುವ ಏಕರೂಪದ ಸಾಮೂಹಿಕ ಯೋಜನೆಯನ್ನು ರೂಪಿಸಲಾಗುವುದಿಲ್ಲ.

ಪ್ರತಿಯೊಂದು ಜಾತಿ-ಧರ್ಮದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಯ ಸಮೀಕ್ಷೆ ನಡೆಸಿ ಹಿಂದುಳಿದಿರುವಿಕೆಯನ್ನು ಗುರುತಿಸಿದರೆ ಅದರ ಆಧಾರದಲ್ಲಿ ವೈಜ್ಞಾನಿಕವಾಗಿ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಈ ಮೂಲಕ ಸಾಧಿಸುವ ಆರ್ಥಿಕ ಸ್ವಾವಲಂಬನೆಯು ಜಾತಿ ವಿನಾಶದ ಪ್ರಯತ್ನದ ಮೊದಲ ಹೆಜ್ಜೆಯಾಗುತ್ತದೆ. ಇದು ಜಾತಿಗಣತಿಯ ಮೂಲ ಉದ್ದೇಶ.

ಜಾತಿ ಗಣತಿಯ ಬೇಡಿಕೆ ಇಂದು ನಿನ್ನೆಯದಲ್ಲ. ಮಂಡಲ್ ಆಯೋಗದ ವರದಿಯನ್ನು ಸಲ್ಲಿಸುವಾಗಲೇ ಆಯೋಗದ ಅಧ್ಯಕ್ಷರಾಗಿದ್ದ ಬಿ.ಪಿ. ಮಂಡಲ್ ಅವರು ಜಾತಿ ಗಣತಿ ನಡೆಸಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು.

ಮೀಸಲಾತಿಯನ್ನು ಪ್ರಶ್ನಿಸಲಾದ ಪ್ರಕರಣ ಪ್ರತಿಬಾರಿ ವಿಚಾರಣೆಗೆ ಬಂದಾಗಲೂ ಮೀಸಲಾತಿಯನ್ನು ನಿರ್ಧರಿಸಲು ಬೇಕಾದ ಜಾತಿ ಕುರಿತ ಅಂಕಿ-ಅಂಶ ಎಲ್ಲಿದೆ ಎಂಬ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್ ಕೇಳಿದೆ.

ಸ್ವತಂತ್ರ ಭಾರತದಲ್ಲಿ ಜಾತಿ ಆಧಾರಿತ ಜನಗಣತಿ ನಡೆದದ್ದು 1931ರಲ್ಲಿ. ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿಯವೇಳೆ ಧರ್ಮಗಳ ಗಣತಿ ಜೊತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗಣತಿಯನ್ನು ತಲೆಎಣಿಕೆಯ ಮೂಲಕ ನಡೆಸಲಾಗುತ್ತದೆ. ಆದರೆ ಹಿಂದುಳಿದ ವರ್ಗದಲ್ಲಿರುವ ಜಾತಿಗಳ ಬಗೆಗಿನ ಇಲ್ಲಿಯ ವರೆಗಿನ ಮಾಹಿತಿಗೆ ಸ್ಯಾಂಪಲ್ ಸರ್ವೆಯೇ ಆಧಾರ.

ನಮ್ಮ ರಾಜ್ಯದ ಎಲ್ .ಜಿ.ಹಾವನೂರು ಆಯೋಗದಿಂದ ಹಿಡಿದು, ಕೇಂದ್ರ ಸರ್ಕಾರದ ಮಂಡಲ್ ಆಯೋಗದ ವರದಿಯ ವರೆಗೆ ಎಲ್ಲ ಆಯೋಗಗಳು 1931ರ ಜಾತಿ ಗಣತಿಯನ್ನು ಮೂಲವಾಗಿಟ್ಟುಕೊಂಡು ನಡೆಸಿದ್ದ ಸ್ಯಾಂಪಲ್ ಸರ್ವೆಯನ್ನು ಆಧರಿಸಿಯೇ ಶಿಫಾರಸುಗಳನ್ನು ಮಾಡಿವೆ. ಈ ಕಾರಣಕ್ಕಾಗಿಯೇ ನ್ಯಾಯಾಲಯಗಳು ಈ ಮಾಹಿತಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತಾ ಬಂದಿದೆ.

> ಬಿಜೆಪಿಯ ಕೆಲ ನಾಯಕರು ಜಾತಿ ಸಮೀಕ್ಷೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಬಹಳಷ್ಟು ತರಾತುರಿಯಿಂದ ಸಂವಿಧಾನಕ್ಕೆ ತಿದ್ದುಪಡಿಯನ್ನೂ ಮಾಡಿ ಆರ್ಥಿಕವಾಗಿ ಹಿಂದುಳಿದವರಿಗೂ ಶೇಕಡಾ 10ರಷ್ಟು ಮೀಸಲಾತಿಯನ್ನು ಘೋಷಿಸಿತು. ಈ ಮೀಸಲಾತಿ ನೀತಿಗೆ ಮುನ್ನ ಯಾವ ಸಾಮಾಜಿಕ-ಆರ್ಥಿಕ ಸಮೀಕ್ಷೆ ನಡೆದಿದೆ?



ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್, ಎಚ್‌ಎಎಂ ಪಕ್ಷದ ಮುಖ್ಯಸ್ಥ ಜಿತನ್ ರಾಂ ಮಾಂಝಿ ಮುಂತಾದವರು ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದಾರೆ ಪಿಟಿಐ ಚಿತ್ರ

ಮೀಸಲಾತಿ ನೀತಿಯನ್ನು ಯಾವ ಅಂಕಿ-ಅಂಶದ ಆಧಾರದಲ್ಲಿ ರೂಪಿಸಲಾಗಿದೆ? ದೇಶದಲ್ಲಿರುವ ಹಿಂದುಳಿದ ಜಾತಿಗಳ ನಿಖರ ಸಂಖ್ಯೆ ಎಷ್ಟು? ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಏನು? ಇದ್ಯಾವುದಕ್ಕೂ ಸರ್ಕಾರದ ಬಳಿ ಉತ್ತರ ಇಲ್ಲ.

ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಕೇಳಿರುವುದು ಇದೇ ಪ್ರಶ್ನೆಯನ್ನು. ಹಿಂದುಳಿದ ಜಾತಿಗಳ ಮೀಸಲಾತಿಗೆ ಕಾನೂನಿನ ರಕ್ಷಣೆ ನೀಡಿದ ಮಂಡಲ್ ತೀರ್ಪು ಎಂದೇ ಪ್ರಸಿದ್ಧವಾದ ಇಂದಿರಾ ಸಾಹ್ನಿ ತೀರ್ಪಿನಲ್ಲಿ ಹಿಂದುಳಿದ ಜಾತಿಗಳನ್ನು ಕ್ರಮಬದ್ಧವಾಗಿ ಗುರುತಿಸಲು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಶಾಶ್ವತ ಹಿಂದುಳಿದ ಜಾತಿಗಳ ಆಯೋಗ ರಚಿಸಬೇಕೆಂದು ಹೇಳಿತ್ತು.

ಈ ಹಿನ್ನೆಲೆಯಲ್ಲಿ, ಎನ್.ಧರ್ಮಸಿಂಗ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಮತ್ತು ಹಣಕಾಸು ಖಾತೆ ಸಚಿವನಾಗಿದ್ದ ನಾನು ಮಂಡಿಸಿದ್ದ 2004-05ರ ಬಜೆಟ್‌ನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸುವ ಘೋಷಣೆ ಮಾಡಿದ್ದೆ. ಮರುವರ್ಷ ನನ್ನನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಿದ್ದ ಕಾರಣದಿಂದಾಗಿ ಈ ಸಮೀಕ್ಷೆಯ ಆದೇಶ ಮೂಲೆಗುಂಪಾಗಿತ್ತು.

ಒಂಬತ್ತು ವರ್ಷಗಳ ನಂತರ ಮುಖ್ಯಮಂತ್ರಿಯಾಗಿ ನಾನೇ ಇದಕ್ಕೆ ಚಾಲನೆ ನೀಡಬೇಕಾಯಿತು. ನ್ಯಾಯವಾದಿ ಕಾಂತರಾಜ್ ಅವರ ನೇತೃತ್ವದ ಶಾಶ್ವತ ಹಿಂದುಳಿದ ಆಯೋಗಕ್ಕೆ ಸಾಮಾಜಿಕ-ಆರ್ಥಿಕ ಸಮೀಕ್ಷೆಯ ಹೊಣೆಗಾರಿಕೆ ವಹಿಸಿದ್ದು ಮಾತ್ರವಲ್ಲ ₹170 ಕೋಟಿ ಅನುದಾನವನ್ನೂ ನೀಡಿದ್ದೆ. ಈ ಸಮೀಕ್ಷೆ ನ್ಯಾಯಾಲಯದ ನಿಕಷಕ್ಕೆ ಒಳಗಾಗುವ ಎಲ್ಲ ಸಾಧ್ಯತೆಗಳಿರುವ ಕಾರಣ ಈ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಎಚ್ಚರಿಕೆಯಿಂದ ನಡೆಸಬೇಕಿತ್ತು.

ಸುಮಾರು 1.6 ಲಕ್ಷ ಸಿಬ್ಬಂದಿಯ ಮೂಲಕ ರಾಜ್ಯದ 1.3 ಕೋಟಿ ಮನೆಗಳಿಗೆ ಭೇಟಿ ನೀಡಿ 2015ರ ಏಪ್ರಿಲ್-ಮೇ ತಿಂಗಳ ಅವಧಿಯಲ್ಲಿ ಅತ್ಯಂತ ವೈಜ್ಞಾನಿಕವಾಗಿಯೇ ಈ ಸಮೀಕ್ಷೆ ನಡೆಸಲಾಗಿತ್ತು.

ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹ ಒಂದು ಭಾಗವಾದರೆ, ಅದರ ವಿಶ್ಲೇಷಣೆ ಇನ್ನೊಂದು ಪ್ರಮುಖ ಭಾಗ. ಈ ಕಾರ್ಯಕ್ಕಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ನೆರವನ್ನು ಪಡೆಯಲಾಗಿತ್ತು. ಈ ವಿಶ್ಲೇಷಣಾ ಕಾರ್ಯ ನಿರೀಕ್ಷೆ ಮೀರಿ ವಿಳಂಬವಾಗಿದ್ದು ನಿಜ.

ದೇಶದಲ್ಲಿಯೇ ಮೊದಲನೆಯದಾದ ಈ ಜಾತಿ ಸಮೀಕ್ಷೆ ನನ್ನ ಕನಸಿನ ಕೂಸು. ಇದನ್ನು ನಮ್ಮ ಸರ್ಕಾರದ ಅವಧಿಯಲ್ಲಿಯೇ ಸ್ವೀಕಾರ ಮಾಡಿ ಅದರ ಶಿಫಾರಸುಗಳನ್ನು ಜಾರಿಗೊಳಿಸಬೇಕೆಂಬುದು ನನ್ನ ಆಸೆಯಾಗಿತ್ತು.

ಆದರೆ ಆ ಕಾಲದಲ್ಲಿ ಪೂರ್ಣಗೊಂಡಿರಲಿಲ್ಲ. ನನಗಿರುವ ಮಾಹಿತಿ ಪ್ರಕಾರ ಆಯೋಗ ಸಮೀಕ್ಷಾ ವರದಿಯನ್ನು ಪೂರ್ಣಗೊಳಿಸಿದ್ದು 2018ರ ಕೊನೆಯಲ್ಲಿ. ಆಗ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಇತ್ತು. ಕಾಂತರಾಜ್ ಆಯೋಗ ವರದಿ ಸಲ್ಲಿಸಲು ಸಮಯಾವಕಾಶ ಕೋರಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರಕ್ಕೆ ಪತ್ರ ಬರೆದರೂ ಅದಕ್ಕೆ ಪೂರಕ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ.

ಸಾಮಾಜಿಕ-ಆರ್ಥಿಕ ಸಮೀಕ್ಷೆಯ ಸಮಗ್ರ ವರದಿಯನ್ನು ಕಾಂತರಾಜ್ ಆಯೋಗ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ 2019ರ ಸೆಪ್ಟೆಂಬರ್‌ನಲ್ಲಿ ಸಲ್ಲಿಸಿದೆ. ವಿರೋಧ ಪಕ್ಷದಲ್ಲಿದ್ದಾಗ ಜಾತಿ ಸಮೀಕ್ಷೆಯ ವರದಿಯನ್ನು ಒಪ್ಪಿಕೊಂಡು ಜಾರಿಗೊಳಿಸಲು ಒತ್ತಾಯಿಸುತ್ತಿದ್ದ ಬಿಜೆಪಿ ನಾಯಕರು ಈಗ ರಾಗ ಬದಲಾಯಿಸುತ್ತಿರುವುದು ವಿಷಾದನೀಯ.

ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಚನೆಯಾಗಿರುವ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಸ್ವಾಯತ್ತ ಸಂಸ್ಥೆ, ಇದಕ್ಕೆ ರಾಜಕೀಯ ಬಣ್ಣ ಬಳಿಯಬಾರದು.

ಮಂಡಲ್ ಆಯೋಗ ರಚನೆಯಾಗಿದ್ದು 1977ರ ಜನತಾ ಸರ್ಕಾರದ ಕಾಲದಲ್ಲಿ, ಅದು ವರದಿ ಸಲ್ಲಿಸಿದ್ದು 1980ರಲ್ಲಿ ಇಂದಿರಾಗಾಂಧಿ ಸರ್ಕಾರಕ್ಕೆ, ಅದನ್ನು ಒಪ್ಪಿಕೊಂಡಿದ್ದು 1990ರಲ್ಲಿ ಅಧಿಕಾರದಲ್ಲಿದ್ದ ವಿ.ಪಿ.ಸಿಂಗ್ ಸರ್ಕಾರ.

ನಮ್ಮ ರಾಜ್ಯದಲ್ಲಿಯೇ ರಚನೆಯಾಗಿರುವ ಎ.ಜೆ. ಸದಾಶಿವ ಆಯೋಗ ರಚನೆ ಮಾಡಿದ್ದು ಒಂದು ಸರ್ಕಾರ, ಅದು ವರದಿ ಸಲ್ಲಿಸಿದ್ದು ಇನ್ನೊಂದು ಸರ್ಕಾರಕ್ಕೆ. ಇಂತಹ ಸಮೀಕ್ಷೆಗಳು ಕೋಟ್ಯಂತರ ಜನತೆಯ ಸಾಮಾಜಿಕ, ಆರ್ಥಿಕ ಭವಿಷ್ಯವನ್ನು ನಿರ್ಧರಿಸುವ ವಿಷಯವಾಗಿರುವ ಕಾರಣ ಅವಸರದಿಂದ, ನಿರ್ಲಕ್ಷ್ಯದಿಂದ ಮಾಡಲಾಗದು. ವಿಳಂಬವಾದರೂ ಈಗ ಪೂರ್ಣಗೊಂಡಿದೆ.

ಈಗ ಕುಂಟುನೆಪಗಳನ್ನು ಮುಂದೊಡ್ಡಿ ಈ ಸಮೀಕ್ಷೆಯನ್ನು ತಿರಸ್ಕರಿಸಿದರೆ ಅದು ರಾಜ್ಯದ ಜನರಿಗೆ ಬಗೆಯುವ ದ್ರೋಹವಾಗುತ್ತದೆ ಮಾತ್ರವಲ್ಲ; ಒಂದು ಕೆಟ್ಟ ಪರಂಪರೆಗೆ ನಾಂದಿ ಹಾಡಿದಂತಾಗುತ್ತದೆ.

ಬಿಜೆಪಿಯ ಕೆಲ ನಾಯಕರು ಜಾತಿ ಸಮೀಕ್ಷೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಬಹಳಷ್ಟು ತರಾತುರಿಯಿಂದ ಸಂವಿಧಾನಕ್ಕೆ ತಿದ್ದುಪಡಿಯನ್ನೂ ಮಾಡಿ ಆರ್ಥಿಕವಾಗಿ ಹಿಂದುಳಿದವರಿಗೂ ಶೇಕಡಾ 10ರಷ್ಟು ಮೀಸಲಾತಿಯನ್ನು ಘೋಷಿಸಿತು. ಈ ಮೀಸಲಾತಿ ನೀತಿಗೆ ಮುನ್ನ ಯಾವ ಸಾಮಾಜಿಕ-ಆರ್ಥಿಕ ಸಮೀಕ್ಷೆ ನಡೆದಿದೆ?

ರಾಜ್ಯ ಸರ್ಕಾರ ಇಂತಹ ವಿಚಾರದಲ್ಲಿ ರಾಜಕೀಯ ಮಾಡಲು ಹೋಗಬಾರದು. ಈಗಾಗಲೇ ಜಾತಿಗಣತಿಯ ವರದಿ ಮುಖ್ಯಮಂತ್ರಿಯವರ ಮೇಜಿನಲ್ಲಿದೆ. ಮೊದಲು ಅದನ್ನು ಸ್ವೀಕರಿಸಬೇಕು, ಅದರಲ್ಲಿ ಏನಾದರೂ ಲೋಪ-ದೋಷಗಳಿದ್ದರೆ ಅದನ್ನು ಸರಿಪಡಿಸಲು ಕ್ರಮಕೈಗೊಳ್ಳಬೇಕು. ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಸರ್ಕಾರಕ್ಕೆ ಸಂಪೂರ್ಣವಾಗಿ ಸಹಕರಿಸಲು ನಾವು ಸಿದ್ಧರಿದ್ದೇವೆ.

ಲೇಖಕ: ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ನೈತಿಕತೆ ಇಲ್ಲದೆ ಶಿಕ್ಷಣವಿಲ್ಲ

ಮನುಷ್ಯ ವಿದ್ಯಾವಂತನಾದಷ್ಟು ಆತನ ಬುದ್ಧಿ ವಿಶಾಲವಾಗುತ್ತೆ ಅನ್ನೋದು ಸುಳ್ಳು. ವಿದ್ಯೆಯಿಂದ ಮನುಷ್ಯ ಗುಣವಂತನಾಗುತ್ತಾನೆ ಅನ್ನೋದು ಸಹ ಸತ್ಯವಲ್ಲ. ವಿವೇಕ ಮತ್ತು ವಿವೇಚನಾಶಕ್ತಿಯಿಂದ ಮಾತ್ರ ಮನುಷ್ಯನ ಬುದ್ಧಿ ವಿಶಾಲ ತಳಹದಿಯಲ್ಲಿ ಅರಳುತ್ತೆ. ವಿದ್ಯೆಗೆ ನೈತಿಕ ಪ್ರಜ್ಞೆ ಇಲ್ಲದಿದ್ದರೆ ಎಂಥ ಅನಾಹುತಗಳಾಗುತ್ತೆ ಅನ್ನುವುದಕ್ಕೆ ಇತ್ತೀಚಿನ ವಿದ್ಯಾವಂತರಲ್ಲಿ ಕಂಡು ಬರುತ್ತಿರುವ ದುರ್ನಡತೆಗಳೆ ಸಾಕ್ಷಿ. ವಿದ್ಯೆಗೆ ವಿವೇಕದ ಅಂಕುಶ ಇಲ್ಲದ ಕಾರಣ ಮನುಷ್ಯನ ಮೂಲಪ್ರವೃತ್ತಿಗಳಾದ ಅಸೂಯೆ, ದ್ವೇಷಗಳು ನಿವಾರಣೆಯಾಗುತ್ತಿಲ್ಲ. ಮನುಷ್ಯನ ಆರು ಶತ್ರುಗಳಾದ ಕಾಮ, ಕ್ರೋಧ, ಲೋಭ, ಮದ, ಮೋಹ ಮತ್ತು ಮಾತ್ಸರ್ಯಗಳು ವಿದ್ಯಾವಂತರಲ್ಲಿ ನಿವಾರಣೆಯಾಗಿಲ್ಲ ಎಂದರೆ, ನಮ್ಮ ಶಿಕ್ಷಣವ್ಯವಸ್ಥೆಯಲ್ಲೇ ಲೋಪವಿದೆ ಎಂದು ಅರ್ಥ.


ನಮಗೆ ವೈಜ್ಞಾನಿಕ ಶಿಕ್ಷಣದಷ್ಟೆ ನೈತಿಕ ಶಿಕ್ಷಣವೂ ಅಗತ್ಯ. ನೈತಿಕತೆ ಇಲ್ಲದೆ ಯಾವ ದೇಶವೂ ಉದ್ಧಾರವಾದ ನಿದರ್ಶನವಿಲ್ಲ. ನೈತಿಕತೆಯ ತಳಹದಿಯ ಮೇಲೆಯೇ ಎಲ್ಲಾ ನಾಗರಿಕತೆ ಬೆಳೆದಿದೆ. ನೈತಿಕತೆ ಕಳೆದುಕೊಂಡಾಗ ಎಲ್ಲಾ ಸಾಮ್ರಾಜ್ಯಗಳೂ ಉರುಳಿವೆ. ಹೀಗಿರುವಾಗ ನಮ್ಮ ಮಕ್ಕಳು ಭವಿಷ್ಯದ ಬದುಕು ಕಟ್ಟಿಕೊಳ್ಳಲು ಅಗತ್ಯವಾದ ನೈತಿಕ ಶಿಕ್ಷಣ ಕಲಿಸದಿದ್ದರೆ, ನಮ್ಮ ಸಮಾಜ ಸುಧಾರಣಾಹಾದಿಯಿಂದ ಹಿಮ್ಮುಖವಾಗುತ್ತದೆ. ನಮ್ಮ ಮಕ್ಕಳಿಗೆ ವಿಜ್ಞಾನ-ತಂತ್ರಜ್ಞಾನದಷ್ಟೆ ಮುಖ್ಯ ನೈತಿಕವಾಗಿ ಬದುಕುವ ತಂತ್ರಗಾರಿಕೆ. ನಮ್ಮ ಬದುಕಿಗೆ ಅತ್ಯಗತ್ಯವಾದ ನ್ಯಾಯ-ನೀತಿ-ಧರ್ಮದಲ್ಲಿ ಬದುಕುವುದನ್ನು ಕಲಿಸದಿದ್ದರೆ ಒಟ್ಟಾರೆ ಶಿಕ್ಷಣವ್ಯವಸ್ಥೆಯ ಮೂಲ ಉದ್ದೇಶವೇ ನಿರರ್ಥಕವಾಗುತ್ತದೆ.

ನನ್ನ ದೃಷ್ಟಿಯಲ್ಲಿ ಸ್ವಾತಂತ್ರ್ಯಾನಂತರದ ಮೊದಲ 25 ವರ್ಷಗಳು ಭಾರತೀಯ ಸಂಸ್ಕೃತಿಯ ಬೇರು ಎನಿಸಿದ ನೈತಿಕತೆಯ ಹಂದರದಲ್ಲಿ ನಮ್ಮ ಶಿಕ್ಷಣವ್ಯವಸ್ಥೆ ಸದೃಢವಾಗಿ ಬೆಳೆಯಿತು. ಆ 25 ವರ್ಷಗಳ ಪೀಳಿಗೆಯವರು ಕಷ್ಟಪಟ್ಟು ದೇಶ ಕಟ್ಟಿದ್ದರಿಂದ ನಿರ್ಗತಿಕವಾಗಿದ್ದ ಭಾರತ ಸರ್ವಶಕ್ತವಾಗಿ ಬೆಳೆಯಿತು. ಹಸಿವಿನಿಂದ ಅಸುನೀಗುವಂಥ ದುಃಸ್ಥಿತಿಯಿಂದ ಪಾರಾಗಿ, ಆಹಾರ ಸ್ವಾವಲಂಬಿಗಳಾದೆವು. ಮತ್ತೊಂದು ಹಸಿದ ರಾಷ್ಟ್ರಕ್ಕೆ ಆಹಾರ ಒದಗಿಸುವಷ್ಟು ಸಮೃದ್ಧರಾದೆವು. ದೇಶದ ಶ್ರಮಜೀವಿಗಳ ರೆಟ್ಟೆಗೆ ಕಸುಬು ಒದಗಿಸುವ ಉದ್ಯೋಗಗಳು ಸೃಷ್ಟಿಯಾದವು. ವೈದ್ಯಕೀಯದಲ್ಲಿ ಕ್ರಾಂತಿಯಾಗಿ ಕುಷ್ಠ, ಸಿಡುಬು, ಕ್ಷಯ, ಮಲೇರಿಯಾದಂಥ ಭಯಾನಕ ರೋಗಗಳನ್ನು ತೊಡೆದು, ಮರಣಪ್ರಮಾಣ ಕಡಿಮೆಯಾಯಿತು. ವಿದ್ಯಾವಂತರ ಸಂಖ್ಯೆ ಹತ್ತುಪಟ್ಟು ಹೆಚ್ಚಾಯಿತು. ಇನ್ನೇನೂ ಭಾರತ ಅಭಿವೃದ್ಧಿಶೀಲ ರಾಷ್ಟ್ರದ ಪಟ್ಟಿಯಿಂದ, ಅಭಿವೃದ್ಧಿ ಹೊಂದಿದ ದೇಶಗಳ ಯಾದಿಯಲ್ಲಿ ನಿಲ್ಲುತ್ತದೆ ಎಂದು ಕೊಳ್ಳುವಷ್ಟರಲ್ಲಿ 90ರ ದಶಕದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಕಾಣಿಸಿಕೊಂಡ ವ್ಯಾಪಾರೀಕರಣ ನಮ್ಮೆಲ್ಲಾ ಆಶಯಗಳನ್ನು ತಲೆಕೆಳಗು ಮಾಡಿತು.

ಶಿಕ್ಷಣವೇ ಒಂದು ದೇಶದ ಪ್ರಗತಿಯ ಸಂಕೇತ ಅಂತ ನಂಬಿ ಸರ್ವರಿಗೂ ಶಿಕ್ಷಣ ಒದಗಿಸುವ ನ್ಯಾಯಬದ್ಧ ಪದ್ಧತಿಯಿಂದ ಭಾರತದಲ್ಲಿ ಶಿಕ್ಷಣಕ್ರಾಂತಿಯಾಯಿತು. ಆದರೆ ಖಾಸಗಿ ಶಾಲೆಯಲ್ಲಿ ಹುಟ್ಟಿಕೊಂಡ ಇಂಗ್ಲಿಷ್ ಮಾಧ್ಯಮ ಬೃಹತ್ ವಾಣಿಜ್ಯ ರೂಪ ತಾಳಿದಾಗ ನಮ್ಮ ಶಿಕ್ಷಣ ವಿಭ್ರಾಂತಿಯಾಯಿತು. ಅಲ್ಲಿ ಹಣವೇ ಮುಖ್ಯವಾಗಿ ಗುಣ–ಮೌಲ್ಯಗಳು ಕುಸಿಯುತ್ತಾ ಹೋದವು. ಹಣದ ದಾಹ ಹೆಚ್ಚಾದಂತೆ ಶಿಕ್ಷಣ ವ್ಯಾಪಾರದ ಸರಕಾಯಿತು; ನ್ಯಾಯ-ನೀತಿ-ಧರ್ಮಕ್ಕೆ ಅವಕಾಶವೇ ಇಲ್ಲದಂತಾಯಿತು. ಅದರ ದುಷ್ಪರಿಣಾಮವನ್ನು ನಾವಿಂದು ಅನುಭವಿಸುತ್ತಿದ್ದೇವೆ. ನಮ್ಮಲ್ಲಿ ಹಣದ ಮಟ್ಟ ಹೆಚ್ಚಾಯಿತೇ ಹೊರತು, ಗುಣಮಟ್ಟ ಇಳಿಕೆಯಾಯಿತು. ಕಾಂಚಾಣದ ಹಿಂದೆ ಕುರುಡರಂತೆ ಜನ ಓಡಿದ ಪರಿಣಾಮವಾಗಿ ಭಾರತ ಭ್ರಷ್ಟರ ಕೂಪವಾಯಿತು. ಈಗಲಾದರೂ ಆದ ತಪ್ಪನ್ನು ತಿದ್ದಿಕೊಂಡು, ನೈತಿಕ ಬೇರಿನಿಂದ ಅರಳಿದ ನಮ್ಮ ಸಂಸ್ಕೃತಿಯ ತಳಹದಿಯ ಮೇಲೆ ಶಿಕ್ಷಣವ್ಯವಸ್ಥೆ ಬೆಳೆದರೆ ನಮ್ಮ ದೇಶ ಮತ್ತೆ ಉಚ್ಛ್ರಾಯ ಸ್ಥಿತಿಗೆ ಮರಳುತ್ತದೆ, ಸಮಾಜದಲ್ಲಿ 'ಸಚ್ಚಿದಾನಂದ'ದ ಬದುಕು ಅರಳುತ್ತದೆ.

ಎಣಿಕೆಗೆ ಸಿಗದ ಸಮುದಾಯಗಳು ಗಣತಿಯ ಲೆಕ್ಕಕ್ಕೆ ಸಿಗಲಿ

• ಎನ್. ರವಿಕುಮಾರ್



ಸರ್ಕಾರಿ ಸೌಲಭ್ಯಗಳ ಸಮಾನ ಹಂಚಿಕೆ, ಉದ್ಯೋಗ, ಶಿಕ್ಷಣ ಕ್ಷೇತ್ರದಲ್ಲಿ ಸರ್ವರಿಗೆ ಸಮಪಾಲು ದೊರೆಯಬೇಕಾದರೆ, ಮೀಸಲಾತಿಯೇ ಸಿಗದ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಸಿಗಬೇಕಾದರೆ ಆರ್ಥಿಕ–ಜಾತಿ ಗಣತಿ ಇಡೀ ದೇಶದಲ್ಲಿ ನಡೆಯಲೇಬೇಕಿದೆ.

ಸ್ವಾತಂತ್ರ್ಯ ಬಂದು ಇಷ್ಟು ಸುದೀರ್ಘ ವರ್ಷ ಕಳೆದರೂ ಇನ್ನೂ ಸಾಮಾಜಿಕ ನ್ಯಾಯದಿಂದ ವಂಚಿತವಾಗಿ, ಮುಖ್ಯವಾಹಿನಿಯಿಂದ ದೂರವೇ ಉಳಿದಿರುವ ನೂರಾರು ಸಮುದಾಯಗಳಿವೆ. ಶೈಕ್ಷಣಿಕ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವಿಕೆಯಲ್ಲೇ ಜೀವನ ಸಾಗಿಸುತ್ತಿರುವ ಸಮುದಾಯಗಳನ್ನು ಒಳಗೊಳ್ಳಬೇಕಾದ ತುರ್ತು ಇದೆ. ಈ ರೀತಿ ಜಾತಿ ಗಣತಿ ಮಾಡುವಾಗ ಅದು ರಾಜಕೀಯ ರಹಿತವಾಗಿರುವುದರ ಜತೆಗೆ, ಸೌಲಭ್ಯ ಹಾಗೂ ನ್ಯಾಯದ ಮರು ಹಂಚಿಕೆಯ ವಿಶಾಲ ಆಶಯವನ್ನು ಒಳಗೊಂಡಿರಬೇಕು. ಆರ್ಥಿಕ–ಜಾತಿ ಗಣತಿ ಮಾಡುವ ಹೊಣೆಯನ್ನು ರಾಜಕೀಯ ಸಂಪರ್ಕ ಇರುವ ವ್ಯಕ್ತಿಗಳಿಗೆ ವಹಿಸಬಾರದು. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು, ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು, ಸಾಮಾಜಿಕ ಚಳವಳಿಗಳಲ್ಲಿ ಸಕ್ರಿಯರಾಗಿರುವವರು ಇರುವ ಸಮಿತಿ ರಚಿಸಬೇಕು. ಕರ್ನಾಟಕದಲ್ಲಿ ಸಾಮಾಜಿಕ–ಆರ್ಥಿಕ ಸಮೀಕ್ಷೆ ನಡೆಸಿದಾಗ ರಾಜಕೀಯ ನಂಟಿಲ್ಲದವರಿಗೆ ಹೊಣೆ ವಹಿಸಿರಲಿಲ್ಲ. ಆಗ ಸರ್ಕಾರ ನಡೆಸುತ್ತಿದ್ದವರ ಸೂಚನೆ ಮೇರೆಗೆ ನಡೆದಿದ್ದರಿಂದಲೇ, ಆ ವರದಿ ಅನೇಕ ವಿರೋಧಭಾಸಗಳಿಂದ ಕೂಡಿದೆ ಎಂಬ ಟೀಕೆಗೆ ಗುರಿಯಾಯಿತು. ಅಂತಹದು ನಡೆದರೆ ಪ್ರಯೋಜನವಿಲ್ಲ. ಆ ವರದಿ ಸರಿ ಇದ್ದರೆ, ಕಾಂಗ್ರೆಸ್ ನೇತೃತ್ವದ ಸರ್ಕಾರ ಇದ್ದಾಗಲೇ ಅದನ್ನು ಸ್ವೀಕರಿಸಬೇಕಿತ್ತಲ್ಲವೇ?

ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಸಮಾನ ಅವಕಾಶಗಳನ್ನು ಕಲ್ಪಿಸುವ ದಿಸೆಯಲ್ಲಿ ಬಹಳ ದೊಡ್ಡ ಹೆಜ್ಜೆಗಳನ್ನು ಇಡುತ್ತಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿಯನ್ನು ನೀಡುವ ಮಹತ್ವದ ನಿರ್ಧಾರವನ್ನು ಕೈಗೊಳ್ಳುವ ಮೂಲಕ ಬದಲಾವಣೆಗೆ ನಾಂದಿ ಹಾಡಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ಮೂಲಕ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಹಿಂದುಳಿದವರಿಗೆ ಅವಕಾಶಗಳನ್ನು ಕಲ್ಪಿಸಲಾಗಿದೆ. ಯಾವುದೇ ಸಮುದಾಯ ಮುಂದೆ ಬರಬೇಕಾದರೆ ಶಿಕ್ಷಣವೊಂದೇ ಪ್ರಮುಖ ದಾರಿ.

> ಈವರೆಗೆ ಎಣಿಕೆಗೆ ಸಿಗದೇ, ಸಮಾಜದಿಂದ ದೂರವೇ ಉಳಿದಂತಿರುವ ಅಲೆಮಾರಿಗಳು, ಬುಡಕಟ್ಟು ಸಮುದಾಯದವರು ದೇಶದುದ್ದಕ್ಕೂ ಹಂಚಿಹೋಗಿದ್ದಾರೆ. ಹೀಗೆ, ಇಲ್ಲಿಯವರೆಗೆ ಸೌಲಭ್ಯಗಳ ಸಣ್ಣ ಹೂವನ್ನು ಕಾಣದೇ ಇರುವ, ಸೌಕರ್ಯಗಳೇ ಇಲ್ಲದೇ ಬದುಕುತ್ತಿರುವ ಲಕ್ಷಾಂತರ ಅಲಕ್ಷಿತ ಜನರನ್ನು ನೂತನ ಗಣತಿ ಒಳಗೊಂಡರೆ ಮಾತ್ರ, ಈ ಬೇಡಿಕೆಗೆ ಅರ್ಥ ಬರುತ್ತದೆ

ಉಚಿತ ಶಿಕ್ಷಣ, ವಿದ್ಯಾರ್ಥಿವೇತನ, ಉತ್ತಮ ಶಿಕ್ಷಣ ಪಡೆಯಲು ಬೇಕಾದ ಸೌಲಭ್ಯ ಕಲ್ಪಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಇಂತಹದೊಂದು ದಿಟ್ಟ ಹೆಜ್ಜೆ. ಕೌಶಲಯುತ ಮಾನವ ಸಂಪನ್ಮೂಲ ಸೃಷ್ಟಿಗಾಗಿ ಈ ನೀತಿಯಲ್ಲಿ ಸಾಕಷ್ಟು ಅವಕಾಶಗಳಿವೆ. ಆರಂಭಿಕ ಹಂತದಲ್ಲೇ ಕೌಶಲ ಕಲಿಕೆ, ಐಚ್ಛಿಕ ವಿಷಯ ಆಯ್ಕೆಯಲ್ಲಿ ಸ್ವಾತಂತ್ರ್ಯ, ತಕ್ಷಣಕ್ಕೆ ಉದ್ಯೋಗ ಬಯಸುವ ಬಡ ಕುಟುಂಬದವರಿಗೆ ಉದ್ಯೋಗಾಧಾರಿತ ಶಿಕ್ಷಣ, ಉನ್ನತ ಶಿಕ್ಷಣದಲ್ಲಿ ಆಸಕ್ತಿ ಇರುವವರಿಗೆ ಪ್ರತ್ಯೇಕ ಆಯ್ಕೆ ದಾರಿಗಳನ್ನು ನೀತಿ ಒಳಗೊಂಡಿದೆ. ಈ ಸಮಿತಿಗೆ ಡಾ.ಕಸ್ತೂರಿ ರಂಗನ್ ಅವರನ್ನು ನೇಮಕ ಮಾಡಿ, ನೀತಿ ರೂಪಿಸಿದ್ದರಿಂದಾಗಿ ಯಾವುದೇ ವಿವಾದವಿಲ್ಲದೇ, ಸರ್ವರೂ ಒಪ್ಪುವ ರೀತಿಯೊಳಗೆ ಶಿಕ್ಷಣ ನೀತಿ ಸಿದ್ಧಗೊಂಡಿತು. ಈಗ ಅದು ದೇಶದಲ್ಲಿಯೇ ಸರ್ವಮಾನ್ಯವೂ ಆಯಿತು. ಆರ್ಥಿಕ–ಜಾತಿ ಗಣತಿ ಮಾಡುವಾಗಲೂ ಇಂತಹ ನಿಷ್ಪಕ್ಷಪಾತ, ರಾಜಕೀಯ ಸಂಪರ್ಕ ಇರದ ವ್ಯಕ್ತಿಗಳ ನೇತೃತ್ವದಲ್ಲಿ ಸಮಿತಿ ಮಾಡಿದರೆ ಹೆಚ್ಚು ವೈಜ್ಞಾನಿಕವಾಗಿ ನಡೆಯುತ್ತದೆ. ವಿಶ್ವಾಸಾರ್ಹತೆಯೂ ಮೂಡುತ್ತದೆ.

ಹೀಗೆ ಗಣತಿ ನಡೆಸುವ ಮುನ್ನ ಸಾರ್ವಜನಿಕ ವಲಯದಲ್ಲಿ ಎಲ್ಲ ಸ್ತರಗಳಲ್ಲಿ ಸವಿಸ್ತಾರ ಚರ್ಚೆ ನಡೆಯಬೇಕಿದೆ. ಜತೆಗೆ ಲೋಕಸಭೆ, ವಿಧಾನಸಭೆ ಸೇರಿದಂತೆ ಶಾಸನ ಸಭೆಗಳಲ್ಲಿ ಕೂಡ ಸಮಗ್ರ ಚರ್ಚೆ ನಡೆಯಬೇಕು. ಯಾವ ರೀತಿ ನಡೆಸಿದರೆ ಹೆಚ್ಚು ಸೂಕ್ತ ಎಂಬ ಸಮಾಲೋಚನೆ ಸಮಾಜದ ಎಲ್ಲ ಸ್ತರಗಳಲ್ಲೂ ನಡೆದ ಬಳಿಕವೇ ಗಣತಿಗೆ ಮುಂದಡಿ ಇಟ್ಟರೆ ವರದಿ ಬಂದ ಬಳಿಕ ಯಾವುದೇ ಗೊಂದಲ, ವಿರೋಧ ಉದ್ಭವವಾಗುವುದಿಲ್ಲ. ಇವೆಲ್ಲ ನಡೆದ ಬಳಿಕವೇ ಮುಂದಿನ ಹೆಜ್ಜೆಯತ್ತ ಅಡಿ ಇಡಬೇಕು.

ಏಕೆಂದರೆ, ನಮ್ಮ ದೇಶವು ಸಾವಿರಾರು ಜಾತಿ, ಉಪ ಜಾತಿಗಳ ಸಂಗಮ. ಲಿಪಿಯೇ ಇಲ್ಲದ ಭಾಷೆಯನ್ನಾಡುವ ನೂರಾರು ಸಮುದಾಯಗಳು ಇವೆ. ಎಲ್ಲಕ್ಕಿಂತ ಮುಖ್ಯವಾಗಿ ಈವರೆಗೆ ಎಣಿಕೆಗೆ ಸಿಗದೇ, ಸಮಾಜದಿಂದ ದೂರವೇ ಉಳಿದಂತಿರುವ ಅಲೆಮಾರಿಗಳು, ಬುಡಕಟ್ಟು ಸಮುದಾಯದವರು ದೇಶದುದ್ದಕ್ಕೂ ಹಂಚಿಹೋಗಿದ್ದಾರೆ. ಹೀಗೆ, ಇಲ್ಲಿಯವರೆಗೆ ಸೌಲಭ್ಯಗಳ ಸಣ್ಣ ಹೂವನ್ನು ಕಾಣದೇ ಇರುವ, ಸೌಕರ್ಯಗಳೇ ಇಲ್ಲದೇ ಬದುಕುತ್ತಿರುವ ಲಕ್ಷಾಂತರ ಅಲಕ್ಷಿತ ಜನರನ್ನು ನೂತನ ಗಣತಿ ಒಳಗೊಂಡರೆ ಮಾತ್ರ, ಈ ಬೇಡಿಕೆಗೆ ಅರ್ಥ ಬರುತ್ತದೆ.

ಸರ್ವರನ್ನೂ ಒಳಗೊಳ್ಳುವ ಸರ್ವಸ್ಪರ್ಶಿ, ಸರ್ವರ ವಿಕಾಸ ಆಶಯದ ಮೇಲೆ ನಡೆಯುತ್ತಿರುವ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಈ ದಿಕ್ಕಿನತ್ತ ಹೆಜ್ಜೆ ಇಡಲಿದೆ ಎಂಬ ವಿಶ್ವಾಸ ಇದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯ ಸಿಗಬೇಕಾದರೆ ವೈಜ್ಞಾನಿಕವಾಗಿ ಗಣತಿ ನಡೆಯಬೇಕು. ಆಗ ಮಾತ್ರ ಸೌಲಭ್ಯಗಳ ಸಮಾನ ಹಂಚಿಕೆ ಸಾಧ್ಯವಾಗುತ್ತದೆ.

ತಗ್ಗಿರುವ ಕಡೆ ನೀರು ಹರಿದುಹೋಗುವುದು ಸಾಮಾನ್ಯ; ಆದರೆ, ಈವರೆಗೆ ಎಲ್ಲಿಗೆ ನೀರು ಹರಿದಿಲ್ಲವೋ ತಗ್ಗಿಲ್ಲದ ಕಡೆ ನೀರಿನ ಆಸರೆ ತಲುಪಿಲ್ಲವೋ ಅಂತಹ ಕಡೆ ನೀರು ಹರಿಸುವ ಕೆಲಸ ಆಗಬೇಕಿದೆ. ನೀರನ್ನು ತಲುಪಿಸಲು ಪೈಪ್‌ಲೈನ್, ಕಾಲುವೆ ನಿರ್ಮಾಣವಾಯಿತು. ಹರಿಸಲು ಸಾಧ್ಯವೇ ಇಲ್ಲದ ಕಡೆಗೆ ವಿದ್ಯುತ್ ಬಳಸಿ ಏತ ನೀರಾವರಿಯ ಮುಖೇನ ನೀರು ಹರಿಸುವ ಕೆಲಸವೂ ನಡೆಯುತ್ತಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಅತ್ಯಂತ ಹಿಂದುಳಿದವರಿಗೆ ಸೌಲಭ್ಯ ಕಲ್ಪಿಸಲು ಇಂತಹದೇ ಮಾರ್ಗಗಳನ್ನು ಹುಡುಕಬೇಕಾಗಿದೆ.

ವೈಜ್ಞಾನಿಕವಾಗಿ ಗಣತಿ ನಡೆದರೆ, ಇಷ್ಟು ಸುದೀರ್ಘ ವರ್ಷ ನೀಡಿರುವ ಮೀಸಲಾತಿಯ ಸೌಲಭ್ಯ ಯಾರಿಗೆಲ್ಲ ತಲುಪಿದೆ; ನ್ಯಾಯಯುತವಾಗಿ ಸಿಗಬೇಕಾದವರಿಗೆ ಎಷ್ಟರಮಟ್ಟಿಗೆ ದಕ್ಕಿದೆ ಎಂಬುದರ ಫಲಿತಾಂಶವೂ ಸಿಗುತ್ತದೆ. ಮೀಸಲಾತಿ ಮುಂದುವರಿಯಲೇಬೇಕು ಎಂಬುದರಲ್ಲಿ ಕೇಂದ್ರ ಸರ್ಕಾರಕ್ಕೆ, ನಮ್ಮ ಪಕ್ಷಕ್ಕೆ ಬದ್ಧತೆ ಇದೆ. ಅದರಲ್ಲಿ ಯಾವುದೇ ಗೊಂದಲವೂ ಇಲ್ಲ. ಉದ್ಯೋಗ, ಶಿಕ್ಷಣ ಕ್ಷೇತ್ರದಲ್ಲಿ ಯಾವ ಸಮುದಾಯಕ್ಕೆ ಮೀಸಲಾತಿ ಎಷ್ಟರಮಟ್ಟಿಗೆ ಸಿಗಬೇಕಿತ್ತೋ ಅಷ್ಟರಮಟ್ಟಿಗೆ ಸಿಕ್ಕಿದೆಯೇ ಎಂಬ ತಲಸ್ಪರ್ಶಿ ಅಧ್ಯಯನ ಹಾಗೂ ಸ್ಪಷ್ಟ ಚಿತ್ರಣ, ದತ್ತಾಂಶ ಈ ಗಣತಿಯಿಂದ ಸಿಗಲು ಸಾಧ್ಯ. ಹಾಗಾದಲ್ಲಿ ಸಿಗದೇ ಇರುವವರಿಗೆ ತಲುಪಿಸುವ ಯೋಜನೆ ರೂಪಿಸಲು ಇದು ಸಹಕಾರಿಯಾದೀತು.

ಲೇಖಕ: ವಿಧಾನಪರಿಷತ್ತಿನ ಸದಸ್ಯ ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ


ನಿರೂಪಣೆ: ವೈ.ಗ.ಜಗದೀಶ್

ಪದಬಂಧ 4702

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಂತನಿಂದಾದ ಆನಂದ! (3)
4.ಈತ ಆನೆ ನಡೆಸುವವನು (4)
6.ಯೋಗವಿದ್ದದಕ್ಕೇ ಈ ಹಂಚಿಕೆ! (4)
8.ಪಾಪಿಗಳ ಲೋಕವಿದು (3)
11.ವಲ್ಲಭ ಬೆಳೆಸಿರುವ ಬಳ್ಳಿ (3)
13.ಪರವಾಗಿ ಇಟ್ಟುಕೊಂಡಿರುವ ಸಾಮಗ್ರಿ (4)
16.ಗುಂಪು ಇಲ್ಲಿ ಕಾಣುತ್ತಿದೆ (4)
17.ಮನಸ್ಸಿಗೆ ಬಂದಂತೆ ನಡೆಯುವುದು (3)

ಮೇಲಿಂದ ಕೆಳಕ್ಕೆ
2.ನೆಮ್ಮದಿ ಈ ರೀತಿ ಬಂದಿದೆ (4)
3.ಯೋಗ್ಯವುಳ್ಳ ಸಾಮರ್ಥ್ಯ ಉಲ್ಟಾ ಕಾಣುತ್ತಿದೆ (3)
5.ಅಂಗವಿಕಲ ಇರುವ ಗುಹೆ! (2)
7.ಗಟ್ಟಿಯಾದ ಕೂಗು (3)
9.ಪದ್ದ ಇಲ್ಲಿದ್ದಾನೆ (3)
10.ಸ್ಲೇಟಿನ ಮೇಲೆ ಬರೆಯುವ ಸಾಧನ (3)
12.ಯತಿಗೆ ಸಿಕ್ಕಿರುವ ಸೋಡಿ (4)
14.ರೀತಿಯೊಡಗೂಡುವ ಸಂಪ್ರದಾಯ (3)
15.ರಭಸದಲ್ಲಿರುವ ದ್ರವ (2)



4701ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಯುಷ್ಮರ್ಮಶಾಲೆ 4.ಬಾಲರವಿ 5.ಸದ್ಭಾವ 7.ಸತ್ವದಿ 9.ತಿಜೋರಿ 11.ಶತಕ 13.ತಿದ್ದುಪಡಿ 15.ಕಿರಾಣಿಅಂಗಡಿ

ಮೇಲಿಂದ ಕೆಳಕ್ಕೆ:
1.ಆಯಾಸ 2.ಲೆಬಾ 3.ಅವಿಷ್ಣ 6.ವಕ್ರಗತಿ 7.ಸದರಿ 8.ವಿಧಿವಶ 10.ಅಂತಿಮ 12.ಕನ್ನಡಿ 14.ಡಿಕಿ

ಸುಡೊಕು 5088

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

5087 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಆಗಸ್ಟ್ 28, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ಷಷ್ಠೀ ಗಂ. 33-49 (ರಾ. 7-46) ಶನಿವಾರ ನಿತ್ಯ ನಕ್ಷತ್ರ ಭರಣೀ ಗಂ. 53-21 (ರಾ. 3-35) ವೃದ್ಧಿ ನಾಮ ಯೋಗ ಗಂ. 2-44 ಗರಜ ಕರಣ ಗಂ. 1-49 ವಿಷ ಗಂ. 14-2 ಅಮೃತ ಗಂ. 40-27 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-12 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 3 7 8

ಮೇಷ: ಉದ್ಯೋಗಸ್ಥ ಮಹಿಳೆಯರಿಗೆ ಆದಾಯದಲ್ಲಿ ವೃದ್ಧಿ, ಉದ್ಯೋಗ ನಿಮಿತ್ತ ವಿದೇಶ ಪ್ರಯಾಣ ಸಾಧ್ಯತೆ. ಧಾನ್ಯ ಮಾರಾಟಗಾರರಿಗೆ ಉತ್ತಮ ವ್ಯಾಪಾರದಿಂದಾಗಿ ಆದಾಯದಲ್ಲಿ ಹೆಚ್ಚಳ ಕಂಡುಬರುವುದು.

ವೃಷಭ: ಸರ್ಕಾರದಿಂದ ಆಗಬೇಕಾದ ಕೆಲಸದ ವಿಚಾರದಲ್ಲಿ ಪ್ರತಿಷ್ಠಿತ ವ್ಯಕ್ತಿಯೊಬ್ಬರ ಸಹಾಯ ದೊರಕಲಿದೆ. ಶತ್ರುಗಳ ಬಾಧೆ ನಿವಾರಣೆಯಾಗಲಿದೆ. ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಚಿಂತೆ ಎದುರಾಗಲಿದೆ.

ಮಿಥುನ: ರಾಜಕೀಯ ಉನ್ನತಿಗಾಗಿ ಚಿಂತನ ಮಂಥನ ನಡೆಸಲಿದ್ದೀರಿ. ಹೆಚ್ಚಿನ ಪರಿಶ್ರಮದಿಂದ ಕೆಲಸಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ವ್ಯವಹಾರದಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳುವಿರಿ.

ಕರ್ಕಾಟಕ: ವಾಹನ ಮಾರಾಟದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಕಳೆದುಕೊಂಡ ವಸ್ತುವೊಂದು ಪುನಃ ಕೈ ಸೇರುವ ಸಾಧ್ಯತೆ. ವಿವಾಹ ಸಂಬಂಧ ಒತ್ತಡ ಎದುರಿಸಬೇಕಾದೀತು.

ಸಿಂಹ: ಅರೆಕಾಲಿಕ ನೌಕರರಿಗೆ ಸುದಿನ. ರಾಜಕಾರಣಿಗಳು, ಸರ್ಕಾರಿ ಅಧಿಕಾರಿ ವರ್ಗದವರಿಗೆ ಉತ್ತಮ ದಿನ. ಸಂಗಾತಿಯ ಆಲೋಚನೆಗಳಿಗೆ ಪುರಸ್ಕಾರ ನೀಡುವುದು ಒಳ್ಳೆಯದು.

ಕನ್ಯಾ: ಸಗಟು ವ್ಯಾಪಾರಗಳಲ್ಲಿ ಗಣನೀಯ ಪ್ರಗತಿ ಕಂಡುಬರಲಿದ್ದು ಆದಾಯದಲ್ಲಿ ಹೆಚ್ಚಳ. ನೌಕರಿಯಲ್ಲಿ ಇರುವವರಿಗೆ ಬಿಡುವು ದೊರಕುವ ಸಾಧ್ಯತೆ. ಸಂಗಾತಿಯ ಸಹಕಾರದಿಂದಾಗಿ ಸಂತಸ ಮೂಡಲಿದೆ.

ತುಲಾ: ಕುಟುಂಬದಲ್ಲಿ ಸುಖ ಸಂತೋಷ ನೆಮ್ಮದಿಯನ್ನು ಕಾಣಲಿದ್ದೀರಿ. ಹಿತೈಷಿಗಳೊಂದಿಗೆ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗಿ. ವಿದ್ಯಾರ್ಥಿಗಳಿಗೆ ಓದಿನ ವಿಷಯದಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯವಾಗಿ ತೋರಿಬರುವುದು.

ವೃಶ್ಚಿಕ: ಆರ್ಥಿಕ ಸದೃಢತೆಯಿಂದಾಗಿ ಆಸ್ತಿ ಖರೀದಿ ಮಾಡುವ ಸಾಧ್ಯತೆ. ವಿದ್ಯಾರ್ಥಿಗಳು ಮುಂದಿನ ಅಭ್ಯಾಸದ ವಿಚಾರದಲ್ಲಿ ಅತ್ಯಂತ ಕುತೂಹಲ ಮತ್ತು ಮುತುವರ್ಜಿ ವಹಿಸಲಿದ್ದೀರಿ.

ಧನು: ವಿದೇಶಿ ಕಂಪೆನಿಯೊಂದರಲ್ಲಿ ಕಾರ್ಯನಿರ್ವಹಿಸುವ ವಿಚಾರದಲ್ಲಿ ಸ್ನೇಹಿತರು ಬಂಧು ಬಾಂಧವರೊಂದಿಗೆ ಚರ್ಚೆ ನಡೆಸಲಿದ್ದೀರಿ. ಹಣಕಾಸಿನ ವಿಚಾರದಲ್ಲಿ ಸ್ಥಿರತೆ ಕಾಪಾಡುವಿರಿ.


ಮಕರ: ಕೇಂದ್ರ ಸರ್ಕಾರದ ಹುದ್ದೆಯೊಂದು ದೊರಕುವ ಸಾಧ್ಯತೆ ಇದ್ದು, ದೂರದ ಪ್ರಯಾಣ ಮಾಡಬೇಕಾದೀತು. ಆದಾಯದಲ್ಲಿ ಹೆಚ್ಚಳದಿಂದಾಗಿ ನೆಮ್ಮದಿ ಮೂಡಿಬರಲಿದೆ.

ಕುಂಭ: ಚಿನ್ನ ಬೆಳ್ಳಿ ಮುಂತಾದ ಆಭರಣ ವ್ಯಾಪಾರಿಗಳಿಗೆ ವ್ಯವಹಾರ ಕುದುರುವುದು. ಕೃಷಿ ಕಾರ್ಯಗಳಿಗಾಗಿ ಧನ ವಿನಿಯೋಗ ಮಾಡಬೇಕಾದೀತು. ಸಿಹಿ ಪದಾರ್ಥಗಳ ವ್ಯಾಪಾರಸ್ಥರಿಗೆ ಲಾಭ.

ಮೀನ: ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ದೊರಕುವ ಸಾಧ್ಯತೆ ಇದ್ದು ಸ್ವಯಂ ತರಬೇತಿ ತರಗತಿಗಳನ್ನು ನಡೆಸುವ ಯೋಜನೆಯು ಕೈಗೂಡಲಿದೆ. ಬರಹಗಾರರಿಗೆ ಸ್ಪರ್ಧೆಯಲ್ಲಿ ಬಹುಮಾನ ಗೆಲ್ಲುವ ಅವಕಾಶ.

ನಿಮ್ಮ ಜನ್ಮದಿನ 28-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಪಿತ್ರಾರ್ಜಿತ ಆಸ್ತಿಗಳು ನಿಮ್ಮ ಕೈ ಸೇರುವ ಸಾಧ್ಯತೆ. ನಿಮ್ಮ ಜೀವನದ ಬಹುಮುಖ್ಯವಾದ ಹೊಸ ಯೋಜನೆಗಳನ್ನು ಈ ವರ್ಷದ ಆರಂಭದಲ್ಲಿಯೇ ಕೈಗೊಳ್ಳಲಿದ್ದೀರಿ. ಮಹಿಳಾ ಉದ್ಯಮಿಗಳಿಗೆ ಉತ್ತಮ ವರ್ಷವಾಗಿ ಪರಿಣಮಿಸಲಿದೆ.

ಷೇರುಪೇಟೆ ವಹಿವಾಟು 175



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	16,636
ಇಂದಿನ ಅಂತ್ಯ	16,705
▲	68
ದಿನದ ಗರಿಷ್ಠ	16,722

ವಿನಿಮಯ ದರ

$ ಡಾಲರ್	73.69
£ ಪೌಂಡ್	101.02
€ ಯುರೊ	86.61
¥ ಯೆನ್ (100ಕ್ಕೆ)	67.14

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹415

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1570)
ಸೋಯಾ (ರಿಫೈನ್ಡ್)	₹1400(1408)
ಸೂರ್ಯಕಾಂತಿ (ರಿಫೈನ್ಡ್)	₹1490 (1500)
ಪಾಮೋಲಿನ್	₹1270 (1270)

ಜಿಎಸ್‌ಟಿ: ಸೆ. 1ರಿಂದ ಹೊಸ ನಿಯಮ

ನವದೆಹಲಿ (ಪಿಟಿಐ): ಹಿಂದಿನ 2 ತಿಂಗಳುಗಳಲ್ಲಿ ಸತತವಾಗಿ ಜಿಎಸ್‌ಟಿಆರ್–3ಬಿ ವಿವರ ಸಲ್ಲಿಸದವರು, ತಾವು ಪೂರೈಕೆ ಮಾಡಿರುವ ವಸ್ತುಗಳ, ತಾವು ನೀಡಿದ ಸೇವೆಗಳ ವಿವರವನ್ನು ಜಿಎಸ್‌ಟಿಆರ್–1 ಮೂಲಕ ಸಲ್ಲಿಸುವ ಅವಕಾಶ ಸೆಪ್ಟೆಂಬರ್ 1ರಿಂದ ಇರುವುದಿಲ್ಲ. ವ್ಯಾಪಾರಿಗಳು ಪ್ರತಿ ತಿಂಗಳು ಜಿಎಸ್‌ಟಿಆರ್–1 ವಿವರಗಳನ್ನು 11ನೆಯ ತಾರೀಕಿನೊಳಗೆ ಸಲ್ಲಿಸುತ್ತಾರೆ. ತೆರಿಗೆ ಪಾವತಿಸುವ ಜಿಎಸ್‌ಟಿಆರ್–3ಬಿ ವಿವರವನ್ನು 20ರಿಂದ 24ನೆಯ ತಾರೀಕಿನೊಳಗೆ ಸಲ್ಲಿಸಲಾಗುತ್ತದೆ. 3 ತಿಂಗಳಿಗೆ ಒಮ್ಮೆ ವಿವರ ಸಲ್ಲಿಸುವವರಿಗೆ, ಹಿಂದಿನ ತೆರಿಗೆ ಅವಧಿಯಲ್ಲಿ ಜಿಎಸ್‌ಟಿಆರ್–3ಬಿ ಸಲ್ಲಿಸದಿದ್ದಲ್ಲಿ, ಜಿಎಸ್‌ಟಿಆರ್–1 ವಿವರ ಸಲ್ಲಿಸುವ ಅವಕಾಶ ನಿರಾಕರಿಸಲಾಗುತ್ತದೆ ಎಂದು ಜಿಎಸ್‌ಟಿ ನೆಟ್‌ವರ್ಕ್ ಸಂಸ್ಥೆ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

27-08-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1580)
ಒಂದು ವಾರದ ಡೆಲಿವರಿ	1615 (1575)
ಸೋಯಾ ಕಚ್ಚಾ	1370 (1372)
ಪಾಮ್ ವಾರದ ಡೆಲಿವರಿ	1268 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,900 (47,200)
ಬೆಳ್ಳಿ ಕೆ.ಜಿ
62,900 (63,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಪಿಎಲ್‌ನಿಂದ ಹೊಸ ಉತ್ಪನ್ನಗಳು

ಬೆಂಗಳೂರು: ಬಿಪಿಎಲ್ ಕಂಪನಿಯು 'ಹ್ಯಾಪಿ ಲಿಟಲ್ ಥಿಂಗ್ಸ್' ಹೆಸರಿನಲ್ಲಿ ಹೊಸ ಉತ್ಪನ್ನಗಳನ್ನು ಸಿದ್ಧಪಡಿಸಿದೆ. ಸಣ್ಣ ಸಣ್ಣ ಸಂಗತಿಗಳೇ ದೊಡ್ಡ ಬದಲಾವಣೆಯನ್ನು ತರುತ್ತವೆ ಎಂಬ ಮಾತಿನಿಂದ ಇವು ಸ್ಫೂರ್ತಿ ಪಡೆದಿವೆ.

ಆಧುನಿಕ ತಂತ್ರಜ್ಞಾನದ ಬಗೆಬಗೆಯ ಹವಾನಿಯಂತ್ರಕಗಳು, ದೂಳುನಿರೋಧಕ ಫ್ಯಾನ್‌ಗಳು ಗ್ರಾಹಕರಿಗೆ ಲಭ್ಯವಿವೆ. ನೇಚರ್‌ಫ್ರೆಷ್ ತಂತ್ರಜ್ಞಾನದ ರೆಫ್ರಿಜರೇಟರ್‌ಗಳಲ್ಲಿ ಇರಿಸಿದ ಆಹಾರವು ತಾಜಾ ಆಗಿರುತ್ತದೆ, ಅತ್ಯಂತ ಸ್ಪಷ್ಟವಾಗಿ ದೃಶ್ಯಗಳನ್ನು ತೋರಿಸುವ 4ಕೆ ಆ್ಯಂಡ್ರಾಯ್ಡ್ ಸ್ಮಾರ್ಟ್ ಟಿ.ವಿ.ಗಳು ಲಭ್ಯವಿವೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ.

ನೀರನ್ನು ಶೇ 30ರಷ್ಟು ಕಡಿಮೆ ಬಳಸುವ ವಾಷಿಂಗ್ ಮೆಷಿನ್‌ಗಳು, ಜನ ಇದ್ದಾಗ ತಾವಾಗಿಯೇ ಉರಿಯುವ ದೀಪಗಳು ಕೂಡ ಲಭ್ಯವಿವೆ. ಇವಲ್ಲದೆ, ಅಡುಗೆಮನೆಗೆ ಬೇಕಾಗುವ ಉಪಕರಣಗಳು ಹಾಗೂ ಗೃಹಬಳಕೆಯ ಇತರ ವಸ್ತುಗಳು ಕೂಡ ಇವೆ ಎಂದು ಕಂಪನಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1050
ಕಾಳು ಮೆಣಸು	395-400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಬೆಳ್ತಂಗಡಿ	
ಕೋಕ	17000-27000
ಹೊಸತು	24000-46000
ಹಳತು	43200-51000
ಭದ್ರಾವತಿ	
ರಾಶಿ	42199-49099
ಕುಮಟಾ	
ಚಿಪ್ಪು	32599-36019
ಕೋಕ	22509-33569
ಫ್ಯಾಕ್ಟರಿ	15699-21529
ಹಳೆಚಾಲಿ	42169-43119
ಹೊಸಚಾಲಿ	38599-41099
ಪುತ್ತೂರು	
ಕೋಕ	10500-26000
ಹೊಸತು	31500-46000
ಶಿವಮೊಗ್ಗ	
ಬೆಟ್ಟೆ	45059-48510
ರಾಶಿ	45099-48399
ಸರಕು	50100-78110
ಸಿದ್ದಾಪುರ	
ಬಿಳಿಗೋಟು	28099-35599
ಚಾಲಿ	38809-41299
ಕೋಕ	21899-34899
ಕೆಂಪುಗೋಟು	30089-32309
ರಾಶಿ	42869-45209
ತಟ್ಟಿಬೆಟ್ಟೆ	31899-41199
ಶಿರಸಿ	
ಬೆಟ್ಟೆ	28899-42139
ಬಿಳಿಗೋಟು	27611-37499
ಚಾಲಿ	38199-41619
ರಾಶಿ	27119-46099
ಯಲ್ಲಾಪುರ	
ಆಪಿ	48369-48369
ಬಿಳಿಗೋಟು	28899-35899
ಚಾಲಿ	36509-41440
ಕೋಕ	22899-32699
ಕೆಂಪುಗೋಟು	30691-35099
ರಾಶಿ	43910-47969
ತಟ್ಟಿಬೆಟ್ಟೆ	37161-43680
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	230-450
ದ್ವಿತಳಿ (ಬಿ.ವಿ)	250-588

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,750	12,600	12,750	185.65ಸೆಂಟ್ಸ್
ಎಸಿ	6,150	4,800	5,125	
ಆರ್‌ಪಿ	6,150	6,000	6,200	ಲಂಡನ್
ಆರ್‌ಸಿ	3,510	3,500	3,580	1987ಡಾಲರ್ಸ್

₹ 1 ಲಕ್ಷ ಕೋಟಿ ಹೂಡಿಕೆ ಮಾಡಲಿರುವ ಐಒಸಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಮುಂದಿನ ನಾಲ್ಕರಿಂದ ಐದು ವರ್ಷಗಳಲ್ಲಿ ಒಟ್ಟು ₹ 1 ಲಕ್ಷ ಕೋಟಿ ಹೂಡಿಕೆ ಮಾಡಲಿದೆ. ತೈಲ ಸಂಸ್ಕರಣಾ ಸಾಮರ್ಥ್ಯ ಹೆಚ್ಚಿಸಲು ಕಂಪನಿಯು ಈ ಹೂಡಿಕೆ ಮಾಡಲಿದ್ದು, ಕೆಲವು ವರ್ಷಗಳವರೆಗೆ ತೈಲ ಬೇಡಿಕೆ ಹೆಚ್ಚುತ್ತ ಸಾಗಲಿದೆ ಎಂದು ಅಂದಾಜಿಸಿದೆ.

ಪೆಟ್ರೋಲ್ ಬೇಡಿಕೆಯು ಕೋವಿಡ್ ಪೂರ್ವದ ಸ್ಥಿತಿಗೆ ಈಗಾಗಲೇ ಬಂದಿದೆ. ಡೀಸೆಲ್ ಬೇಡಿಕೆಯು ದೀಪಾವಳಿ ಹಬ್ಬದ ಹೊತ್ತಿಗೆ ಕೋವಿಡ್‌ಗೂ ಮೊದಲಿನ ಹಂತವನ್ನು ತಲುಪಬಹುದು ಎಂದು ಕಂಪನಿಯ ಅಧ್ಯಕ್ಷ ಎಸ್. ಎಂ. ವೈದ್ಯ ಅವರು ಷೇರುದಾರರ ವಾರ್ಷಿಕ ಸಭೆಯಲ್ಲಿ ಹೇಳಿದರು. 'ದೇಶವು ಈಗ 25 ಕೋಟಿ ಟನ್ ತೈಲ ಬಳಕೆ ಮಾಡುತ್ತಿದೆ. ಇದು 2040ರ ವೇಳೆಗೆ 40 ಕೋಟಿಯಿಂದ 50 ಕೋಟಿ ಟನ್‌ವರೆಗೆ ಹೆಚ್ಚಲಿದೆ ಎಂದು ಬೇರೆ ಬೇರೆ ಸಂಸ್ಥೆಗಳು ಅಂದಾಜಿಸಿವೆ' ಎಂದರು.

ಹೆಚ್ಚಲಿರುವ ಬೇಡಿಕೆಗೆ ಸ್ಪಂದಿಸಲು ಕಂಪನಿಯು ಹೊಸ ಯೋಜನೆಗಳನ್ನು ಶುರು ಮಾಡುತ್ತಿದೆ ಎಂದು ವೈದ್ಯ ತಿಳಿಸಿದರು. ಕಚ್ಚಾ ತೈಲವನ್ನು ಪೆಟ್ರೋಲ್, ಡೀಸೆಲ್ ಆಗಿ ಪರಿವರ್ತಿಸುವ ಒಟ್ಟು 11 ತೈಲ ಸಂಸ್ಕರಣಾಗಾರಗಳನ್ನು ಇಂಡಿಯನ್ ಆಯಿಲ್ ಕಂಪನಿ ಹೊಂದಿದೆ.

ದಾಖಲೆಯ ಮಟ್ಟಕ್ಕೆ ಸೆನ್ಸೆಕ್ಸ್, ಬಂಡವಾಳ ಮೌಲ್ಯ

ಮುಂಬೈ/ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 175 ಅಂಶ ಏರಿಕೆ ಕಂಡಿತು, ಇದೇ ಮೊದಲ ಬಾರಿಗೆ 56 ಸಾವಿರ ಅಂಶಗಳ ಗಡಿಯನ್ನು ದಾಟಿ ವಹಿವಾಟು ಕೊನೆಗೊಳಿಸಿತು. ಮೂಲಸೌಕರ್ಯ, ಹಣಕಾಸು ಮತ್ತು ಫಾರ್ಮಾ ವಲಯದ ಷೇರುಗಳ ಖರೀದಿ ಜೋರಾಗಿ ನಡೆದಿದ್ದು ಸೆನ್ಸೆಕ್ಸ್‌ನ ಏರಿಕೆಗೆ ಕಾರಣವಾಯಿತು.



ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಒಂದೇ ದಿನದಲ್ಲಿ 53 ಪೈಸೆಯಷ್ಟು ಮೌಲ್ಯ ಹೆಚ್ಚಿಸಿಕೊಂಡಿತು. ಇದು ಕೂಡ ಹೂಡಿಕೆದಾರರ ಉತ್ಸಾಹವನ್ನು ಹೆಚ್ಚಿಸಿತು ಎಂದು ವರ್ತಕರು ಹೇಳಿದ್ದಾರೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 68 ಅಂಶ ಏರಿಕೆ ಕಂಡಿತು. ನಿಫ್ಟಿಯು ದಾಖಲೆಯ 16,705 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

ಈ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 795 ಅಂಶ, ನಿಫ್ಟಿ 254 ಅಂಶ ಏರಿಕೆ ಕಂಡಿವೆ. 'ಮಾರುಕಟ್ಟೆಗಳು ಈವರೆಗೆ ಸಾಧಿಸಿರುವ ಮುನ್ನಡೆಗೆ ಕಾರಣ ಅರ್ಥ ವ್ಯವಸ್ಥೆಯ ಹಾಗೂ ಕಾರ್ಪೊರೇಟ್ ಕಂಪನಿಗಳ ಸಾಧನೆಯ ಬಗ್ಗೆ ಇರುವ ನಿರೀಕ್ಷೆಗಳು' ಎಂದು ಎಂಕೆ ವೆಲ್ತ್ ಮ್ಯಾನೇಜ್‌ಮೆಂಟ್ ಕಂಪನಿಯ ಸಂಶೋಧನಾ ವಿಭಾಗದ ಮುಖ್ಯಸ್ಥ ಜೋಸೆಫ್ ಥಾಮಸ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಏರಿಕೆ ಕಂಡವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇ 0.94ರಷ್ಟು ಹೆಚ್ಚಾಗಿ, 71.74 ಡಾಲರ್‌ಗೆ ತಲುಪಿದೆ.

ದಾಖಲೆಯ ಮಟ್ಟಕ್ಕೆ ಮಾರುಕಟ್ಟೆ ಮೌಲ್ಯ: ಸೆನ್ಸೆಕ್ಸ್ ಸಾರ್ವಕಾಲಿಕ ದಾಖಲೆಯ ಮಟ್ಟವನ್ನು ತಲುಪಿರುವುದರ ಜೊತೆಯಲ್ಲೇ ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ಕೂಡ ದಾಖಲೆಯ ಮಟ್ಟವನ್ನು ತಲುಪಿದೆ. ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ ಈಗ ₹ 243 ಲಕ್ಷ ಕೋಟಿ ಆಗಿದೆ. ಎರಡು ದಿನಗಳಿಂದ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಭಾರಿ ವಹಿವಾಟಿನ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ₹ 2.20 ಲಕ್ಷ ಕೋಟಿ ಹೆಚ್ಚಾಗಿದೆ.

ಶ್ರೀಲಂಕಾ: ಸೆ. 6ರವರೆಗೆ ಲಾಕ್‌ಡೌನ್ ವಿಸ್ತರಣೆ

ಕೊಲಂಬೊ (ಪಿಟಿಐ): ಕೋವಿಡ್‌ನಿಂದಾಗಿ ಸಾವಿನ ಸಂಖ್ಯೆ ಹೆಚ್ಚುತ್ತಿರುವ ಕಾರಣ ಶ್ರೀಲಂಕಾ ಸರ್ಕಾರವು ಸೆ. 6ರ ತನಕ ರಾಷ್ಟ್ರವ್ಯಾಪಿ ಲಾಕ್‌ಡೌನ್ ವಿಸ್ತರಿಸಿದೆ.

ಸಕ್ರಿಯ ಪ್ರಕರಣ 18,970ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ ಕೋವಿಡ್ ಹೊಸ ಪ್ರಕರಣಗಳಿಗಿಂತ ಚೇತರಿಕೆ ಹೊಂದಿದ ಸೋಂಕಿತರ ಸಂಖ್ಯೆ ಹೆಚ್ಚಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 18,970ಕ್ಕೆ ಇಳಿಕೆ ಕಂಡಿದೆ.

ಒಂದು ದಿನದ ಅವಧಿಯಲ್ಲಿ 1.86 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 1,301 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 0.69 ರಷ್ಟು ವರದಿಯಾಗಿದೆ. 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಯಚೂರಿನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 248, ಕೊಡಗಿನಲ್ಲಿ 78 ಹಾಗೂ ಮೈಸೂರಿನಲ್ಲಿ 72 ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 386, ಹಾಸನದಲ್ಲಿ 117 ಹಾಗೂ ಉಡುಪಿಯಲ್ಲಿ 106 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯಲ್ಲಿವೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಸಂಖ್ಯೆ 29.44 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 11 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಹಾಸನದಲ್ಲಿ 3, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೊಡಗು ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಡುಪಿ ಸೇರಿದಂತೆ ಆರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.30 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,248ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,614 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.88 ಲಕ್ಷ ದಾಟಿದೆ.

4 ಕೋಟಿ ಡೋಸ್ ಸನಿಹ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ ಒಂದೇ ದಿನ 9.55 ಲಕ್ಷ ಮಂದಿಗೆ ಕೋವಿಡ್ ಲಸಿಕೆ ವಿತರಿಸಲಾಗಿದೆ. ರಾಜ್ಯದಲ್ಲಿ ಈವರೆಗೆ ವಿತರಿಸಲಾದ ಲಸಿಕೆಯ ಒಟ್ಟು ಡೋಸ್‌ಗಳು 4 ಕೋಟಿಯತ್ತ (3.98 ಕೋಟಿ) ದಾಪುಗಾಲು ಇರಿಸಿದೆ.

ಈವರೆಗೆ 3.02 ಕೋಟಿ ಮಂದಿ ಮೊದಲ ಡೋಸ್ ಹಾಗೂ 96.12 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 6,648 ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ 7,102 ಕೇಂದ್ರಗಳಲ್ಲಿ ಶುಕ್ರವಾರ ಲಸಿಕೆ ವಿತರಿಸಲಾಗಿದೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ದಿನವೊಂದಕ್ಕೆ ವಿತರಿಸುತ್ತಿದ್ದ ಲಸಿಕೆಯ ಡೋಸ್‌ಗಳ ಸಂಖ್ಯೆಯನ್ನು ಏರಿಸಲಾಗಿದೆ. ಕಳೆದೊಂದು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 2.75 ಲಕ್ಷ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. 18ರಿಂದ 44 ವರ್ಷದವರಲ್ಲಿ 1.48 ಕೋಟಿ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 17.63 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆಯನ್ನು ಈಗಾಗಲೇ ಹಾಕಿಸಿಕೊಂಡಿದ್ದಾರೆ.

ಕೇರಳ: ಸತತ 3ನೇ ದಿನವೂ 30 ಸಾವಿರ ಪ್ರಕರಣ

ತಿರುವನಂತಪುರ(ಪಿಟಿಐ): ಕೇರಳದಲ್ಲಿ ಸತತ ಮೂರನೇ ದಿನವೂ ಸುಮಾರು 30 ಸಾವಿರ ಕೋವಿಡ್ ಸೋಂಕು ಪ್ರಕರಣಗಳು ಪತ್ತೆಯಾಗಿವೆ.

ಶುಕ್ರವಾರ 32,801 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದ್ದು, 179 ಮಂದಿ ಸಾವಿಗೀಡಾಗಿದ್ದಾರೆ. ಇದರಿಂದ, ಕೇರಳದಲ್ಲಿ ಇದುವರೆಗೆ ಸಾವಿಗೀಡಾದವರ ಸಂಖ್ಯೆ 20,313ಕ್ಕೇರಿದಂತಾಗಿದೆ.

ಬುಧವಾರ 31,445 ಹಾಗೂ ಗುರುವಾರದಂದು 30,007 ಸೋಂಕು ಪ್ರಕರಣಗಳು ದೃಢಪಟ್ಟಿದ್ದವು.

ಕೇರಳದಲ್ಲಿ ಪಾಸಿಟಿವಿಟಿ ದರ ಶೇಕಡ 19.22ಕ್ಕೆ ತಲುಪಿದೆ. ಆಗಸ್ಟ್ 26ರಂದು ಇದು 18.03 ಆಗಿತ್ತು. ಸದ್ಯ 1.95 ಲಕ್ಷ ಸಕ್ರಿಯ ಪ್ರಕರಣಗಳಿವೆ. ಮಲಪ್ಪುರಂ ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಈ ಜಿಲ್ಲೆಯಲ್ಲಿ 4,032 ಪ್ರಕರಣಗಳು ದೃಢಪಟ್ಟಿವೆ.



ಅಫ್ಗಾನಿಸ್ತಾನ ಸ್ವಾತಂತ್ರ್ಯದ ಅವಸಾನ

ಕಾಬೂಲ್ ವಿಮಾನ ನಿಲ್ದಾಣದ ಬಳಿ ಕಿಕ್ಕಿರಿದು ಸೇರಿದ ಜನತೆ • ದೇಶ ತೊರೆದವರ ಸಂಖ್ಯೆ ಲಕ್ಷಕ್ಕೂ ಹೆಚ್ಚು

ಸ್ಫೋಟದ ಬಳಿಕ ಜನರ ತೆರವು ಬಿರುಸು

ಕಾಬೂಲ್ (ಎಪಿ/ರಾಯಿಟರ್ಸ್/ಎಎಫ್‌ಪಿ): ಬಾಂಬ್ ದಾಳಿ ನಡೆದ ಕಾರಣ ಹಲವು ದೇಶಗಳು ತೆರವು ಕಾರ್ಯಾಚರಣೆಯನ್ನು ಚುರುಕುಗೊಳಿಸಿವೆ. ಇನ್ನೆರಡು ದಿನಗಳಲ್ಲಿ ತೆರವು ಕಾರ್ಯಾಚರಣೆಯನ್ನು ಮುಗಿಸುವುದಾಗಿ ಬ್ರಿಟನ್ ಹೇಳಿದೆ. ಅಮೆರಿಕವು ತನ್ನ ತೆರವು ಕಾರ್ಯಾಚರಣೆಯನ್ನು ಬಿರುಸಾಗಿಸಿದೆ.

ಶುಕ್ರವಾರ ಬೆಳಿಗ್ಗೆವರೆಗೆ 1 ಲಕ್ಷ ಜನರನ್ನು ಕಾಬೂಲ್‌ನಿಂದ ತೆರವು ಮಾಡಲಾಗಿದೆ. ಉಳಿದಿರುವ ಕೆಲವೇ ಮಂದಿಯನ್ನು ಗಡುವಿನೊಳಗೆ ತೆರವು ಮಾಡಲಾಗುತ್ತದೆ ಎಂದು ಅಮೆರಿಕವು ಹೇಳಿದೆ.

ಬಾಂಬ್ ದಾಳಿ ನಡೆದ ಮರುದಿನವಾದ ಶುಕ್ರವಾರ ಸಾವಿರಾರು ಮಂದಿ ವಿಮಾನ ನಿಲ್ದಾಣದ ಸುತ್ತ ಸೇರಿದ್ದರು. ತೆರವು ಕಾರ್ಯಾಚರಣೆ ಚುರುಕುಗೊಳಿಸಿರುವ ಕಾರಣ, ಅಫ್ಗಾನಿಸ್ತಾನ ತೊರೆಯಲು ಹಲವು ಮಂದಿ ಮುಂದಾಗಿದ್ದಾರೆ.

- ತೆರವು ಕಾರ್ಯಾಚರಣೆಯನ್ನು ನಡೆಸುತ್ತಿದ್ದೇವೆ. ಆದರೆ ಶೀಘ್ರವೇ ಕಾರ್ಯಾಚರಣೆ ಸ್ಥಗಿತಗೊಳಿಸುವುದಾಗಿ ಫ್ರಾನ್ಸ್ ಸರ್ಕಾರ ಹೇಳಿದೆ
- ಅಫ್ಗಾನಿಸ್ತಾನದಲ್ಲಿರುವ ಜಪಾನ್ ಪ್ರಜೆಗಳು ಮತ್ತು ರಾಜತಾಂತ್ರಿಕ ಸಿಬ್ಬಂದಿಯನ್ನು ತೆರವು ಮಾಡಲು ಯತ್ನಿಸುತ್ತಿದ್ದೇವೆ. ಆದರೆ ತೆರವು ಕಾರ್ಯಾಚರಣೆ ಎಷ್ಟು ದಿನ ನಡೆಯಲಿದೆ ಎಂಬುದು ಗೊತ್ತಿಲ್ಲ ಎಂದು ಜಪಾನ್ ಸರ್ಕಾರ ಹೇಳಿದೆ
- ತೆರವು ಕಾರ್ಯಾಚರಣೆಯನ್ನು ಜರ್ಮನಿ ಶುಕ್ರವಾರ ಸ್ಥಗಿತಗೊಳಿಸಿದೆ. ಬೆಲ್ಜಿಯಂ ಮತ್ತು ಸ್ವಿಟ್ಜರ್ಲೆಂಡ್ ಪ್ರಜೆಗಳನ್ನು ಜರ್ಮನ್ ಸೇನೆ ತೆರವು ಮಾಡಬೇಕಿತ್ತು. ಆದರೆ ಈಗ ಅಮೆರಿಕವು ಬೆಲ್ಜಿಯಂ ಮತ್ತು ಸ್ವಿಟ್ಜರ್ಲೆಂಡ್ ಪ್ರಜೆಗಳನ್ನು ತೆರವು ಮಾಡಲಿದೆ
- ಇಟಲಿ ತೆರವು ಕಾರ್ಯಾಚರಣೆಯನ್ನು ಶುಕ್ರವಾರ ಸ್ಥಗಿತಗೊಳಿಸಿದೆ
- ಅಫ್ಗನ್‌ನಲ್ಲಿರುವ ತನ್ನ ಎಲ್ಲಾ ಪ್ರಜೆಗಳು ಮತ್ತು ತೆರವಿಗೆ ಗುರುತಿಸಲಾಗಿದ್ದವರನ್ನು ಪೂರ್ಣ ಪ್ರಮಾಣದಲ್ಲಿ ತೆರವು ಮಾಡಲು ಸಾಧ್ಯವಾಗಿಲ್ಲ ಎಂದು ನ್ಯೂಜಿಲೆಂಡ್ ಹೇಳಿದೆ. ಆದರೆ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಿದೆ
- ಅಫ್ಗಾನಿಸ್ತಾನದಲ್ಲಿರುವ ಹವಾಮಾನ ವೈಪರೀತ್ಯ ಕಾರ್ಯಕರ್ತರನ್ನು ಸಂಪೂರ್ಣವಾಗಿ ತೆರವು ಮಾಡಬೇಕು ಎಂದು ಗ್ರೆಟಾ ಥುನ್‌ಬರ್ಗ್ ಜಾಗತಿಕ ಸಮುದಾಯಕ್ಕೆ ಮನವಿ ಮಾಡಿದ್ದಾರೆ
- ತೆರವು ಕಾರ್ಯಾಚರಣೆಯನ್ನು ಸ್ವೀಡನ್ ಸ್ಥಗಿತಗೊಳಿಸಿದೆ



ಗುರುವಾರ ಬಾಂಬ್ ದಾಳಿ ನಡೆಯುವುದಕ್ಕೂ ಕೆಲವು ನಿಮಿಷಗಳ ಮೊದಲು ನೂರಾರು ಜನರು ಕಿಕ್ಕಿರಿದು ಸೇರಿದ್ದರು

ರಾಯಿಟರ್ಸ್ ಚಿತ್ರ (ವಿಡಿಯೊ ಸ್ಕ್ರೀನ್‌ಶಾಟ್)

ರಾಕೆಟ್ ದಾಳಿಯ ಭೀತಿ

ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆ ಹೊತ್ತಿದೆ. ಇಸ್ಲಾಮಿಕ್ ಸ್ಟೇಟ್‌ನ ಅಫ್ಗನ್ ಘಟಕವಾದ 'ಇಸ್ಲಾಮಿಕ್ ಸ್ಟೇಟ್-ಖೋರಸಾನ್' (ಐಎಸ್-ಕೆ) ಈ ದಾಳಿಯನ್ನು ನಡೆಸಿದೆ ಎಂದು ಐಎಸ್ ಹೇಳಿದೆ. ಈ ಘಟಕವು 2015ರಿಂದ ಕಾರ್ಯನಿರ್ವಹಿಸುತ್ತಿದೆ.

ಆದರೆ ದಾಳಿಯ ಸ್ವರೂಪ ಎಂಥದ್ದು ಎಂಬುದರ ಬಗ್ಗೆ ಹಲವು ಪ್ರಶ್ನೆಗಳು ಮೂಡಿವೆ. 'ಆರಂಭದಲ್ಲಿ ಇದು ಆತ್ಮಹತ್ಯಾ ಬಾಂಬ್ ದಾಳಿ ಎಂದು ಗುರುತಿಸಲಾಗಿತ್ತು. ಆದರೆ, ಎರಡೂ ಬಾಂಬ್ ದಾಳಿಗಳು ಆತ್ಮಹತ್ಯಾ ಬಾಂಬ್ ದಾಳಿ ಆಗಿರುವ ಸಾಧ್ಯತೆ ಇಲ್ಲ. ಮತ್ತೊಂದು ಬಾಂಬ್ ಅನ್ನು ಬ್ಯಾಗ್‌ನಲ್ಲಿ ಅಥವಾ ವಾಹನದಲ್ಲಿ ಇರಿಸಿ ಸ್ಫೋಟಿಸಿರುವ ಸಾಧ್ಯತೆ ಇದೆ' ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಹೇಳಿದೆ.

'ಬಾಂಬ್ ದಾಳಿ ವೇಳೆ ಸಂಭವಿಸಿದ, ಗುಂಡಿನ ದಾಳಿಯನ್ನು ನಡೆಸಿದವರು ಯಾರು ಎಂಬುದು ಗೊತ್ತಾಗಿಲ್ಲ. ಬಹುಶಃ ಬಾಂಬ್ ದಾಳಿಯ ನಂತರ ಉಂಟಾದ ನೂಕುನುಗ್ಗಲನ್ನು ಚದುರಿಸಲು ತಾಲಿಬಾನಿಗಳೇ ಗಾಳಿಯಲ್ಲಿ ಗುಂಡುಹಾರಿಸಿರುವ ಸಾಧ್ಯತೆ ಇದೆ' ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಶಂಕೆ ವ್ಯಕ್ತಪಡಿಸಿದೆ.

'ಇಸ್ಲಾಮಿಕ್ ಸ್ಟೇಟ್ ಉಗ್ರರು ತಾಲಿಬಾನ್ ಅನ್ನೂ ವಿರೋಧಿಸುತ್ತಾರೆ, ಪಾಶ್ಚಿಮಾತ್ಯ ದೇಶಗಳನ್ನೂ ದ್ವೇಷಿಸುತ್ತಾರೆ. ಹೀಗಾಗಿ ತಾಲಿಬಾನ್ ಮತ್ತು ಅಮೆರಿಕ-ಮಿತ್ರ ರಾಷ್ಟ್ರಗಳ ಸೈನಿಕರನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಿದ್ದಾರೆ. ಈಗ ಮತ್ತಷ್ಟು ದಾಳಿ ನಡೆಸುವ ಸಾಧ್ಯತೆ. ಈ ಬಾರಿ ರಾಕೆಟ್ ಮತ್ತು ಬಾಂಬ್ ತುಂಬಿದ ಕಾರನ್ನು ನುಗ್ಗಿಸುವ ಸಾಧ್ಯತೆ ಇದೆ' ಎಂದು ಅಮೆರಿಕ ಮತ್ತೆ ಎಚ್ಚರಿಕೆ ನೀಡಿದೆ.

ಅಮೆರಿಕ ಎಡವಟ್ಟು

ತಾಲಿಬಾನ್ ವಿರುದ್ಧ ಹೋರಾಡಲು ಅಮೆರಿಕಕ್ಕೆ ನೆರವಾಗಿದ್ದ ಅಫ್ಗನ್ ಪ್ರಜೆಗಳ ವಿವರವನ್ನು ಅಮೆರಿಕವೇ ಈಗ ಪರೋಕ್ಷವಾಗಿ ತಾಲಿಬಾನ್‌ಗೆ ನೀಡಿದೆ.

ಅಫ್ಗಾನಿಸ್ತಾನದಲ್ಲಿರುವ ಅಮೆರಿಕದ ರಾಯಭಾರ ಕಚೇರಿಗಳನ್ನು ಅಮೆರಿಕವು ಇದ್ದ ಹಾಗೆಯೇ ಬಿಟ್ಟುಹೋಗಿದೆ. ಸಿಬ್ಬಂದಿಯನ್ನು ಮಾತ್ರವೇ ತೆರವು ಮಾಡಿದ್ದು, ದಾಖಲೆ ಪತ್ರಗಳು ಮತ್ತು ದತ್ತಾಂಶಗಳನ್ನು ಬಿಟ್ಟುಬಂದಿದೆ. ಈ ದಾಖಲೆ ಪತ್ರಗಳು ಈಗ ತಾಲಿಬಾನ್‌ನ ವಶವಾಗಿವೆ. ಈ ದಾಖಲೆ ಪತ್ರಗಳನ್ನು ಬಳಸಿಕೊಂಡು ತಾಲಿಬಾನ್, ಈ ಜನರ ಮೇಲೆ ಸೇಡು ತೀರಿಸಿಕೊಳ್ಳುವ ಅಪಾಯವಿದೆ ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ತಾಲಿಬಾನ್ ವಿರುದ್ಧ ಕೆಲಸ ಮಾಡಿದ್ದವರ ಮೇಲೆ ಸೇಡು ತೀರಿಸಿಕೊಳ್ಳುವುದಿಲ್ಲ ಎಂದು ತಾಲಿಬಾನ್ ವಕ್ತಾರರು ಹೇಳಿದ್ದಾರೆ. ಆದರೆ ತಾಲಿಬಾನಿಗಳು ತಮ್ಮ ವಿರುದ್ಧ ಕೆಲಸ ಮಾಡಿದ್ದವರಿಗಾಗಿ, ಕಾಬೂಲ್‌ನಲ್ಲಿ ಮನೆ ಮನೆ ಹುಡುಕುತ್ತಿದ್ದಾರೆ. ಈಗ ತಮ್ಮ ವಿರುದ್ಧ ಕೆಲಸ ಮಾಡಿದವರ ಸಂಪೂರ್ಣ ವಿವರ ಅವರಿಗೆ ದೊರೆತಿರುವ ಕಾರಣ, ಸೇಡಿನ ಕಾರ್ಯಾಚರಣೆ ತೀವ್ರವಾಗುವ ಅಪಾಯವಿದೆ ಎಂದು ಇಲ್ಲಿನ ಮಾಧ್ಯಮಗಳು ಕಳವಳ ವ್ಯಕ್ತಪಡಿಸಿವೆ.

ಪ್ರತೀಕಾರ ಖಂಡಿತ: ಬೈಡನ್

ಬಾಂಬ್ ದಾಳಿಯನ್ನು ಹಲವು ದೇಶಗಳು ಖಂಡಿಸಿವೆ. ಆದರೆ ಅಮೆರಿಕವು ಪ್ರತೀಕಾರದ ಮಾತುಗಳನ್ನಾಡಿದೆ. ಜಪಾನ್, ಜರ್ಮನಿ, ರಷ್ಯಾ, ಫ್ರಾನ್ಸ್, ಟರ್ಕಿ ಈ ದಾಳಿಯನ್ನು ಖಂಡಿಸಿವೆ.

'ನಮ್ಮ ಮೇಲೆ ದಾಳಿ ನಡೆಸಿದ್ದ ಅಲ್-ಕೈದಾ ಉಗ್ರ ಒಸಾಮಾ ಬಿನ್ ಲಾಡೆನ್‌ನನ್ನು ಮುಗಿಸಿದೆವು. ಅಲ್-ಕೈದಾವನ್ನೂ ಹತ್ತಿಕ್ಕಿದೆವು. ಈಗ ನಮ್ಮ ಸೈನಿಕರನ್ನು ಗುರಿ ಮಾಡಿಕೊಂಡು ದಾಳಿ ನಡೆಸಿರುವ ಇಸ್ಲಾಮಿಕ್ ಸ್ಟೇಟ್ ಉಗ್ರರನ್ನು ಮರೆಯುವುದಿಲ್ಲ. ಈ ದಾಳಿಗೆ ತಕ್ಕ ಉತ್ತರ ನೀಡುತ್ತೇವೆ. ನಿಮ್ಮನ್ನು ಬೇಟೆಯಾಡುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಟಿ.ವಿ ಭಾಷಣದಲ್ಲಿ ಘೋಷಿಸಿದ್ದಾರೆ.

'ವಿಮಾನ ನಿಲ್ದಾಣದ ಮೇಲಿನ ದಾಳಿ ಅತ್ಯಂತ ಗಂಭೀರವಾದುದು. ಅಲ್ಲಿನ ಸ್ಥಿತಿ ಎಷ್ಟು ಅಪಾಯಕಾರಿಯಾಗಿದೆ ಎಂಬುದನ್ನು ಈ ದಾಳಿ ತೋರಿಸಿದೆ' ಎಂದು ಚೀನಾ ವಿದೇಶಾಂಗ ಸಚಿವಾಲಯ ಕಳವಳ ವ್ಯಕ್ತಪಡಿಸಿದೆ.



ಪುನರ್ ಮಿಲನ.. 2009ರಿಂದಲೇ ಫ್ರಾನ್ಸ್‌ನಲ್ಲಿ ನೆಲೆಸಿರುವ ಕಲಾವಿದೆ ಶಕೀಬಾ ದಾವೂದ್ ಅವರು 12 ವರ್ಷಗಳ ಬಳಿಕ ತಮ್ಮ ಸಹೋದರಿ ರೀದಾ ಮತ್ತು ತಾಯಿ ಖಾದಿರಾ ಅವರ ಜತೆ ಸೇರಿಕೊಂಡ ಕ್ಷಣ. ಅಫ್ಗಾನಿಸ್ತಾನವು ತಾಲಿಬಾನ್ ಕೈಸೇರಿದ ಬಳಿಕ ನಡೆದ ತೆರವು ಕಾರ್ಯಾಚರಣೆಯಲ್ಲಿ ರೀದಾ ಮತ್ತು ಖಾದಿರಾ ಅವರೂ ದೇಶ ತೊರೆದು ಫ್ರಾನ್ಸ್ ತಲುಪಿದ್ದಾರೆ

ರಾಯಿಟರ್ಸ್ ಚಿತ್ರ

ಭಾರತದತ್ತ ಐಎಸ್‌ಕೆ

ನವದೆಹಲಿ: 'ಕಾಬೂಲ್ ವಿಮಾನ ನಿಲ್ದಾಣದಲ್ಲಿ ಬಾಂಬ್ ದಾಳಿ ನಡೆಸಿದ ಇಸ್ಲಾಮಿಕ್ ಸ್ಟೇಟ್-ಖೋರಸಾನ್ (ಐಎಸ್-ಕೆ) ಘಟಕವು ಮುಂದಿನ ದಿನಗಳಲ್ಲಿ ಭಾರತದಲ್ಲೂ ನೆಲೆಯೂರುವ ಯೋಜನೆ ಹಾಕಿಕೊಂಡಿದೆ. ಆ ಮೂಲಕ ಭಾರತದಲ್ಲೂ ಇಸ್ಲಾಂ ರಾಷ್ಟ್ರ ಸ್ಥಾಪನೆಯ ಗುರಿ ಹೊಂದಿದೆ ಎಂದು ಗುಪ್ತಚರ ಇಲಾಖೆ ಮಾಹಿತಿ ನೀಡಿದೆ' ಎಂದು ಎನ್‌ಡಿಟಿವಿ ವರದಿ ಮಾಡಿದೆ.

2015ರಿಂದ ಸಕ್ರಿಯವಾಗಿರುವ ಈ ಘಟಕವು ಈಗ ಮಧ್ಯ ಏಷ್ಯಾದ ದೇಶಗಳಲ್ಲಿ ತನ್ನ ನೆಲೆಯನ್ನು ಊರಲು ಯತ್ನಿಸುತ್ತಿದೆ. ಈಗಾಗಲೇ ಮಧ್ಯ ಏಷ್ಯಾದ ದೇಶಗಳಿಗೆ ಈ ಘಟಕದ ಉಗ್ರರು ನುಸುಳಿದ್ದಾರೆ. ಅಲ್ಲೆಲ್ಲಾ ಗಟ್ಟಿಯಾಗಿ ನೆಲೆಯೂರಿದ ನಂತರ, ಭಾರತಕ್ಕೂ ತಮ್ಮ ಕಾರ್ಯಾಚರಣೆ ವಿಸ್ತರಿಸಲು ಯೋಜನೆ ಹಾಕಿಕೊಂಡಿದ್ದಾರೆ.

ಈ ಘಟಕವು ಈಗಾಗಲೇ ಪಾಕಿಸ್ತಾನದ ಜೈಶ್-ಎ-ಮೊಹಮ್ಮದ್ ಸೇರಿದಂತೆ ಹಲವು ಉಗ್ರ ಸಂಘಟನೆಗಳ ಜತೆಗೆ ಸಖ್ಯ ಬೆಳೆಸಿದೆ ಎಂದು ಗುಪ್ತಚರ ಇಲಾಖೆ ಹೇಳಿದೆ ಎಂದು ಎನ್‌ಡಿಟಿವಿ ವಿವರಿಸಿದೆ.

ಭಾರತದೊಂದಿಗೆ ಉತ್ತಮ ಬಾಂಧವ್ಯ: ತಾಲಿಬಾನ್


ಇಸ್ಲಾಮಾಬಾದ್ (ಪಿಟಿಐ): ಭಾರತ ಸೇರಿದಂತೆ ಎಲ್ಲಾ ದೇಶಗಳೊಂದಿಗೆ ತಾಲಿಬಾನ್ ಉತ್ತಮ ಬಾಂಧವ್ಯ ಹೊಂದಲು ಬಯಸಿದೆ ಎಂದು ಸಂಘಟನೆಯ ವಕ್ತಾರ ಜಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.

ಅಫ್ಗಾನಿಸ್ತಾನವನ್ನು ಯಾವುದೇ ದೇಶದ ವಿರುದ್ಧ ಬಳಸಲು ಅನುಮತಿ ನೀಡುವುದಿಲ್ಲ ಎಂದು ತಾಲಿಬಾನ್ ಉನ್ನತ ಅಧಿಕಾರಿಯೊಬ್ಬರು ಪ್ರತಿಜ್ಞೆ ಮಾಡಿರುವುದಾಗಿ ಅವರು ಸ್ಪಷ್ಟಪಡಿಸಿದರು.

'ಈ ಪ್ರದೇಶದ ಪ್ರಮುಖ ಭಾಗವಾಗಿರುವ ಭಾರತ ಸೇರಿ ಎಲ್ಲ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಬಯಸುತ್ತೇವೆ. ಅಫ್ಗನ್ ಜನರ ಹಿತಾಸಕ್ತಿ ಅನುಸಾರ ಭಾರತವು ತನ್ನ ನೀತಿಯನ್ನು ರೂಪಿಸಬೇಕು ಎಂದು ಆಶಿಸುತ್ತೇವೆ' ಎಂದು ಮುಜಾಹಿದ್ ಹೇಳಿರುವುದಾಗಿ ಪಾಕಿಸ್ತಾನದ ಎಆರ್‌ವೈ ಸುದ್ದಿ ವಾಹಿನಿ ಬುಧವಾರ ವರದಿ ಮಾಡಿದೆ.

ಭಾರತ ಮತ್ತು ಪಾಕಿಸ್ತಾನ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಒಟ್ಟಿಗೆ ಕುಳಿತು ಚರ್ಚಿಸಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು ಎಂದು ಸುದ್ದಿವಾಹಿನಿ ಹೇಳಿದೆ.

ರಾಹುಲ್‌ಗಾಂಧಿ ಬಘೇಲ್ ಭೇಟಿ



ನವದೆಹಲಿ (ಪಿಟಿಐ): ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಅವರ ನಿವಾಸದಲ್ಲಿ ಶುಕ್ರವಾರ ಭೇಟಿ ಆದರು. ಆಡಳಿತಾರೂಢ ಕಾಂಗ್ರೆಸ್‌ನ ಒಳ ಜಗಳದ ಹಿನ್ನೆಲೆಯಲ್ಲಿ ಈ ಭೇಟಿಯು ಮಹತ್ವ ಪಡೆದಿದೆ. ರಾಹುಲ್ ಅವರನ್ನು ಬಘೇಲ್ ಅವರು ಮಂಗಳವಾರವೂ ಭೇಟಿಯಾಗಿದ್ದರು.

ಸಂಜೆ ಸುಮಾರು 4 ಗಂಟೆಗೆ ಬಘೇಲ್ ಅವರು ರಾಹುಲ್ ಗಾಂಧಿ ನಿವಾಸಕ್ಕೆ ತೆರಳಿದರು. ಈ ವೇಳೆ ಛತ್ತೀಸಗಡದ ಕಾಂಗ್ರೆಸ್ ಉಸ್ತುವಾರಿ ಪಿ.ಎಲ್. ಪೂನಿಯಾ ಕೂಡ ಉಪಸ್ಥಿತರಿದ್ದರು.

ಛತ್ತೀಸಗಡದಲ್ಲಿ 2018ರಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಾಗ ಅಧಿಕಾರ ಹಂಚಿಕೆಯ ಒಪ್ಪಂದ ಆಗಿತ್ತು. ಹಾಗಾಗಿ, ಈಗ ಮುಖ್ಯಮಂತ್ರಿ ಸ್ಥಾನ ತಮಗೆ ಸಿಗಬೇಕು ಎಂದು ಆರೋಗ್ಯ ಸಚಿವ ಟಿ.ಎಸ್. ಸಿಂಗ್‌ದೇವ್ ಒತ್ತಾಯಿಸಿದ್ದಾರೆ. ಇದು ಛತ್ತೀಸಗಡ ಕಾಂಗ್ರೆಸ್‌ನೊಳಗೆ ಬಣ ರಾಜಕಾರಣಕ್ಕೆ ಕಾರಣವಾಗಿದೆ.

ದೇವ್ ಕೂಡ ರಾಹುಲ್ ಅವರನ್ನು ಗುರುವಾರ ಭೇಟಿಯಾಗಿದ್ದರು. ಬಘೇಲ್ ಮತ್ತು ದೇವ್ ಅವರಿಬ್ಬರೂ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಬುಧವಾರ ಭೇಟಿಯಾಗಿದ್ದರು.

ಹೈಕಮಾಂಡ್‌ಗೆ ಸಿಧು ಸವಾಲು

'ನಿರ್ಧಾರದ ಸ್ವಾತಂತ್ರ್ಯ ಕೊಡಿ, ಇಲ್ಲವೇ ತಕ್ಕ ಪ್ರತಿಕ್ರಿಯೆ ಎದುರಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ಕಾಂಗ್ರೆಸ್ ಘಟಕದ ಒಳಗೆ ಕೆಲವು ಕಾಲದಿಂದ ಹೊಗೆಯಾಡುತ್ತಿರುವ ಭಿನ್ನಮತವು ಶುಕ್ರವಾರ ತೀವ್ರ ಸ್ವರೂಪ ಪಡೆದುಕೊಂಡಿದೆ.

ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು, ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ಇಲ್ಲದೇ ಇದ್ದರೆ ತಕ್ಕ ಉತ್ತರವನ್ನು ಎದುರಿಸಬೇಕಾದೀತು ಎಂದು ಹೈಕಮಾಂಡ್‌ಗೆ ಸವಾಲು ಹಾಕಿದ್ದಾರೆ. ಸಿಧು ಅವರ ಸಲಹೆಗಾರ ಮಾಲ್ವಿಂದರ್ ಸಿಂಗ್ ಮಾಲಿ ಅವರು ಹುದ್ದೆಯಿಂದ ಹಿಂದೆ ಸರಿದಿದ್ದಾರೆ. ಕಾಶ್ಮೀರದ ಬಗ್ಗೆ ಅವರು ನೀಡಿದ್ದ ಹೇಳಿಕೆಗಳು ವಿವಾದಕ್ಕೆ ಕಾರಣ ಆಗಿದ್ದವು.

ಪಂಜಾಬ್ ಕಾಂಗ್ರೆಸ್ ಉಸ್ತುವಾರಿ ಹರೀಶ್ ರಾವತ್ ಅವರು ಸಿಧು ಅವರ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ. ಪಕ್ಷದ ನಿಯಮಗಳು ಮತ್ತು ಸಂವಿಧಾನದ ಮಿತಿಯೊಳಗೆ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವು ರಾಜ್ಯ ಘಟಕದ ಅಧ್ಯಕ್ಷರಿಗೆ ಇದೆ. ಅಧ್ಯಕ್ಷರು ನಿರ್ಧಾರ ಕೈಗೊಳ್ಳದೇ ಇದ್ದರೆ ಬೇರೆ ಕೈಗೊಳ್ಳಬೇಕು ಎಂದು ರಾವತ್ ಹೇಳಿದ್ದಾರೆ.

ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವನ್ನು ಪಕ್ಷದ ಹೈಕಮಾಂಡ್ ತಮಗೆ ನೀಡಬೇಕು. ಪಕ್ಷವು ಮುಂದಿನ 20 ವರ್ಷ ಪಂಜಾಬ್‌ನಲ್ಲಿ ಅಧಿಕಾರದಲ್ಲಿ ಇರುವಂತೆ ಮಾಡುವುದು ಇದರಿಂದ ಸಾಧ್ಯ. ಇದಕ್ಕೆ ಬೇಕಾದ ನೀಲನಕ್ಷೆಯನ್ನು ರೂಪಿಸಲಾಗಿದೆ ಎಂದು ಸಿಧು ಹೇಳಿದ್ದಾರೆ.

ಸಲಹೆಗಾರ ಹುದ್ದೆಗೆ ನೀಡಿದ್ದ ಒಪ್ಪಿಗೆಯನ್ನು ಮಾಲಿ ಅವರು ಹಿಂದಕ್ಕೆ ಪಡೆದ ಬಳಿಕ ಸಿಧು ಅವರು ಅಮೃತಸರದಲ್ಲಿ ಈ ಹೇಳಿಕೆ ನೀಡಿದ್ದಾರೆ.

ವಿವಾದಾತ್ಮಕ ಸಲಹೆಗಾರ ಮಾಲಿ ಅವರನ್ನು ವಜಾ ಮಾಡಬೇಕು ಎಂದು ರಾವತ್ ಅವರು ಎಚ್ಚರಿಕೆ ನೀಡಿದ್ದರು.



ನವಜೋತ್ ಸಿಂಗ್ ಸಿಧು ಮತ್ತು ಅಮರಿಂದರ್ ಸಿಂಗ್

ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ಸಿಧು ನಡುವೆ ತೀವ್ರವಾದ ಭಿನ್ನಮತ ಇದೆ. ಅಮರಿಂದರ್ ಅವರು ಗುರುವಾರ ಏರ್ಪಡಿಸಿದ್ದ ಭೋಜನ ಕೂಟದಲ್ಲಿ 55 ಶಾಸಕರು ಮತ್ತು ಎಂಟು ಸಂಸದರು ಭಾಗಿಯಾಗಿದ್ದರು. ಇದೆಲ್ಲದರ ಬಳಿಕ ಸಿಧು ಅವರು ಕೆರಳಿದ್ದಾರೆ ಎನ್ನಲಾಗಿದೆ.

ಸಿಧು ಅವರಿಗೆ ಸೂಕ್ತ ಹುದ್ದೆ ನೀಡುವ ಕಾರಣಕ್ಕಾಗಿಯೇ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷರನ್ನಾಗಿ ಅವರನ್ನು ಇತ್ತೀಚೆಗೆ ನೇಮಿಸಲಾಗಿದೆ.

ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯನ್ನು ಸಿಧು ಅವರ ನೇತೃತ್ವದಲ್ಲಿ ಎದುರಿಸಲಾಗುವುದು ಎಂದು ರಾವತ್ ಇತ್ತೀಚೆಗೆ ಹೇಳಿದ್ದರು.

'ಕಾಶ್ಮೀರವು ಕಾಶ್ಮೀರಿಗಳ ದೇಶ' ಎಂದು ಮಾಲಿ ಅವರು ನೀಡಿದ್ದ ಹೇಳಿಕೆಯು ಭಾರಿ ವಿವಾದ ಸೃಷ್ಟಿಸಿತ್ತು. ಸಿಧು ಅವರು ನೇಮಿಸಿಕೊಂಡಿರುವ ಇನ್ನೊಬ್ಬ ಸಲಹೆಗಾರ ಪ್ಯಾರೇಲಾಲ್ ಗರ್ಗ್ ಅವರು ಪಾಕಿಸ್ತಾನದ ಬಗ್ಗೆ ನೀಡಿದ್ದ ಹೇಳಿಕೆಯೂ ವಿವಾದಕ್ಕೆ ಕಾರಣವಾಗಿದೆ.

ಸಿಧು ಅವರ ಸಲಹೆಗಾರರಿಗೂ ಕಾಂಗ್ರೆಸ್‌ಗೂ ಸಂಬಂಧ ಇಲ್ಲ ಎಂಬ ಸ್ಪಷ್ಟೀಕರಣವನ್ನು ರಾವತ್ ಅವರು ನೀಡಬೇಕಾಗಿ ಬಂದಿತ್ತು. 'ಸಲಹೆಗಾರರನ್ನು ವಜಾ ಮಾಡುವಂತೆ ಸಿಧು ಅವರಿಗೆ ಸೂಚಿಸಿದ್ದೇನೆ. ಜನರ ಭಾವನೆಗಳು ಗಾಸಿಗೊಳ್ಳುವಂತಹ ಬೇಜವಾಬ್ದಾರಿ ಹೇಳಿಕೆ ನೀಡುವ ಜನರನ್ನು ಪಕ್ಷವು ಸಹಿಸಿಕೊಳ್ಳುವುದಿಲ್ಲ' ಎಂದು ರಾವತ್ ಹೇಳಿದ್ದರು.

ತಮಗೆ ಏನಾದರೂ ಹಾನಿ ಆದರೆ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಸಚಿವ ವಿಜೇಂದರ್ ಸಿಂಗ್, ಸಂಸದ ಮನೀಶ್ ತಿವಾರಿ, ಮಾಜಿ ಉಪ ಮುಖ್ಯಮಂತ್ರಿ ಸುಖಬೀರ್ ಸಿಂಗ್ ಬಾದಲ್ ಮುಂತಾದವರು ಕಾರಣ ಎಂದು ಮಾಲಿ ಶುಕ್ರವಾರ ಹೇಳಿದ್ದಾರೆ.

ನಾನು ಅದೃಷ್ಟವಂತೆ: ಆಫ್ಗನ್ ಚಿತ್ರನಿರ್ದೇಶಕಿ

ಪ್ಯಾರಿಸ್ (ರಾಯಿಟರ್ಸ್): 'ನಾನು ಅದೃಷ್ಟವಂತೆ. ಆದರೆ ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಎಲ್ಲರೂ ಅದೃಷ್ಟವಂತರಲ್ಲ' ಎಂದು ಕಾಬೂಲ್‌ನಿಂದ ಪ್ಯಾರಿಸ್‌ಗೆ ಬಂದಿರುವ ಚಿತ್ರ ನಿರ್ದೇಶಕಿ ಶಹರ್‌ಬಾನೂ ಸಾದತ್ ಹೇಳಿದರು.

ಕಾಬೂಲನ್ನು ತಾಲಿಬಾನ್ ವಶಪಡಿಸಿಕೊಳ್ಳುವ ಮುಂಚೆ ಸಾದತ್‌ಗೆ ಅಫ್ಗಾನಿಸ್ತಾನ ತೊರೆಯಲು ಲಭಿಸಿದ್ದ ಅವಕಾಶವನ್ನು ಅವರು ನಿರಾಕರಿಸಿದ್ದರು. ಆದರೆ ಮರುದಿನ ನಡೆದಿದ್ದೇ ಬೇರೆ. 'ನಾವು ಬ್ಯಾಂಕ್‌ಗೆ ಹೋಗಿದ್ದೆವು. ಇದ್ದಕ್ಕಿದ್ದ ಹಾಗೆ ಬಿಳಿ ಧ್ವಜದ ತಾಲಿಬಾನ್ ಕಾರುಗಳನ್ನು ನೋಡಿ ಓಡಲಾರಂಭಿಸಿದೆವು. ಕಾಬೂಲ್‌ನ ಮಧ್ಯಭಾಗದಲ್ಲಿ ಇದೆಲ್ಲಾ ಸಾಧ್ಯವಿಲ್ಲ. ಇದು ಯಾವುದೋ ಸಿನಿಮಾದ ದೃಶ್ಯವಿರಬೇಕು ಎನಿಸಿತು' ಎಂದರು.

ನಮ್ಮ ಮನೆಯಿಂದ ಕಾಬೂಲ್ ವಿಮಾನ ನಿಲ್ದಾಣದಲ್ಲಿದ್ದ ಫ್ರೆಂಚ್ ಪಡೆಗಳನ್ನು ತಲುಪಲು ನಮಗೆ 72 ಗಂಟೆಗಳು ಬೇಕಾದವು. ಕುಟುಂಬದ ಒಂಬತ್ತು ಸದಸ್ಯರನ್ನು ಕರೆದುಕೊಂಡು ಫ್ರಾನ್ಸ್‌ಗೆ ಬಂದಿದ್ದೇನೆ ಎಂದರು.

'ನಾನು ಸಿನಿಮಾ ಮಾಡುವುದನ್ನು ಮುಂದುವರಿಸುತ್ತೇನೆ. ಆದರೆ ಈಗ ನನ್ನ ದೃಷ್ಟಿಕೋನ ಬದಲಾಗಿದೆ. ರಾಜಕೀಯ ಬೆಳವಣಿಗೆಗಳು ನನ್ನನ್ನು ವಿಚಲಿತಗೊಳಿಸಿವೆ' ಎಂದರು. ಸಾದತ್ ಇರಾನ್‌ನಲ್ಲಿ ಜನಿಸಿದವರು. 2001ರಲ್ಲಿ ಅವರು ಕಾಬೂಲ್‌ಗೆ ಹೋಗಿ ನೆಲೆಸಿದ್ದರು. 2016ರಲ್ಲಿ ಅವರ ಚಿತ್ರ 'ವೂಲ್ಫ್ ಅಂಡ್ ಶೀಪ್'ಗೆ ಕ್ಯಾನೆ ಚಿತ್ರೋತ್ಸವದಲ್ಲಿ ಪ್ರಶಸ್ತಿ ಲಭಿಸಿತ್ತು.

ಐಎಂಎ: ನಿಂಬಾಳ್ಕರ್ ವಿರುದ್ಧದ ಎಫ್‌ಐಆರ್ ರದ್ದತಿಗೆ 'ಸುಪ್ರೀಂ' ತಡೆ

ನವದೆಹಲಿ: ಐಎಂಎ ಬಹುಕೋಟಿ ವಂಚನೆ ಪ್ರಕರಣದಲ್ಲಿ ಕರ್ನಾಟಕದ ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಅವರ ವಿರುದ್ಧ ಸಿಬಿಐ ದಾಖಲಿಸಿದ್ದ ಎಫ್‌ಐಆರ್ ಮತ್ತು ಆರೋಪಪಟ್ಟಿಯನ್ನು ರದ್ದುಪಡಿಸಿದ ಕರ್ನಾಟಕ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಆರ್. ಸುಭಾಷ್ ರೆಡ್ಡಿ ಅವರಿದ್ದ ಪೀಠವು ಹೈಕೋರ್ಟ್ 2021ರ ಮಾರ್ಚ್ 19ರಂದು ನೀಡಿದ್ದ ಆದೇಶವನ್ನು ಅಮಾನತಿನಲ್ಲಿ ಇರಿಸಿತು.

ನಿಂಬಾಳ್ಕರ್ ಅವರ ವಿರುದ್ಧದ ಎಫ್‌ಐಆರ್ ರದ್ದತಿಯನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಪ್ರತಿಕ್ರಿಯೆ ಸಲ್ಲಿಸುವಂತೆ ನಿಂಬಾಳ್ಕರ್ ಅವರಿಗೆ ಸೂಚಿಸಿದೆ.

ಸಿಐಡಿಯ ಐಜಿಪಿಯಾಗಿದ್ದ ನಿಂಬಾಳ್ಕರ್ ಅವರು ಇ.ಬಿ. ಶ್ರೀಧರ ಅವರು ಸಿದ್ಧಪಡಿಸಿದ್ದ ವರದಿಯನ್ನು ರಾಜ್ಯದ ಪೊಲೀಸ್ ಮಹಾನಿರ್ದೇಶಕರಿಗೆ 2019ರ ಜನವರಿ 18ರಂದು ಸಲ್ಲಿಸಿದ್ದರು. ಐಎಂಎ ಸಮೂಹವು ಯಾವುದೇ ತಪ್ಪು ಎಸಗಿರುವುದು ತನಿಖೆಯಲ್ಲಿ ಪತ್ತೆಯಾಗಿಲ್ಲ ಎಂದು ತಿಳಿಸಿದ್ದರು. ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಕಾಯ್ದೆ 2004ರ ಅನ್ವಯ ಐಎಂಎ ವಿರುದ್ಧ ಕ್ರಮ ಕೈಗೊಳ್ಳುವ ಅಗತ್ಯ ಇಲ್ಲ ಎಂದಿದ್ದರು ಎಂದು ಹೇಳಲಾಗಿದೆ.

ಐಎಂಎ ಸಂಗ್ರಹಿಸಿದ ಠೇವಣಿಗೆ ಈ ಕಾಯ್ದೆಯಿಂದ ವಿನಾಯಿತಿ ಇದೆ ಎಂದು ನಿಂಬಾಳ್ಕರ್ ಹೇಳಿದ್ದರು. ಜತೆಗೆ, ಮುಖ್ಯ ಆರೋಪಿ ಮೊಹಮ್ಮದ್ ಮನ್ಸೂರ್ ಖಾನ್ ಮಾಲೀಕತ್ವದ ಕಂಪನಿಯು ಸಂಗ್ರಹಿಸಿದ್ದ ಠೇವಣಿಯ ವಿಷಯವನ್ನು ಉಲ್ಲೇಖಿಸಿರಲಿಲ್ಲ ಎಂದು ಹೇಳಲಾಗಿದೆ.

ಅನಧಿಕೃತ ಠೇವಣಿಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಆರ್‌ಬಿಐ ಸೂಚಿಸಿತ್ತು. ಅದಕ್ಕೆ ಪ್ರತಿಕ್ರಿಯೆ ನೀಡಿದ್ದ ನಿಂಬಾಳ್ಕರ್, ಐಎಂಎ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸುವ ಅಗತ್ಯ ಇಲ್ಲ ಎಂದು ವರದಿ ಸಲ್ಲಿಸಿದ್ದರು ಎಂದು ಆರೋಪಿಸಲಾಗಿದೆ.

ಉತ್ತರಾಖಂಡ: ಮತ್ತೆ ಭೂಕುಸಿತ

ಒಂದನೇ ಪುಟದಿಂದ

ಹೆದ್ದಾರಿಯ ಸಾಕಷ್ಟು ಕಡೆಗಳಲ್ಲಿ ಬಿರುಕುಗಳೂ ಉಂಟಾಗಿದ್ದು, ಮತ್ತಷ್ಟು ಹಾನಿಯಾಗುವ ಆತಂಕ ಎದುರಾಗಿದೆ. ಬೀಮುಂಡಾ ಮತ್ತು ಸೋನಿ ಗ್ರಾಮಗಳ ಬಳಿ ಹಲವೆಡೆ ರಸ್ತೆಗಳು ಕೊಚ್ಚಿ ಹೋಗಿವೆ.

ಡೆಹ್ರಾಡೂನ್‌ನ ಸಹಸ್ರಧಾರಾ-ಮಾಲ್‌ದೇವತಾ ರಸ್ತೆಯೂ ಬಹುತೇಕ ಹಾಳಾಗಿದೆ. ಡೆಹ್ರಾಡೂನ್-ಹೃಷಿಕೇಶ ಹೆದ್ದಾರಿಯಲ್ಲಿನ ರಾಣಿ ಪೋಖರಿ ಸೇತುವೆ ಕುಸಿದುಬಿದ್ದಿದ್ದು, ಹಲವು ವಾಹನಗಳು ನೀರಿನಲ್ಲಿ ಮುಳುಗಿರುವ ಶಂಕೆ ವ್ಯಕ್ತವಾಗಿದೆ.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹಾಗೂ ರಾಯಪುರ ಶಾಸಕ ಉಮೇಶ ಶರ್ಮಾ ಕಾವು, ಮಳೆಯಿಂದ ಹಾನಿಗೀಡಾದ ಸ್ಥಳಗಳಿಗೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅರುಣಾಚಲ ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ

ಒಂದನೇ ಪುಟದಿಂದ

ಸಿಮಾಂಗ್ ನದಿಯ ಪ್ರವಾಹದಿಂದಾಗಿ ಜಿಲ್ಲೆಯ ಸಂಪರ್ಕ ವ್ಯವಸ್ಥೆಯೇ ಸಂಪೂರ್ಣ ನೆಲಕಚ್ಚಿದ್ದಾಗಿ ಸಿಯಾಂಗ್ ಜಿಲ್ಲಾಧಿಕಾರಿ ಅತುಲ್ ತಾಯೆಂಗ್ ಹೇಳಿದ್ದಾರೆ. ಜನರಲ್ ರಿಸರ್ವ್ ಎಂಜಿನಿಯರ್ ಫೋರ್ಸ್ (ಜಿಆರ್‌ಇಎಫ್) ಕಾರ್ಮಿಕ ಶಿಬಿರವನ್ನು ಸ್ಥಳಾಂತರಿಸಲಾಗಿದೆ ಹಾಗೂ 550 ಜನರಿಗೆ ಬೊಲ್ಯಾಂಗ್‌ನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಶ್ರಯ ಕಲ್ಪಿಸಲಾಗಿದೆ.

ನದಿ ದಂಡೆಯಲ್ಲಿರುವ ಬಹುತೇಕ ಗ್ರಾಮಗಳಲ್ಲಿ ಅಪಾರ ಹಾನಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ನದಿ ನೀರಿನ ಪ್ರಮಾಣ ಹೆಚ್ಚುವ ಸಾಧ್ಯತೆ ಇರುವುದರಿಂದ, ತಗ್ಗು ಪ್ರದೇಶಗಳಲ್ಲಿರುವ ಜನರಿಗೆ ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ.

ಸುಪ್ಲೆ ಗ್ರಾಮದಿಂದ ಆರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ಬೈಲೆ ಸೇತುವೆ ಕೊಚ್ಚಿ ಹೋಗಿದೆ.

ವಿದ್ಯುತ್ ವಿತರಣಾ ಜಾಲದ ತಂತಿಗಳು ನೆಲಕ್ಕೆ ಬಿದ್ದಿವೆ. ಭೂಕುಸಿತದಿಂದಾಗಿ, ಸುಬ್ಬಂಗ್ ಜಲವಿದ್ಯುತ್ ಘಟಕದ ಕಾರ್ಯನಿರ್ವಹಣೆಯೂ ಸ್ಥಗಿತಗೊಂಡಿದೆ. ಪೂರ್ವ ಸಿಯಾಂಗ್ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಿದ್ದ ತಡೆಗೋಡೆಯು ಕೊಚ್ಚಿ ಹೋಗಿದೆ.

ಬೋರ್ಗುಲಿ ಗ್ರಾಮದ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರ ವಸತಿನಿಲಯವೂ ಕೊಚ್ಚಿ ಹೋಗಿದ್ದು, ಸಾರ್ವಜನಿಕ ಮೈದಾನವೂ ಹಾಳಾಗಿದೆ.

10 ಗ್ರಾಮಗಳಲ್ಲಿನ 15 ಸಾವಿರ ಜನರು ತೀವ್ರ ಸಂಕಷ್ಟದಲ್ಲಿದ್ದಾರೆ. ಕುಡಿಯುವ ನೀರು ಹಾಗೂ ವಿದ್ಯುತ್ ಪೂರೈಕೆ ಕೂಡ ಅಲ್ಲಿ ಅಸಾಧ್ಯವಾಗಿ ಪರಿಣಮಿಸಿದೆ ಎಂದು ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳು ತಿಳಿಸಿದ್ದಾರೆ.

ಆರ್ಚರಿ ರ್‍ಯಾಂಕಿಂಗ್ ಸುತ್ತು: ಭಾರತದ ರಾಕೇಶ್‌ಗೆ 3ನೇ ಸ್ಥಾನ; ರಿಕರ್ವ್ ಓಪನ್‌ನಲ್ಲಿ ವಿವೇಕ್ ಚಿಕಾರಗೆ 10ನೇ ಸ್ಥಾನ

ಸೆಮಿಗೆ ಭಾವಿನಾ: ಐತಿಹಾಸಿಕ ಸಾಧನೆ

ಟೋಕಿಯೊ (ಎಎಫ್‌ಪಿ/ಪಿಟಿಐ): ಭಾರತದ ಭಾವಿನಾಬೆನ್ ಪಟೇಲ್ ಅವರು ಪ್ಯಾರಾಲಿಂಪಿಕ್‌ನ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಸೆಮಿಫೈನಲ್ ತಲುಪುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಪ್ಯಾರಾ ಕ್ರೀಡಾಪಟು ಎನಿಸಿಕೊಂಡಿದ್ದಾರೆ.

ಈ ಮೂಲಕ ಕನಿಷ್ಠ ಕಂಚಿನ ಪದಕ ಖಚಿತಪಡಿಸಿದ್ದಾರೆ.

ಮಹಿಳೆಯರ ಸಿಂಗಲ್ಸ್ ಕ್ಲಾಸ್ 4 ವಿಭಾಗದಲ್ಲಿ ಭಾವಿನಾಬೆನ್ ಎಂಟರಘಟ್ಟದಲ್ಲಿ ಹಣಾಹಣಿಯಲ್ಲಿ 11-5 11-6 11-7ರಿಂದ ಹಾಲಿ ಚಾಂಪಿಯನ್, ಸರ್ಬಿಯಾದ ಬೊರಿಸ್ಲಾವಾ ಪೆರಿಚ್ ರ್‍ಯಾಂಕೊವಿಚ್ ಅವರನ್ನು ಪರಾಭಗೊಳಿಸಿದರು. ವಿಶ್ವದ ಎರಡನೇ ರ್‍ಯಾಂಕಿನ ಆಟಗಾರ್ತಿಗೆ ಭಾವಿನಾಬೆನ್ ಕೇವಲ 18 ನಿಮಿಷಗಳಲ್ಲೇ ಆಘಾತ ನೀಡಿದರು.

16ರ ಘಟ್ಟದ ಪಂದ್ಯದಲ್ಲಿ ಭಾರತದ ಆಟಗಾರ್ತಿಯು 12–10, 13–11, 11–6ರಿಂದ ಬ್ರೆಜಿಲ್‌ನ ಜಾಯ್ಸ್ ಡಿ ಒಲಿವೆರಾ ಅವರನ್ನು ಮಣಿಸಿದ್ದರು.

ಸೆಮಿಫೈನಲ್‌ನಲ್ಲಿ ಭಾವಿನಾ ಅವರಿಗೆ ಚೀನಾದ ಜಾಂಗ್ ಮಿಯಾವೊ ಅವರ ಸವಾಲು ಎದುರಾಗಿದೆ.

ಶನಿವಾರ ಈ ಪಂದ್ಯ ನಿಗದಿಯಾಗಿದೆ. ಈ ಕೂಟದ ಟೇಬಲ್ ಟೆನಿಸ್ ವಿಭಾಗದಲ್ಲಿ ಕಂಚಿನ ಪದಕದ ಪ್ಲೇ ಆಫ್ ಇಲ್ಲವಾದ್ದರಿಂದ ಸೆಮಿಫೈನಲ್‌ನಲ್ಲಿ ಸೋತವರಿಗೂ ಪದಕ ಖಚಿತವಾಗಿದೆ.

ಗುಜರಾತ್‌ನ ಮೆಹಸಾನಾ ಜಿಲ್ಲೆಯ ಸುಂಡಿಯಾ ಗ್ರಾಮದ ಭಾವಿನಾ, ಗುಜರಾತ್ ಪರ ಜೂನಿಯರ್ ಕ್ರಿಕೆಟ್ ಆಡಿದ್ದ ನಿಕುಂಜ್ ಪಟೇಲ್ ಎಂಬುವರನ್ನು ವರಿಸಿದ್ದಾರೆ. ಮದುವೆ ಬಳಿಕ ಅಹಮದಾಬಾದ್‌ನಲ್ಲಿ ನೆಲೆಸಿದ್ದಾರೆ.

ಬಾಲ್ಯದಲ್ಲಿ ಪೋಲೀಯೊ ಬಾಧಿಸಿದ ಕಾರಣ ಭಾವಿನಾ ಅವರ ಕಾಲು ಬಲ ಕಳೆದುಕೊಂಡಿದೆ. ‘ಅವಳಿಗೆ ಶೇಕಡಾ 90ರಷ್ಟು ಅಂಗವೈಕಲ್ಯವಿದೆ. ಆದರೆ 10 ಮಂದಿ ಸಾಮಾನ್ಯ ನಾಗರಿಕರಿಗೆ ಇರುವಷ್ಟು ಇಚ್ಛಾಶಕ್ತಿ ಮತ್ತು ದೃಢವಿಶ್ವಾಸ ಅವಳಲ್ಲಿದೆ’ ಎಂದು ನಿಕುಂಜ್ ಹೇಳುತ್ತಾರೆ.

ಆರ್ಚರಿ: ರ್‍ಯಾಂಕಿಂಗ್ ಸುತ್ತಿನಲ್ಲಿ ರಾಕೇಶ್‌ಗೆ ಮೂರನೇ ಸ್ಥಾನ: ಆರ್ಚರಿ ಓಪನ್ ವಿಭಾಗದಲ್ಲಿ ರಾಕೇಶ್ ಕುಮಾರ್ ಜೀವನಶ್ರೇಷ್ಠ 699 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನ ಗಳಿಸಿದರು. ರಿಕರ್ವ್ ಓಪನ್ ವಿಭಾಗದಲ್ಲಿ ವಿವೇಕ್ ಚಿಕಾರ 10ನೇ ಸ್ಥಾನ ಪಡೆದರು. ವಿವೇಕ್ 2019ರ ಏಷ್ಯನ್ ಪ್ಯಾರಾ ಚಾಂಪಿಯನ್ ಆಗಿದ್ದಾರೆ. ಓಪನ್ ವಿಭಾಗದಲ್ಲಿ ಶ್ಯಾಮ ಸುಂದರ್ ಸ್ವಾಮಿ 21ನೇ ಸ್ಥಾನ ಗಳಿಸಿದರು. ರಾಕೇಶ್ ಹಾಗೂ ಶ್ಯಾಮ ಸುಂದರ್ ಎರಡನೇ ಸುತ್ತು ಪ್ರವೇಶಿಸಿದ್ದಾರೆ. ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಜ್ಯೋತಿ ಬಲಿಯಾನ್ 15ನೇ ಸ್ಥಾನ ತಮ್ಮದಾಗಿಸಿಕೊಂಡರು. ಕುಮಾರ್ ಮತ್ತು ಜ್ಯೋತಿ ಮಿಶ್ರ ಪೇರ್ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.



ಭವಿನಾಬೆನ್ ಪಟೇಲ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

> ದೇಶದ ಜನರ ಬೆಂಬಲವಿದ್ದರೆ ಸೆಮಿಫೈನಲ್ ಹಣಾಹಣಿಯಲ್ಲಿ ವಿಜಯ ಸಾಧಿಸಬಲ್ಲೆ. ನಿಮ್ಮೆಲ್ಲರ ಹಾರೈಕೆ ಮತ್ತು ಸಹಕಾರ ನನ್ನೊಂದಿಗೆ ಇರಲಿದೆ ಎಂಬ ವಿಶ್ವಾಸದಲ್ಲಿದ್ದೇನೆ.
>
> **ಭಾವಿನಾಬೆನ್** ಭಾರತದ ಟಿಟಿ ಆಟಗಾರ್ತಿ

ಸಕೀನಾಗೆ ಐದನೇ ಸ್ಥಾನ



ನಿರೀಕ್ಷೆ ಮೂಡಿಸಿದ್ದ ಭಾರತದ ಸಕೀನಾ ಖಾತುನ್ ಪವರ್ ಲಿಫ್ಟಿಂಗ್‌ನಲ್ಲಿ ಐದನೇ ಸ್ಥಾನ ಗಳಿಸಿದರು.

ಮಹಿಳೆಯರ 50 ಕೆಜಿ ವಿಭಾಗದಲ್ಲಿ ವೈಯಕ್ತಿಕ ಶ್ರೇಷ್ಠ ಒಟ್ಟು 93 ಕೆಜಿ ಸಾಧನೆ ಮಾಡಿದರು. ಪಶ್ಚಿಮ ಬಂಗಾಳದವರಾದ ಸಕೀನಾ ಬೆಂಗಳೂರಿನಲ್ಲಿ ಅಭ್ಯಾಸ ಮಾಡಿದ್ದರು.

ಚೀನಾದ ಡ್ಯಾಂಡನ್ ಹು (120 ಕೆಜಿ ಭಾರ) ಚಿನ್ನದ ಪದಕ ಗೆದ್ದುಕೊಂಡರೆ, ಈಜಿಪ್ಟ್‌ನ ರೆಹಾಬ್ ಅಹಮದ್ (120 ಕೆಜಿ) ಮತ್ತು ಗ್ರೇಟ್ ಬ್ರಿಟನ್‌ನ ಒಲಿವಿಯಾ ಬ್ರೂಮ್ (107 ಕೆಜಿ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

32 ವರ್ಷದ ಸಕೀನಾ ಮೊದಲ ಯತ್ನದಲ್ಲಿ 90 ಕೆಜಿ ಭಾರ ಎತ್ತಿದರು. ಎರಡನೆ ಪ್ರಯತ್ನದಲ್ಲಿ 93 ಎತ್ತುವ ಯತ್ನದಲ್ಲಿ ವಿಫಲರಾದರು ಆದರೆ ಮೂರನೇ ಯತ್ನದಲ್ಲಿ ಸಫಲರಾದರು.

2014ರಲ್ಲಿ ಗ್ಲಾಸ್ಗೊದಲ್ಲಿ ಕಂಚು ಗೆದ್ದಿದ್ದ ಸಕೀನಾ, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ಗೆದ್ದ ಭಾರತದ ಏಕೈಕ ಮಹಿಳಾ ಪ್ಯಾರಾಲಿಂಪಿಯನ್ ಎನಿಸಿಕೊಂಡಿದ್ದಾರೆ. 2014ರ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಅವರಿಗೆ ಬೆಳ್ಳಿ ಒಲಿದಿತ್ತು. ಜೈದೀಪ್ ವಿಫಲ: ಪುರುಷರ 65 ಕೆಜಿ ವಿಭಾಗದಲ್ಲಿ ಜೈದೀಪ್ ಮೂರು ಪ್ರಯತ್ನಗಳಲ್ಲಿ ವೈಫಲ್ಯ ಅನುಭವಿಸಿದರು.

ಅಥ್ಲೆಟಿಕ್ಸ್: ಕ್ಸಿಯಾಗೆ ವಿಶ್ವದಾಖಲೆಯ ಚಿನ್ನ


ಅದ್ಭುತ ಸಾಮರ್ಥ್ಯ ತೋರಿದ ಚೀನಾದ ಹೋ ಕ್ಸಿಯಾ, ಮಹಿಳೆಯರ 100 ಮೀ. ಓಟದಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನಕ್ಕೆ ಮುತ್ತಿಟ್ಟರು.

ಟಿ35 ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು 13 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆಸ್ಟ್ರೇಲಿಯಾದ ಇಸಿಸ್ ಹೋಲ್ಟ್ ಬೆಳ್ಳಿ (13.13 ಸೆ.) ಮತ್ತು ಗ್ರೇಟ್ ಬ್ರಿಟನ್‌ನ ಮರಿಯಾ ಲಿಲಿ (14.8 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

2016ರ ರಿಯೊ ಕೂಟದಲ್ಲಿ ಎರಡು ಚಿನ್ನ ಗೆದ್ದಿದ್ದ ಚೀನಾದ ಹೋ ಕ್ಸಿಯಾ ಅವರು ಇಲ್ಲಿಯೂ ಪಾರಮ್ಯ ಮೆರೆದರು.

ಬ್ರೆಜಿಲ್‌ಗೆ ‘ಮೊದಲ’ ಚಿನ್ನ: ಈ ಬಾರಿಯ ಪ್ಯಾರಾಲಿಂಪಿಕ್ಸ್‌ನಲ್ಲಿ ಅಥ್ಲೆಟಿಕ್ಸ್ ನಲ್ಲಿ ಮೊದಲ ಚಿನ್ನ ಗೆದ್ದ ಶ್ರೇಯವನ್ನು ಬ್ರೆಜಿಲ್ ತನ್ನದಾಗಿಸಿಕೊಂಡಿತು.

ಬ್ರೆಜಿಲ್‌ನ ಯೆಲ್ಸಿನ್ ಜಾಕ್ಸ್ ಟೋಕಿಯೊ ಕೂಟದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಚಿನ್ನ ವಿಜೇತ ಮೊದಲ ಅಥ್ಲೀಟ್ ಎನಿಸಿಕೊಂಡರು. 5 ಸಾವಿರ ಮೀಟರ್ಸ್‌ನ ಟಿ11 ವಿಭಾಗದಲ್ಲಿ ಅವರು 15 ನಿ. 13.62 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಜಪಾನ್‌ನ ಕೆನ್ಯಾ ಕರಾಸವಾ (15 ನಿ. 18.12 ಸೆ.) ಅವರನ್ನು ಹಿಂದಿಕ್ಕಿದರು. ಜಪಾನ್‌ನವರೇ ಆದ ಶಿನ್ಯಾ ವಾಡಾ (15 ನಿ. 21.03 ಸೆ.) ಕಂಚು ಗೆದ್ದರು. ಬ್ರೆಜಿಲ್‌ನ ಸಿಲ್ವಾನಿಯಾ ಕೋಸ್ಟಾ ದಿ ಒಲಿವೆರಾ (5 ಮೀ.) ಮಹಿಳೆಯರ ಟಿ11 ಲಾಂಗ್‌ಜಂಪ್‌ನಲ್ಲಿ ಚಿನ್ನಕ್ಕೆ ಮುತ್ತಿಕ್ಕಿದರು.



ಹೋ ಕ್ಸಿಯಾ– ರಾಯಿಟರ್ಸ್ ಚಿತ್ರ



ಯೆಲ್ಸಿನ್ ಜಾಕ್ಸ್ (ಬಲ) ಮಾರ್ಗದರ್ಶಿಯ ನೆರವಿನೊಂದಿಗೆ ಓಡಿದರು– ಎಎಫ್‌ಪಿ ಚಿತ್ರ

ಟಾಟಾ ಮೋಟರ್ಸ್ – ಕುಸ್ತಿ ಫೆಡರೇಷನ್ ಒಪ್ಪಂದ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಕುಸ್ತಿಗೆ ಪ್ರಧಾನ ಪ್ರಾಯೋಜಕ ಸಂಸ್ಥೆಯಾಗಿರುವ ಟಾಟಾ ಮೋಟರ್ಸ್, ಭಾರತ ಕುಸ್ತಿ ಫೆಡರೇಷನ್ ನೊಂದಿಗಿನ (ಡಬ್ಲ್ಯುಎಫ್‌ಐ) ಒಪ್ಪಂದವನ್ನು 2024ರವರೆಗೆ ವಿಸ್ತರಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕುಸ್ತಿಪಟುಗಳು ಚಿನ್ನ ಗೆಲ್ಲಬೇಕೆಂಬ ಗುರಿಯೊಂದಿಗೆ ತಾನು ಫೆಡರೇಷನ್ ನೊಂದಿಗೆ ಮುಂದುವರಿಯುತ್ತಿರುವುದಾಗಿ ಟಾಟಾ ಮೋಟರ್ಸ್ ಪ್ರಕಟಿಸಿದೆ.

ಜೂನಿಯರ್ ವಿಭಾಗದ 60 ಮಂದಿಗೆ ಶಿಷ್ಯವೇತನ ಹಾಗೂ ಡಬ್ಲ್ಯುಎಫ್‌ಐ ಗುರುತಿಸುವ 30 ಮಂದಿ ಪ್ರತಿಭಾವಂತ ಕುಸ್ತಿಪಟುಗಳನ್ನು ದತ್ತು ತೆಗೆದುಕೊಳ್ಳುವುದಾಗಿಯೂ ಶುಕ್ರವಾರ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಟಾಟಾ ಮೋಟರ್ಸ್ ಘೋಷಿಸಿತು. 2018ರ ಜುಲೈ 1ರಂದು ಟಾಟಾ ಮೋಟರ್ಸ್ ಮತ್ತು ಡಬ್ಲ್ಯುಎಫ್‌ಐ ಒಪ್ಪಂದ ಮಾಡಿಕೊಂಡಿದ್ದವು.

ಜೂನಿಯರ್ ಪಟುಗಳ ಸಾಮರ್ಥ್ಯ ಹೆಚ್ಚಿಸುವ ಕಾರ್ಯಕ್ರಮದಡಿ ಅವರ ತರಬೇತಿ, ವಿದೇಶಿ ಟೂರ್ನಿಗೆ ಸಹಾಯ ಮತ್ತು ಗಾಯ ನಿರ್ವಹಣೆಗೆ ಫಿಸಿಯೊಗಳ ನೆರವು ಒದಗಿಸಲಾಗುತ್ತದೆ.

ಡಬ್ಲ್ಯುಎಫ್‌ಐ ಕಾಲಕಾಲಕ್ಕೆ ಜೂನಿಯರ್ ಕುಸ್ತಿಪಟುಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಿದೆ.

‘ನಾವು ಎಲೀಟ್ ಕುಸ್ತಿಪಟುಗಳಿಗೆ ಮಾತ್ರ ಹೆಚ್ಚಿನ ನೆರವು ನೀಡುತ್ತಿದ್ದೆವು. ಟಾಟಾ ಮೋಟರ್ಸ್‌ನಿಂದಾಗಿ ಗ್ರಾಮೀಣ ಭಾಗಗಳಿಂದಲೂ ಕುಸ್ತಿಪಟುಗಳು ಮುನ್ನೆಲೆಗೆ ಬರುತ್ತಿದ್ದಾರೆ’ ಎಂದು ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ನುಡಿದರು.

ಟೋಕಿಯೊ ಒಲಿಂಪಿಕ್ಸ್ ನಲ್ಲಿ ಭಾಗವಹಿಸಿದ್ದ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ರವಿ ದಹಿಯಾ, ದೀಪಕ್ ಪೂನಿಯಾ, ಸೋನಂ ಮಲಿಕ್, ಅನ್ಶು ಮಲಿಕ್, ವಿನೇಶಾ ಫೋಗಟ್ ಮತ್ತು ಸೀಮಾ ಬಿಸ್ಲಾ ಅವರಿಗೆ ಟಾಟಾ ಮೋಟರ್ಸ್‌ನಿಂದ ಕಾರು ಕೀಗಳನ್ನು ಹಸ್ತಾಂತರಿಸಲಾಯಿತು.

‘ದುಃಖಿಸಲು ಸಮಯವಿಲ್ಲ’: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸೋಲು ಅನುಭವಿಸಿದ್ದಕ್ಕೆ ವ್ಯಥೆಪಡಲು ಸಮಯವಿಲ್ಲ. ಮುಂದಿನ ಸವಾಲುಗಳಿಗೆ ಸಿದ್ಧವಾಗಬೇಕಿದೆ ಎಂದು ವಿನೇಶ್ ಫೋಗಟ್ ನುಡಿದರು. ಕೂಟದಲ್ಲಿ ಸಾಕಷ್ಟು ಅನುಭವ ಗಳಿಸಿಕೊಂಡಿರುವೆ ಎಂದು ಅವರು ಹೇಳಿದರು.

ಕ್ಲೀವ್‌ಲ್ಯಾಂಡ್ ಟೆನಿಸ್ : ಸೆಮಿಗೆ ಸಾನಿಯಾ–ಕ್ರಿಸ್ಟಿನಾ ಜೋಡಿ

ಕ್ಲೀವ್‌ಲ್ಯಾಂಡ್, ಅಮೆರಿಕ (ಪಿಟಿಐ): ಅಮೋಘ ಆಟವಾಡಿದ ಭಾರತದ ಸಾನಿಯಾ ಮಿರ್ಜಾ ಹಾಗೂ ಅಮೆರಿಕದ ಕ್ರಿಸ್ಟಿನಾ ಮೆಕಾಲೆ ಜೋಡಿಯು ಇಲ್ಲಿ ನಡೆಯುತ್ತಿರುವ ಕ್ಲೀವ್‌ಲ್ಯಾಂಡ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಗುರುವಾರ ರಾತ್ರಿ ನಡೆದ ಮಹಿಳೆಯರ ಡಬಲ್ಸ್ ಎಂಟರ ಘಟ್ಟದ ಹಣಾಹಣಿಯಲ್ಲಿ ಈ ಜೋಡಿಯು 6-3, 6-3ರಿಂದ ಜೆಕ್ ಗಣರಾಜ್ಯದ ಲೂಸಿ ರಾಡೆಕಾ ಹಾಗೂ ಚೀನಾದ ಶೂಯಿ ಜಾಂಗ್ ಎದುರು ಜಯ ಸಾಧಿಸಿದರು.

ಒಂದು ತಾಸು ಒಂದು ನಿಮಿಷ ಈ ಪಂದ್ಯ ನಡೆಯಿತು. ಪಂದ್ಯದ ಒಂಬತ್ತು ಬ್ರೇಕ್ ಪಾಯಿಂಟ್ಸ್ ಪೈಕಿ ಐದನ್ನು ಸಾನಿಯಾ–ಕ್ರಿಸ್ಟಿನಾ ತಮ್ಮದಾಗಿಸಿಕೊಂಡರು.

ನಾಲ್ಕರ ಘಟ್ಟದಲ್ಲಿ ಭಾರತ-ಅಮೆರಿಕ ಜೋಡಿಗೆ ನಾರ್ವೆಯ ಉಲ್‌ರಿಕ್ ಐಕರಿ ಮತ್ತು ಅಮೆ ರಿಕದ ಕ್ಯಾಥರೀನ್ ಹ್ಯಾರಿಸನ್ ಸವಾಲು ಎದುರಾಗಿದೆ.

ಎರಡನೇ ಸುತ್ತಿನ ಸೆಣಸಾಟದಲ್ಲಿಯೂ ಸಾನಿಯಾ–ಕ್ರಿಸ್ಟಿನಾ ಅವರು ಒಂದೂ ಸೆಟ್ ಬಿಟ್ಟುಕೊಡದೆ ಜಾರ್ಜಿಯಾದ ಒಕ್ಸಾನಾ ಮತ್ತು ರುಮೇನಿಯಾದ ಆ್ಯಂಡ್ರಿಯಾ ಮಿಟು ಎದುರು ಗೆಲುವು ಸಾಧಿಸಿದ್ದರು.



ಸಾನಿಯಾ ಮಿರ್ಜಾ– ಎಎಫ್‌ಪಿ ಚಿತ್ರ

ಕ್ರಿಕೆಟ್: ಪೂಜಿತಾಗೆ 4 ವಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜಿತಾ (20ಕ್ಕೆ 4) ಹಾಗೂ ಚಂದಶಿ ಕೃಷ್ಣಮೂರ್ತಿ (11ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ‘ಬಿ’ ತಂಡ ಗೆಲುವು ಸಾಧಿಸಿತು.

ಇಲ್ಲಿ ನಡೆದ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಂತರವಲಯ 19 ವರ್ಷದೊಳಗಿನ ಮಹಿಳೆಯರ ಕ್ರಿಕೆಟ್ ಟೂರ್ನಿಯಲ್ಲಿ ‘ಬಿ’ ತಂಡದ ಆಟಗಾರ್ತಿಯರು ಶುಕ್ರವಾರ ‘ಎ’ ತಂಡದ ಎದುರು ಎರಡು ವಿಕೆಟ್‌ಗಳ ಜಯ ದಾಖಲಿಸಿತು. ಮತ್ತೊಂದು ಪಂದ್ಯದಲ್ಲಿ ‘ಡಿ’ ತಂಡ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರುಗಳು: ‘ಎ’ ತಂಡ: 45.1 ಓವರ್‌ಗಳಲ್ಲಿ 159 (ಪ್ರೇರಣಾ ಜಿ.ಆರ್. 37, ಸೌಮ್ಯಾ ವರ್ಮಾ 36, ಹಿಮಾ ಆರ್. 22; ಪೂಜಿತಾ ಜಿ. 20ಕ್ಕೆ 4, ಚಂದಶಿ ಕೃಷ್ಣಮೂರ್ತಿ 11ಕ್ಕೆ 3). **‘ಬಿ’ ತಂಡ:** 38.1 ಓವರ್‌ಗಳಲ್ಲಿ 160 (ಶ್ಲೋಕಾ ಕಿಶೋರ್ 20, ಅನನ್ಯಾ ಹೆಗ್ಡೆ 20, ಚಂದಶಿ ಕೃಷ್ಣಮೂರ್ತಿ ಔಟಾಗದೆ 23; ಸವಿ ಸಿ.ಎಸ್. 19ಕ್ಕೆ2, ಶ್ರದ್ಧಾ ಎಸ್. 17ಕ್ಕೆ 3, ಸ್ನೇಹಾ ಜೆ. 24ಕ್ಕೆ 2). **ಫಲಿತಾಂಶ:** ‘ಬಿ’ ತಂಡಕ್ಕೆ ಎರಡು ವಿಕೆಟ್‌ಗಳ ಜಯ.

‘ಡಿ’ ತಂಡ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 198 (ರಕ್ಷಿತಾ ನಾಯಕ 39, ನಿಕಿ ಪ್ರಸಾದ್ 60, ಅಂಜಲಾ ಜೇಮ್ಸ್ ಔಟಾಗದೆ 22; ರೀಮಾ ಫರೀದ್ 21ಕ್ಕೆ 3, ಪೂಜಾ ಕುಮಾರಿ 26ಕ್ಕೆ 2). ‘ಸಿ’ ತಂಡ’: 49 ಓವರ್‌ಗಳಲ್ಲಿ 173 (ಸಾಧನಾ ಎಂ.ನಾಯರ್ 22, ಪೂಜಾ ಕುಮಾರಿ 55, ರೀಮಾ ಫರೀದ್ 30; ಅಂಜಲಾ ಜೇಮ್ಸ್ 23ಕ್ಕೆ 3, ಭೂಮಿಕಾ 40ಕ್ಕೆ 2, ಚಿಣ್ಮಯಿ ಶಿವಾನಂದ 33ಕ್ಕೆ 3). ಫಲಿತಾಂಶ: ‘ಡಿ’ ತಂಡಕ್ಕೆ 25 ರನ್‌ಗಳ ಜಯ.

ತಿರುಗೇಟು ನೀಡುವ ಛಲದಲ್ಲಿ ಭಾರತ; ರೋಹಿತ್ ಶರ್ಮಾ ಅರ್ಧಶತಕ

ಮರಳಿ ಅರಳಿದ ಚೇತೇಶ್ವರ್ ಪೂಜಾರ

ಲೀಡ್ಸ್ (ಪಿಟಿಐ): ಕಳೆದ ಹಲವು ಪಂದ್ಯಗಳಿಂದ ಬ್ಯಾಟಿಂಗ್ ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದ ಚೇತೇಶ್ವರ್ ಪೂಜಾರ ಶುಕ್ರವಾರ ಇಲ್ಲಿ ಸಫಲರಾದರು.

ಆತಿಥೇಯ ಇಂಗ್ಲೆಂಡ್ ಮುಂದೊಡ್ಡಿರುವ ಬೃಹತ್ ಸವಾಲು ಮೀರಿ ನಿಲ್ಲುವ ಛಲದಲ್ಲಿರುವ ಭಾರತಕ್ಕೆ ಭರವಸೆ ಮೂಡಿಸಿದರು. ಮೂರನೇ ದಿನದಾಟದ ಕೊನೆಯಲ್ಲಿ ಪೂಜಾರ (ಬ್ಯಾಟಿಂಗ್ 91; 180ಎ, 15ಬೌಂಡರಿ) ಮತ್ತು ನಾಯಕ ವಿರಾಟ್ ಕೊಹ್ಲಿ (ಬ್ಯಾಟಿಂಗ್ 45; 94ಎ, 6ಬೌಂ) ಕ್ರೀಸ್‌ನಲ್ಲಿದ್ದಾರೆ. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರು ಗಳಿಸಿರುವ 99 ರನ್‌ಗಳಿಂದಾಗಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ 80 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 215 ರನ್ ಗಳಿಸಿದೆ.

ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 432 ರನ್ ಗಳಿಸಿತು. ಅದರೊಂದಿಗೆ 354 ರನ್‌ಗಳ ಮುನ್ನಡೆ ಗಳಿಸಿತು. ಇದಕ್ಕೆ ಉತ್ತರವಾಗಿ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ ದಿಟ್ಟ ಹೋರಾಟ ನಡೆಸಿದೆ. ಆತಿಥೇಯರ ಬಾಕಿ ಚುಕ್ತಾ ಮಾಡಲು ಭಾರತ ತಂಡವು ಇನ್ನೂ 139 ರನ್ ಗಳಿಸಬೇಕು. ವಿರಾಟ್ ಕೊಹ್ಲಿ ಬಳಗವು ಮೊದಲ ಇನಿಂಗ್ಸ್‌ನಲ್ಲಿ 78 ರನ್‌ಗಳಿಗೆ ಕುಸಿದಿತ್ತು.

ರೋಹಿತ್–ಪೂಜಾರಜೊತೆಯಾಟ: ಎರಡನೇ ಇನಿಂಗ್ಸ್ ಆರಂಭಿಸಿದ ರೋಹಿತ್ ಮತ್ತು ರಾಹುಲ್ ಎಚ್ಚರಿಕೆಯ ಆಟವಾಡಿದರು. ರೋಹಿತ್ ಆಟದಲ್ಲಿ ಆತ್ಮವಿಶ್ವಾಸದ ಸೆಲೆ ಇತ್ತು. ಆದರೆ ರಾಹುಲ್ ಸ್ವಲ್ಪ ಕಷ್ಟಪಟ್ಟರು. 19ನೇ ಓವರ್‌ನಲ್ಲಿ ರಾಹುಲ್ ವಿಕೆಟ್ ಗಳಿಸುವಲ್ಲಿ ಕ್ರೇಗ್ ಸಫಲರಾದರು.

ರೋಹಿತ್ ಜೊತೆಗೂಡಿದ ಪೂಜಾರ ಎದುರಾಳಿ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಪೇರಿಸಿದರು. 38ನೇ ಓವರ್‌ನಲ್ಲಿ ರೋಹಿತ್ ಅರ್ಧಶತಕದ ಗಡಿ ದಾಟಿದರು. ಅದಕ್ಕಾಗಿ ಅವರು 125 ಎಸೆತಗಳನ್ನು ಆಡಿದರು.

ಇವರಿಬ್ಬರ ಜೊತೆಯಾಟದಿಂದಾಗಿ ತಂಡವು ಚಹಾ ವಿರಾಮದ ವೇಳೆಗೆ 112 ರನ್ ಗಳಿಸಿತ್ತು. ವಿರಾಮದ ನಂತರದ ಆರಂಭದಲ್ಲಿಯೇ ರೋಹಿತ್ ಶರ್ಮಾ ವಿಕೆಟ್ ಗಳಿಸಿದ ರಾಬಿನ್ಸನ್ ಈ ಜೊತೆಯಾಟವನ್ನು ಮುರಿದರು.

ಈ ಹಂತದಲ್ಲಿ ಪೂಜಾರ ಜೊತೆಗೂಡಿದ ನಾಯಕ ವಿರಾಟ್ ಕೊಹ್ಲಿ ಎಚ್ಚರಿಕೆಯ ಆಟವಾಡಿದರು. ಸುಮಾರು ಒಂದೂವರೆ ವರ್ಷದಿಂದ ಟೆಸ್ಟ್ ಕ್ರಿಕೆಟ್‌ನಲ್ಲಿ ಶತಕ ದಾಖಲಿಸದ ವಿರಾಟ್, ಇಲ್ಲಿ ಅರ್ಧಶತಕದ ಸನಿಹ ತಲುಪಿದರು.

ಪೂಜಾರ 91 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದರು. ಎದುರಾಳಿ ಬೌಲರ್‌ಗಳ ಬೌನ್ಸರ್‌ಗಳಿಗೆ ಮತ್ತು ಶಾಟ್ ಪಿಚ್ ಎಸೆತಗಳಿಗೆ ಪೂಜಾರಾ ಪುಲ್‌ಶಾಟ್‌ಗಳ ಉತ್ತರ ನೀಡಿದರು.



ಚೇತೇಶ್ವರ್ ಪೂಜಾರ –ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 78

ಇಂಗ್ಲೆಂಡ್ (ಮೊದಲ ಇನಿಂಗ್ಸ್) 432 (132.2 ಓವರ್)

(ಗುರುವಾರ 8ಕ್ಕೆ 423)

ಕ್ರೇಗ್ ಎಲ್‌ಬಿಡಬ್ಲ್ಯು ಬಿ ಶಮಿ 32 (42 ಎ, 4x6), ರಾಬಿನ್ಸನ್ ಬಿ ಬೂಮ್ರಾ 0 (15 ಎ), ಆ್ಯಂಡರ್ಸನ್ ಔಟಾಗದೆ 0 (1ಎ)

ಇತರೆ (ಬೈ 8, ಲೆಗ್‌ಬೈ 4, ನೋಬಾಲ್ 8, ವೈಡ್ 1) 21

ವಿಕೆಟ್ ಪತನ: 9–431 (ಕ್ರೇಗ್ ಓವರ್ಟನ್, 131.5) 10–432 (ಒಲಿ ರಾಬಿನ್ಸನ್, 132.2)

ಬೌಲಿಂಗ್: ಇಶಾಂತ್ ಶರ್ಮಾ 22–0–92–0, ಜಸ್‌ಪ್ರೀತ್ ಬೂಮ್ರಾ 27.2–10–59–2, ಮೊಹಮ್ಮದ್ ಶಮಿ 28–8–95–4, ಮೊಹಮ್ಮದ್ ಸಿರಾಜ್ 23–3–86–2, ರವೀಂದ್ರ ಜಡೇಜ 32–8–88–2

ಭಾರತ (ಎರಡನೇ ಇನಿಂಗ್ಸ್) 2 ವಿಕೆಟ್‌ಗಳಿಗೆ 215 (80 ಓವರ್)

ರೋಹಿತ್ ಎಲ್‌ಬಿಡಬ್ಲ್ಯು ಬಿ ರಾಬಿನ್ಸನ್ 59 (156ಎ, 4X7, 6X1), ರಾಹುಲ್ ಸಿ ಬೇರ್‌ಸ್ಟೊ ಬಿ ಓವರ್ಟನ್ 8 (54ಎ), ಪೂಜಾರ ಬ್ಯಾಟಿಂಗ್ 91 (180 ಎ, 4X15), ವಿರಾಟ್ ಬ್ಯಾಟಿಂಗ್ 45 (94 ಎ, 4X6)

ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 4, ವೈಡ್ 2) 12

ವಿಕೆಟ್ ಪತನ: ವಿಕೆಟ್ ಪತನ: 1–34 (ಕೆ.ಎಲ್.ರಾಹುಲ್, 18.6), 2–116 (ರೋಹಿತ್ ಶರ್ಮಾ, 47.1)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 19–8–51–0, ಒಲಿ ರಾಬಿನ್ಸನ್ 18–4–40–1, ಕ್ರೇಗ್ ಓವರ್ಟನ್ 17–6–35–1, ಸ್ಯಾಮ್ ಕರನ್ 9–1–40–0, ಮೋಯಿನ್ ಅಲಿ 11–1–28–0, ಜೋ ರೂಟ್ 6–1–15–0

ದಾಂಪತ್ಯ ಜೀವನಕ್ಕೆ ಕ್ರಿಕೆಟಿಗ ಸಮರ್ಥ್–ಉತ್ತರಾ ಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಆರ್. ಸಮರ್ಥ್ ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿ ಉತ್ತರಾ-ಪ್ರಕಾಶ್ ಅವರು ಶುಕ್ರವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಕರ್ನಾಟಕ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಹೋದ ಋತುವಿನಲ್ಲಿ ಸೀಮಿತ ಓವರ್‌ಗಳ ಟೂರ್ನಿಯಲ್ಲಿ ನಾಯಕತ್ವ ವಹಿಸಿದ್ದರು. ಉತ್ತರಾ ಪ್ರಕಾಶ್ ಅವರು ಸದ್ಯ ಐಟಿಡಬ್ಲ್ಯು ಉದ್ಯೋಗಿಯಾಗಿದ್ದಾರೆ. ವಿವಾಹ ಸಮಾರಂಭದಲ್ಲಿ ಉಭಯ ಕುಟುಂಬಗಳ ಸದಸ್ಯರು ಹಾಜರಿದ್ದರು.



ಆರ್. ಸಮರ್ಥ್–ಉತ್ತರಾ ಪ್ರಕಾಶ್

ಸುರುಳಿ ಬಿಚ್ಚುತ್ತಿರುವ ಕೋಚ್ ಲೀಲಾವಿಲಾಸ

● ರೋಷನ್ ತ್ಯಾಗರಾಜನ್

ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ಬಂಧನಕ್ಕೆ ಒಳಗಾಗಿದ್ದ ಬ್ಯಾಸ್ಕೆಟ್ ಬಾಲ್ ಕೋಚ್ ಪ್ರಮೋದ್ ‘ಲೀಲೆ’ಗಳ ಸುರುಳಿ ಈಗ ಒಂದೊಂದಾಗಿ ಬಿಚ್ಚತೊಡಗಿದೆ. ತರಬೇತಿಯ ಸಂದರ್ಭದಲ್ಲಿ ಆತನ ಅಸಹ್ಯ ವರ್ತನೆಗೆ ನೊಂದವರು ಕಣ್ಣೀರು ಹಾಕುತ್ತಿದ್ದಾರೆ.



ಪ್ರಮೋದ್

ನಗರದ ಕ್ಲಬ್ ಒಂದರ ಕೋಚ್ ಆಗಿದ್ದ ವೇಳೆ ಪ್ರಮೋದ್ ಎಸಗಿದ ಲೈಂಗಿಕ ಕಿರುಕುಳದ ಬಗ್ಗೆ 20ರಷ್ಟು ಆಟಗಾರ್ತಿಯರ ಆರೋಪಗಳ ಹಿನ್ನೆಲೆಯಲ್ಲಿ ಪೋಕ್ಸೊ ಕಾಯ್ದೆಯಡಿ ಕಳೆದ ಸೆಪ್ಟೆಂಬರ್ ನಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಒಂದು ತಿಂಗಳು ಪೊಲೀಸರ ವಶದಲ್ಲಿದ್ದು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ. ಆದರೆ ಈಗ ತಲೆಮರೆಸಿಕೊಂಡಿದ್ದು ಯಾರ ಕಣ್ಣಿಗೂ ಬೀಳದಂತೆ ತಿರುಗಾಡುತ್ತಿದ್ದಾನೆ. ಪೊಲೀಸರಿಗೂ ಆತನ ಸುಳಿವು ಲಭ್ಯ ಇಲ್ಲ.

ಈ ನಡುವೆ ಆತ ತಮ್ಮನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದ ಬಗೆಯನ್ನು ಕೆಲವು ಆಟಗಾರ್ತಿಯರು ವಿವರಿಸಿದ್ದಾರೆ.

ಆರಂಭದಲ್ಲಿ ಕೆಲವು ಕಾಲೇಜುಗಳಲ್ಲಿ ಕೋಚ್ ಆಗಿದ್ದ ಪ್ರಮೋದ್ ನಂತರ ಕ್ಲಬ್ ಒಂದರಲ್ಲಿ ಸೇರಿಕೊಂಡ. ಅಲ್ಲಿ ತರಬೇತಿಯ ನಂತರ ಆಟಗಾರ್ತಿಯರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ ಎನ್ನಲಾಗಿದೆ.

ಕ್ರೀಡಾಂಗಣಕ್ಕೆ ಚೋಪ್ರಾ ಹೆಸರು

ಪುಣೆ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ, ದೇಶದ ರಕ್ಷಣಾ ಪಡೆಗಳಲ್ಲಿ ಕಾರ್ಯನಿರ್ವಹಿಸುವ ಕ್ರೀಡಾಪಟುಗಳನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಇಲ್ಲಿಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ (ಎಎಸ್‌ಐ) ಸನ್ಮಾನಿಸಿದರು.

ಎಎಸ್‌ಐ ಕ್ರೀಡಾಂಗಣಕ್ಕೆ ಟೋಕಿಯೋ ಕೂಟದ ಜಾವೆಲಿನ್ ಥ್ರೋದಲ್ಲಿ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಹೆಸರು ಇರಿಸಲಾಯಿತು.

ನೀರಜ್, ತರುಣದೀಪ್ ರಾಯ್, ಪ್ರವೀಣ್ ಜಾಧವ್, ಅಮಿತ್, ಮನೀಷ್ ಕೌಶಿಕ್, ಸತೀಶ್ ಕುಮಾರ್, ದೀಪಕ್ ಪೂನಿಯಾ, ಅರ್ಜುನ್ ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್, ವಿಷ್ಣು ಸರವಣನ್, ಕೋಚ್‌ಗಳಾದ ಸಿ.ಎ.ಕುಟ್ಟಪ್ಪ, ಚೋಟೆ ಲಾಲ್ ಯಾದವ್ ಅವರನ್ನು ಸನ್ಮಾನಿಸಲಾಯಿತು.